# ಅಧ್ಯಾಯ-೧೩

# ಶಿಕ್ಷಣ ಮತ್ತು ಕ್ರೀಡೆ

ಅವಿಭಜಿತ ಮೈಸೂರು ಜಿಲ್ಲೆಯಿಂದ ನಾಲ್ಕು ತಾಲೂಕುಗಳನ್ನೊಳಗೊಂಡ (ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಯಳಂದೂರು) ಹೊಸದಾಗಿ ರಚಿತವಾದ ಚಾಮರಾಜನಗರ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ದಿನಾಂಕ ೨೨-೦೬-೧೯೯೮ ರಿಂದ ಅಸ್ತಿತ್ವಕ್ಕೆ ಬಂದು ಶಿಕ್ಷಣ ಇಲಾಖೆಯ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಜಿಲ್ಲಾ ಮಟ್ಟದ ಅಧಿಕಾರಿಗಳಾಗಿ ಕರ್ತವ್ಯನಿರ್ವಹಿಸುತ್ತಿದ್ದು, ಇವರ ಅಧೀನದಲ್ಲಿ ನಾಲ್ಕು ತಾಲೂಕು ಕೇಂದ್ರಗಳಲ್ಲಿ ಹಾಗೂ ಕೊಳ್ಳೇಗಾಲ ತಾಲೂಕನ್ನು ಶೈಕ್ಷಣಿಕವಾಗಿ ಎರಡು ವಲಯಗಳಾಗಿ ವಿಭಜಿಸಿದ್ದು, ಪ್ರತಿ ವಲಯಕ್ಕೆ ಒಬ್ಬೊಬ್ಬರು ಕ್ಷೇತ್ರ ಶಿಕ್ಷಣಾಧಿಕಾರಿಗಳಂತೆ ಒಟ್ಟು ಐದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕರ್ತವ್ಯನಿರ್ವಹಿಸುತ್ತಿರುತ್ತಾರೆ. ೨೦೧೦-೧೧ರ ಸಾಲಿನಲ್ಲಿ ಜಿಲ್ಲೆಯಲ್ಲಿ ೭೭೧ ಸರ್ಕಾರಿ, ೪೦ ಅನುದಾನಿತ ಹಾಗೂ ೧೦೮ ಅನುದಾನರಹಿತ ಶಾಲೆಗಳೂ ಸೇರಿ ಒಟ್ಟು ೯೧೮ ಪ್ರಾಥಮಿಕ ಶಾಲೆಗಳು, ೮೦ ಸರ್ಕಾರಿ, ೩೭ ಅನುದಾನಿತ ಹಾಗೂ ೬೩ ಅನುದಾನರಹಿತ ಶಾಲೆಗಳೂ ಸೇರಿ ಒಟ್ಟು ೧೮೦ ಪ್ರೌಢಶಾಲೆಗಳು ಅಂದರೆ ಒಟ್ಟು ೧೦೯೮ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು.

ನೂತನ ಚಾಮರಾಜನಗರ ಜಿಲ್ಲೆಯ ಶೈಕ್ಷಣಿಕ ಮತ್ತು ಕ್ರೀಡಾ ಕ್ಷೇತ್ರಗಳ ಒಂದು ದಶಕದ ಸಾಧನೆಯನ್ನು ಅವಲೋಕಿಸಿದಾಗ, ಉನ್ನತ ಧ್ಯೇಯ ಮತ್ತು ಉದ್ದೇಶಗಳನ್ನೊಳಗೊಂಡ ಹಲವಾರು ಸರಕಾರಿ ಹಾಗೂ ಖಾಸಗಿ ಶೈಕ್ಷಣಿಕ ಯೋಜನೆಗಳು ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವುದು ಗೋಚರವಾಗುತ್ತದೆ. ಇತರೆ ಜಿಲ್ಲೆಗಳಲ್ಲಿ ಇರುವಂತೆ, ಇಲ್ಲಿನ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ ಜಿಲ್ಲಾ ಯುವಜನ ಮತ್ತು ಕ್ರೀಡಾಧಿಕಾರಿಯ ಆಡಳಿತದಲ್ಲಿ ಒಂದು ಕಛೇರಿ ಸ್ಥಾಪಿಸಲ್ಪಟ್ಟಿದ್ದು, ಇದು ಜಿಲ್ಲೆಯ ಕ್ರೀಡಾ ಚಟುವಟಿಕೆಗಳು ಸಕಾಲಿಕವಾಗಿ, ಎಲ್ಲರಿಗೂ ತಲುಪುವಂತೆ ಕಾರ್ಯಕ್ರಮಗಳನ್ನು ರೂಪಿಸಿ ಹಮ್ಮಿಕೊಂಡು ನಡೆಸುತ್ತಿರುವುದು ತಿಳಿದುಬರುತ್ತದೆ. ಶಾಸನೋಕ್ತ ಹಾಗೂ ಐತಿಹಾಸಿಕ ಹಿನ್ನೆಲೆಗಳನ್ನು ಗಮನಿಸಿದಾಗ, ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರದ ಶೈಕ್ಷಣಿಕ ಪ್ರಗತಿ ಹಾಗೂ ಪ್ರವೃತ್ತಿಗಳನ್ನು ಅಂತೆಯೇ ಗುರುತಿಸುವುದು ಅವಶ್ಯಕವೂ ಸಂದರ್ಭೋಚಿತವೂ ಆಗುತ್ತದೆ.

*ಜಿಲ್ಲೆಯ ಸಾಮಾನ್ಯ ಮಾಹಿತಿ*

| ಕ್ರಮ ಸಂಖ್ಯೆ | ಬ್ಲಾಕ್ ಹೆಸರು | ಸಿ.ಡಿ.ಬ್ಲಾಕ್ | ಗ್ರಾಮ ಪಂಚಾಯತಿ | ತಾಲೂಕು ಪಂಚಾಯತಿ | ಜಿಲ್ಲಾ ಪಂಚಾಯತಿ | ಹೋಬಳಿ | ಹಳ್ಳಿಗಳು | ಜನವಸತಿ ಪ್ರದೇಶ |
|---|---|---|---|---|---|---|---|---|
| ೧. | ಚಾಮರಾಜನಗರ | ೧ | ೪೨ | ೨೮ | ೦೭ | ೦೫ | ೨೭೪ | ೨೮೬ |
| ೨. | ಗುಂಡ್ಲುಪೇಟೆ | ೧ | ೩೦ | ೧೯ | ೦೫ | ೦೪ | ೧೮೭ | ೨೦೬ |
| ೩. | ಹನೂರು | ೦ | ೨೧ | ೦ | ೦೪ | ೦೩ | ೨೬೩ | ೩೪೨ |
| ೪. | ಕೊಳ್ಳೇಗಾಲ | ೧ | ೧೬ | ೨೭ | ೦೩ | ೦೨ | ೮೪ | ೧೩೯ |
| ೫. | ಯಳಂದೂರು | ೧ | ೧೧ | ೧೧ | ೦೨ | ೦೨ | ೫೦ | ೫೯ |
| | ಒಟ್ಟು | ೪ | ೧೨೦ | ೮೫ | ೨೧ | ೧೬ | ೮೫೮ | ೧೦೩೧ |

*ಆಧಾರ: ೨೦೧೧–೧೨ರ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ವಾರ್ಷಿಕ ವರದಿ*

## ಶಾಸನೋಕ್ತ ಶಿಕ್ಷಣ ಕೇಂದ್ರಗಳು

ಗಂಗರ ಕಾಲದಲ್ಲಿ ಸ್ಥಾಪನೆಗೊಂಡ ಅಗ್ರಹಾರಗಳ ಪೈಕಿ ಶಾಸನೋಕ್ತವಾಗಿ ಉದಾಹರಿಸಬಹುದಾದುವೆಂದರೆ, ಯಳಂದೂರು ತಾಲೂಕಿನ ಮದ್ದೂರು (೧೦ನೇ ಶತಮಾನ). ಚೋಳ ದೊರೆಗಳು ವಿದ್ಯಾದಾನಕ್ಕಾಗಿ ಅಗ್ರಹಾರಗಳನ್ನು ಸ್ಥಾಪಿಸುವ ಸಂಪ್ರದಾಯವನ್ನು ಹೊಂದಿದ್ದರು. ಇಂತಹವುಗಳಲ್ಲಿ ಕೆಂಪನಪುರದ ೯೧೧ರ ಶಾಸನ ವಿದ್ಯಾದಾನವಾಗಿ ಆ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದ್ದರೆ, ಸುಮಾರು ೧೦ನೇ ಶತಮಾನಕ್ಕೆ ಸೇರಿದ ಬೆಳಚಲವಾಡಿ ಶಾಸನ ಗ್ರಾಮದ ಮಹಾಜನರಿಗೆ ನೆಲ್ಲಕ್ಕಿಯನ್ನು ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಅಗರದ ಸುಮಾರು ೧೨ನೇ ಶತಮಾನದ ಶಾಸನ ದುರ್ಗಯಾರ್ ಅಗ್ರಹಾರವನ್ನು ಸ್ಥಾಪಿಸಿ ೧೦೮ ಬ್ರಾಹ್ಮಣರನ್ನು ಶಾಸ್ತ್ರ ಬೋಧನೆಗೆಂದು ನೇಮಿಸಿದ್ದನ್ನು ದಾಖಲಿಸಿದೆ. ಕೊಳ್ಳೇಗಾಲದ ತ್ರಿಭುವನದೇವಿ ಚತುರ್ವೇದಮಂಗಳಂ, ಕೊಳ್ಳೇಗಾಲದ ಬಳಿಯ ಮುಡಿಗೊಂಡ ಮತ್ತು ಮೊದಲನೇ ಕುಲೋತ್ತುಂಗ ಸ್ಥಾಪಿಸಿದ ಅಗರ ಮುಂತಾದವನ್ನು ಅಗ್ರಹಾರ ಸ್ಥಾಪನೆಗೆ ಸಂಬಂಧಿಸಿದಂತೆ ಉದಾಹರಿಸಬಹುದಾಗಿದೆ. ನೂತನ ಅಗ್ರಹಾರಗಳ ಸ್ಥಾಪನೆಯೇ ಅಲ್ಲದೆ, ವಿನಾಶದ ಅಂಚಿನಲ್ಲಿದ್ದ ಹಲವಾರು ಅಗ್ರಹಾರಗಳನ್ನು ಪುನರುಜ್ಜೀವನಗೊಳಿಸಿದ ಕೀರ್ತಿ ಚೋಳರಿಗೆ ಸಲ್ಲುತ್ತದೆ. ಅಂತಹವುಗಳ ಉದಾಹರಣೆಗಳೆಂದರೆ– ಯಳಂದೂರು ತಾಲೂಕಿನ ಹೊನ್ನೂರು ಅಗ್ರಹಾರ (೧೧೯೧) ಬೈರಮಂಗಲ ಬಳಿಯ ಹೊಸೂರು (೧೨೮೩) ಹಾಗೂ ಅಂಬಾಲೆ (ಅಂಬಲೆ) ಅಗ್ರಹಾರ (೧೨೪೪). ಇದೇ ರೀತಿ ಸತ್ತೇಗಾಲದ ೧೩೨೧ರ ಶಾಸನ ಮುಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ಮಾಧವಜೀಯನು ಕುನ್ನೂರು ಗ್ರಾಮವನ್ನು ಪ್ರಸ್ನನ ಮಾಧವಪುರವಾದ ಕುಡಕೂರಿನ ಮಹಾಜನಗಳಿಗೆ ಪುನರ್‌ದತ್ತಿ ನೀಡಿದ ಅಂಶವನ್ನು ತಿಳಿಸುತ್ತದೆ. ಸುಮಾರು ೧೩೪೫ರ ಹರದನಹಳ್ಳಿ ತಾಮ್ರಶಾಸನ, ಗುರು ಗೋಸಲಾರ್ಯನ ಸಾನ್ನಿಧ್ಯದಲ್ಲಿ ಐದು ಮಠಗಳಿಗೆ ಮಠಾಧಿಪತಿಗಳನ್ನು ನೇಮಿಸಿದ ಅಂಶವನ್ನು ಅರುಹುತ್ತಾದರೂ, ಇದೊಂದು ಕೂಟಶಾಸನವೆಂದು ಶಾಸನ ತಜ್ಞರು ಅಭಿಪ್ರಾಯಪಡುತ್ತಾರೆ.

ವಿಜಯನಗರದ ಅರಸರ ಕಾಲಕ್ಕೆ ಶೈಕ್ಷಣಿಕ ಪ್ರಗತಿ ಉತ್ತಮಗೊಂಡು, ೧೩೭೨ರಲ್ಲಿ ಇಂದಿನ ಗುಂಡ್ಲುಪೇಟೆಯಲ್ಲಿ ವಿಜಯಪುರ ಅಗ್ರಹಾರ ಸ್ಥಾಪನೆಯಾಯಿತೆಂದು ಶಾಸನದಿಂದ ತಿಳಿದುಬರುತ್ತದೆ. ಇದೇ ತಾಲೂಕಿನ ಸೋಮನಹಳ್ಳಿಯಲ್ಲಿ ೧೪೨೨ರಲ್ಲಿ 'ಪ್ರೌಢದೇವರಾಯರಪುರ' ಅಗ್ರಹಾರ, ಕಡಸೂರಿನಲ್ಲಿ ೧೪೪೮ರಲ್ಲಿ, 'ಕೃಷ್ಣರಾಯಪುರ' ಅಗ್ರಹಾರ, ಬಿದರೂರಿನ ೧೫೧೩ರ, ಅಗ್ರಹಾರಗಳು ಸ್ಥಾಪನೆಯಾದ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ಮೈಸೂರು ಅರಸರ ಆಳ್ವಿಕೆಯಲ್ಲಿಯೂ ಅಗ್ರಹಾರಗಳ ಸ್ಥಾಪನಾ ಕಾರ್ಯ ಮುಂದುವರೆದು, ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ರಾಣಿಯರ ಸ್ಮರಣಾರ್ಥ ಜಿಲ್ಲೆಯ ಹಲವೆಡೆ

ಅಗ್ರಹಾರಗಳನ್ನು ಸ್ಥಾಪಿಸಿದ ಸಂಗತಿ ತಿಳಿದುಬರುತ್ತದೆ. ಹೊಂಗನೂರಿನ ೧೫೧೭ರ ಶಾಸನ ಹೊಂಗನೂರು ಅಗ್ರಹಾರದ ಮಹಾಜನಗಳಿಗೆ ಆ ಅಗ್ರಹಾರವನ್ನು ಪುನರ್‌ಭರಣ ಮಾಡಿದ ಅಂಶವನ್ನು ದಾಖಲಿಸಿದರೆ, ಆಲಕೇರೆಯ ೧೫೯೯ರ ಶಾಸನ, ಸಾಳುವ ಗೋವಿಂದರಾಜನ ಶ್ರೇಯೋಭಿವೃದ್ಧಿಗಾಗಿ ಆಲಕೆರೆ ಹಾಗೂ ಬೆನಕೆರೆಯ ಮಹಾಜನಗಳಿಗೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಹಳ್ಳದಪುರದ ೧೫೫೦ರ ಶಾಸನ ಹಳ್ಳದಪುರ ಅಗ್ರಹಾರವನ್ನು ಲಕ್ಷ್ಮೀಪತಯ್ಯನವರಿಗೆ ಸರ್ವಮಾನ್ಯವಾಗಿ ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ. ಮೈಸೂರು ಅರಸರ ಕಾಲಕ್ಕೆ ಸೇರಿದ ಹರದನಹಳ್ಳಿಯ ೧೭೪೪ರ ತಾಮ್ರಶಾಸನ ತಿರುಮಕೂಟದ (ತಿರುಮಕೂಡಲು)ಲ್ಲಿ ಹಂಪಾಪುರ ಅಗ್ರಹಾರವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ.

## ಧಾರ್ಮಿಕ ಸಂಸ್ಥೆಗಳಲ್ಲಿ ಶಿಕ್ಷಣ

ಜೈನ ಹಾಗೂ ವೀರಶೈವ ಮಠಗಳೂ ಸಹ ಶಿಕ್ಷಣ ರಂಗಕ್ಕೆ ಉತ್ತಮ ಸೇವೆ ಸಲ್ಲಿಸಿದುದಾಗಿ ತಿಳಿದುಬರುತ್ತದೆ. ಇವುಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ, ಊಟೋಪಚಾರಗಳು ಲಭ್ಯವಿದ್ದವು. ಮಾದೇಶ್ವರನಂತಹ ವೀರಶೈವ ಪ್ರಮುಖರು ಸೋಲಿಗರ ಕೋಡುಗಳಿಗೆ ಖುದ್ದಾಗಿ ಭೇಟಿ ನೀಡಿ, ಅವರಿಗೆ ಶಿಕ್ಷಣ ನೀಡಿ, ಅವರನ್ನು ಅರ್ಚಕರನ್ನಾಗಿಸಿದ್ದರೆಂದು ತಿಳಿದುಬರುತ್ತದೆ. ಹದಿನೈದನೇ ಶತಮಾನದ ನಂತರ ಕಂಡುಬರುವ ನೂರಾರು ವೀರಶೈವ ಮಠಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದವೆಂದೂ ತಿಳಿದುಬರುತ್ತದೆ. ಅಂದಿನ ಶಾಲೆಗಳನ್ನು 'ಕೂಲಿಮಠ' ಎಂದು ಕರೆಯಲಾಗುತ್ತಿದ್ದು, ಇವುಗಳಲ್ಲಿ ಮಕ್ಕಳಿಗೆ ಹರಡಿದ್ದ ಮರಳಿನಲ್ಲಿ ಬೆರಳಿನ ಸಹಾಯದಿಂದ ಅಕ್ಷರಗಳನ್ನು ಬರೆಯಲು ಹೇಳಿಕೊಡಲಾಗುತ್ತಿತ್ತು. ಹಲವೆಡೆ ಮಕ್ಕಳೇ ಮರಳನ್ನು ಚೀಲದಲ್ಲಿ ಶಾಲೆಗೆ ಒಯ್ಯಬೇಕಾಗಿದ್ದುದರಿಂದ "ಶಾಲೆಗೆ ಮಣ್ಣು ಹೊತ್ತಿದ್ದೆ" ಎಂಬ ಪ್ರಯೋಗ ಚಾಲ್ತಿಗೆ ಬಂದಿತು. ಅಗ್ರಹಾರ ಮತ್ತು ವೀರಶೈವ ಮಠಗಳಲ್ಲಿ ಹಸ್ತಪ್ರತಿಗಳನ್ನು ಓಲೆಗರಿಗಳ ಮೇಲೆ ಬರೆಯುವ "ಓಲೆಕಾಯಕ" ನಡೆಯುತ್ತಿತ್ತು.

## ಮುಸಲ್ಮಾನರ ಶಿಕ್ಷಣ

ಹೈದರಾಲಿ ಹಾಗೂ ಟಿಪ್ಪುಸುಲ್ತಾನ್ ಆಳ್ವಿಕೆಯಲ್ಲಿ ಮುಸಲ್ಮಾನರ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯಾಯಿತು. ಟಿಪ್ಪುವಿನ ಜೀವನ ಚರಿತ್ರೆ ಬರೆದಿರುವ ಕಿರ್ಮಾನಿ ತಿಳಿಸುವಂತೆ ಟಿಪ್ಪು ಪ್ರತೀ ಊರಿನಲ್ಲಿ ಮಸೀದಿಯನ್ನು ಕಟ್ಟಿಸಿ, ಇದರಲ್ಲಿ ಒಬ್ಬ ಮೌಲ್ವಿಯ ಮಾರ್ಗದರ್ಶನದಲ್ಲಿ ಮುಸ್ಲಿಮರ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದ್ದನು. ಇವುಗಳನ್ನು ಮದ್ರಸಾಗಳೆಂದು ಕರೆಯಲಾಗುತ್ತಿತ್ತು. ಇವುಗಳಲ್ಲಿ ಅರೇಬಿಕ್ ಭಾಷೆ, ಉರ್ದು ಭಾಷೆಗಳೇ ಅಲ್ಲದೆ, ಓದು, ಬರಹ ಮತ್ತು ಗಣಿತಗಳನ್ನು ಹೇಳಿಕೊಡಲಾಗುತ್ತಿತ್ತು. ಸ್ತ್ರೀ ಶಿಕ್ಷಣ ನಡೆಯಲ್ಪಡುತ್ತಿದ್ದರೂ, ಇದಕ್ಕೆ ಹಲವು ಪರಿಮಿತಿಗಳಿದ್ದವು. ಗಣ್ಯರ ಮನೆಗಳಲ್ಲಿಯೇ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡಲಾಗುತ್ತಿತ್ತು.

**ಹತ್ತನೇ ಪಂಚವಾರ್ಷಿಕ ಯೋಜನೆಯ ಪ್ರಮುಖ ಗುರಿಗಳು:** ೧) ಆರರಿಂದ ೧೪ ವರ್ಷ ವಯೋಮಾನದ ಮಕ್ಕಳ ಪ್ರತಿಶತ ೧೦೦ರಷ್ಟು ದಾಖಲಾತಿ, ೨) ಒಂದು ಕಿಲೋ ಮೀಟರ್ ಅಂತರದೊಳಗೆ ಕಿರಿಯ ಪ್ರಾಥಮಿಕ ಶಾಲೆಗಳನ್ನು ಮತ್ತು ಎರಡು ಕಿಲೋ ಮೀಟರ್ ಅಂತರದೊಳಗೆ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯುವುದು, ೩)ಒಂದರಿಂದ ಐದನೇ ತರಗತಿಯವರೆಗೆ ಶೇಕಡಾ ಆರಕ್ಕಿಂತ ಕಡಿಮೆ ಹಾಗೂ ಒಂದರಿಂದ ಏಳನೇ ತರಗತಿಯವರೆಗೆ ಓದುತ್ತಿರುವವರಲ್ಲಿ ಶಾಲೆಯನ್ನು ಬಿಟ್ಟುಹೋಗುವ ಮಕ್ಕಳ ಸಂಖ್ಯೆಯನ್ನು ಶೇಕಡಾ ೨೦ಕ್ಕಿಂತ ಕಡಿಮೆಗೊಳಿಸುವುದು ೪) ಪ್ರತಿ ಕಿರಿಯ ಪ್ರಾಥಮಿಕ ಶಾಲೆಗೆ ನಾಲ್ಕು ಜನ ಶಿಕ್ಷಕರನ್ನು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಆರು ಜನ ಶಿಕ್ಷಕರನ್ನು ಒದಗಿಸುವುದು. ಹತ್ತನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ನಿವ್ವಳ ದಾಖಲಾತಿ ಪ್ರಮಾಣವು ಶೇಕಡಾ ೯೮.೦೯ ರಷ್ಟಿತ್ತು. ಒಂದು ಕಿಲೋ ಮೀಟರ್ ಒಳಗೆ

ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೂರು ಕಿಲೋ ಮೀಟರ್ ಒಳಗೆ ಒದಗಿಸುವಲ್ಲಿ ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿದೆ. ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒದಗಿಸಿದ ಪ್ರಮಾಣವು ಶೇಕಡಾ ೧೦೦ ರಷ್ಟಿದೆ. ಒಂದರಿಂದ ಐದನೇ ತರಗತಿಯವರೆಗೆ ಶೇ.೭.೮೬ ರಷ್ಟು ಮಕ್ಕಳು ಹಾಗೂ ಒಂದರಿಂದ ಏಳನೇ ತರಗತಿಯವರೆಗೆ ಶೇ.೧೦.೧೯ ರಷ್ಟು ಮಕ್ಕಳು ಶಾಲೆಯನ್ನು ಬಿಟ್ಟುಹೋಗಿರುತ್ತಾರೆ. ಅಂತೆಯೇ ಶಾಲೆಗೆ ಬರದೇ ಹೊರಗುಳಿದ ಮಕ್ಕಳ ಸಂಖ್ಯೆಯೂ ಸಹ ಗಮನಾರ್ಹವಾಗಿ ಕಡಿಮೆಯಾಗಿರುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆಯೂ ಸಹ ಸುಧಾರಿಸಿರುತ್ತದೆ. ಈ ಯೋಜನೆಯ ಅವಧಿಯಲ್ಲಿ ೧೩,೮೪೫ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

**ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಪ್ರಸ್ತಾವನೆಗಳು:** ೧೧ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಸ್ತಾವನೆ ಮಾಡಲಾಗಿರುವ ಸಾರ್ವತ್ರಿಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉನ್ನತ ಮಟ್ಟದಲ್ಲಿ ವೇಗವಾಗಿ ಅನುಷ್ಠಾನಗೊಳಿಸುವುದು. ದಾಖಲಾತಿ ಮತ್ತು ಉಳಿಕೆಯ ಗುರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಶಾಲಾ ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವ ಬಗ್ಗೆ ಒತ್ತುಕೊಡಲಾಗುವುದು. ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ವಿಸ್ತರಿಸುವುದಕ್ಕಿಂತ ಕ್ರೋಢೀಕರಿಸಲು ಹೆಚ್ಚು ಒತ್ತು ನೀಡಲಾಗಿದೆ. ಇವುಗಳು ಯಾವುವೆಂದರೆ: ೧) ಶಾಲಾ ಮತ್ತು ಕಾಲೇಜುಗಳನ್ನು ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯು ಶಿಫಾರಸ್ಸು ಮಾಡಿರುವ ಸೇವಾ ಸೌಲಭ್ಯ ಸಿಗದಿರುವ ಹಿಂದುಳಿದ ಪ್ರದೇಶಗಳಲ್ಲಿ ಮಾತ್ರ ಸ್ಥಾಪಿಸುವುದು, ೨) ಕಿರಿಯ ಪ್ರಾಥಮಿಕ ಹಂತದಲ್ಲಿ (೧ರಿಂದ ೫) ಶಾಲೆಯಿಂದ ಹೊರಗುಳಿಯುವ ದರವನ್ನು ಪ್ರತಿಶತ ಐದಕ್ಕಿಂತ ಕಡಿಮೆ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆಯಿಂದ ಹೊರಗುಳಿಯುವ ದರವನ್ನು ಪ್ರತಿಶತ ೧೦ಕ್ಕಿಂತ ಕಡಿಮೆಗೊಳಿಸುವುದು, ೩) ಪುರುಷ ಮತ್ತು ಮಹಿಳೆಯರ ನಡುವಿನ ಅಂತರವನ್ನು ಕಡಿಮೆಗೊಳಿಸಿ ಅದರಿಂದ ಶೇಕಡಾ ೮೫ ರಷ್ಟು ಸಾಕ್ಷರತೆಯನ್ನು ಸಾಧಿಸುವುದು, ೪) ೧೪ ರಿಂದ ೧೮ರ ವಯಸ್ಸಿನ ಮಕ್ಕಳ ನೋಂದಣಿ ಸಂಖ್ಯೆಯನ್ನು ಶೇಕಡಾ ೬೫ಕ್ಕೆ ಹೆಚ್ಚಿಸುವುದೂ ಆಗಿದೆ. ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದಲ್ಲದೆ ಒಂದರಿಂದ ಎಂಟನೇ ತರಗತಿಯವರೆಗಿನ ಮಕ್ಕಳಲ್ಲಿ ಶೇಕಡಾ ೮೦ ರಷ್ಟು ವಿದ್ಯಾರ್ಥಿಗಳು ನಿಗದಿಪಡಿಸಿದ ಮಟ್ಟಕ್ಕಿಂತ ಕನಿಷ್ಠ ಪಕ್ಷ ಶೇಕಡಾ ೮೦ರಷ್ಟಾದರೂ ಪ್ರೌಢಿಮೆಯನ್ನು ಸಾಧಿಸುವಂತೆ ದೃಢೀಕರಿಸಿಕೊಳ್ಳುವ ಬಗ್ಗೆ ಯೋಜಿಸಲಾಗಿದೆ. ಪದವಿಪೂರ್ವ ಶಿಕ್ಷಣವನ್ನು ವೃತ್ತಿಪರವನ್ನಾಗಿಸುವ ನಿಟ್ಟಿನಲ್ಲಿ ಹೆಚ್ಚು ನೀಡುವುದು ಹಾಗೂ ವಿವಿಧ ಇಲಾಖೆಗಳಲ್ಲಿನ ವೃತ್ತಿ ಶಿಕ್ಷಣವನ್ನು ಕಾರ್ಮಿಕ ಇಲಾಖೆಯ ಅಧೀನದಲ್ಲಿ ತಂದು ವೃತ್ತಿಪರ ಪಟ್ಟಿಯನ್ನು ಖಾತ್ರಿಪಡಿಸಲು ಪ್ರಸ್ತಾಪ ಮಾಡಲಾಗಿದೆ.

## ಸಾಕ್ಷರತೆ

ದೇಶದ ಅಭಿವೃದ್ಧಿಯಲ್ಲಿ ಸಾಕ್ಷರತೆ ಪ್ರಮುಖ ಪಾತ್ರವಹಿಸುತ್ತದೆ. ೨೦೦೧ರ ಜನಗಣತಿಯಂತೆ ರಾಜ್ಯದ ಒಟ್ಟು ಸಾಕ್ಷರತಾ ಪ್ರಮಾಣ ೬೬.೬೪ ಆಗಿದ್ದರೆ, ಇತರ ಜಿಲ್ಲೆಗಳಿಗೆ ಹೋಲಿಸಿದಾಗ, ಚಾಮರಾಜನಗರವು ೨೫ನೇ ಸ್ಥಾನ ಪಡೆದಿದೆ. ಇದನ್ನು ಮನಗಂಡ ಸರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ, ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಇದರಲ್ಲಿ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ

ಯೋಜನೆ, ಅಕ್ಷರದೀಪ, ಸಂಪೂರ್ಣ ಸಾಕ್ಷರತಾ ಆಂದೋಲನ, ಸಾಕ್ಷರೋತ್ತರ ಹಾಗೂ ಕನ್ನಡನಾಡು ಸಾಕ್ಷರನಾಡು ಎಂಬ ಕಾರ್ಯಕ್ರಮಗಳನ್ನು ರಾಜ್ಯದೆಲ್ಲೆಡೆ ಹಮ್ಮಿಕೊಂಡಿದ್ದು, ಇದರಿಂದ ಪರಿಣಾಮಕಾರಿಯಾದ ಪ್ರಗತಿ ಸಾಧನೆಯಾಗಿದೆ. ೧೯೯೧–೨೦೦೧ರ ದಶಕದಲ್ಲಿ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. ೧೦.೬೦ರಷ್ಟು ಹೆಚ್ಚಳವಾಗಿದೆ. ರಾಜ್ಯದಲ್ಲಿ ಸಾಕ್ಷರತೆಯ ಒಟ್ಟು ಪ್ರಮಾಣವನ್ನು ಶೇ. ೬೬.೬೪ ರಿಂದ ಶೇ. ೮೫.೦೦ಕ್ಕೆ ಹೆಚ್ಚಿಸುವ ಗುರಿಸಾಧನೆಗಾಗಿ ಲೋಕ ಶಿಕ್ಷಣ ನಿರ್ದೇಶನಾಲಯ ಮತ್ತು ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

ಮೈಸೂರು ಜಿಲ್ಲೆಯಿಂದ ಬೇರ್ಪಟ್ಟ ನಂತರ ಈ ಗಡಿನಾಡಿನ ಭಾಗವಾದ ಚಾಮರಾಜನಗರ ಜಿಲ್ಲಾ ಸ್ಥಾನಮಾನ ಗಳಿಸಿದ್ದರೂ, ತನ್ನ ಜನಸಂಖ್ಯೆಯಲ್ಲಿ ಅಪಾರ ಪ್ರಮಾಣದ ನಿರ್ಲಕ್ಷ್ಯಕ್ಕೊಳಗಾದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಗಿರಿಜನರನ್ನು ಹೊಂದಿದ್ದು, ಸಾಕ್ಷರತೆಯ ದೃಷ್ಟಿಯಲ್ಲಿ ಮಾಡಬೇಕಾದ ಸಾಧನೆ ಅಪಾರವಾಗಿದೆ. ಮಹಿಳಾ ಸಾಕ್ಷರತೆ ದಯನೀಯ ಸ್ಥಿತಿಯಲ್ಲಿದ್ದು, ಹಲವಾರು ಬುಡಕಟ್ಟು ಜನಾಂಗಗಳವರು ನಾಗರೀಕತೆಯ ಸಮಾಜದ ಮುಖವನ್ನೇ ಕಂಡಿರುವುದಿಲ್ಲ. ಆದರೆ, ಅಂತಹವರನ್ನೂ ಸಾಕ್ಷರರನ್ನಾಗಿಸುವ ಪ್ರಬಲ ಪ್ರಯತ್ನಗಳನ್ನು ಸರಕಾರ ತನ್ನ ವಿಶಿಷ್ಟ ಯೋಜನೆಗಳ ಮೂಲಕ ಮಾಡುತ್ತಿದೆ.

ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಸಾಮಾನ್ಯ ಪುರುಷರಲ್ಲಿ ಶೇ. ೬೧.೮೧ರಷ್ಟು ಮಂದಿ ಸಾಕ್ಷರರಾಗಿದ್ದು, ಪ್ರಥಮ ಸ್ಥಾನ ಗಳಿಸಿದ್ದರೆ, ಗುಂಡ್ಲುಪೇಟೆ ತಾಲೂಕಿನಲ್ಲಿ ಇವರು ಶೇ. ೫೯.೫೧ರಷ್ಟಿದ್ದು, ದ್ವಿತೀಯ ಸ್ಥಾನ ಗಳಿಸಿರುತ್ತಾರೆ. ರಾಜ್ಯದಲ್ಲಿಯೇ ಅತಿ ಸಣ್ಣ ತಾಲೂಕಾದ ಯಳಂದೂರಿನಲ್ಲಿ ಇವರ ಪ್ರಮಾಣ ಶೇ. ೫೭.೪೧ ಹಾಗೂ ಚಾಮರಾಜನಗರದಲ್ಲಿ ಶೇ. ೫೬.೯೧ ಆಗಿರುತ್ತದೆ.

ಸಾಮಾನ್ಯ ಮಹಿಳೆಯರ ಸಾಕ್ಷರತಾ ಪ್ರಮಾಣ ಕೊಳ್ಳೇಗಾಲ ತಾಲೂಕಿನಲ್ಲಿ ಶೇ.೪೬.೨೩, ಯಳಂದೂರು ತಾಲೂಕಿನಲ್ಲಿ ಶೇ.೪೨.೦೩, ಚಾಮರಾಜನಗರ ತಾಲೂಕಿನಲ್ಲಿ ಶೇ.೪೧.೯೭ ಹಾಗೂ ಗುಂಡ್ಲುಪೇಟೆ ತಾಲೂಕಿನಲ್ಲಿ ಶೇ.೪೦.೧೪ ಆಗಿರುತ್ತದೆ. ಇದರಿಂದ ಮಹಿಳಾ ಸಾಕ್ಷರತೆ ಶೇ. ೫೦ರಷ್ಟನ್ನೂ ತಲುಪದಿರುವುದು ತಿಳಿದುಬರುತ್ತದೆ. ೨೦೦೧ರ ಜನಗಣತಿಯಂತೆ ಜಿಲ್ಲೆಯ ಜನಸಂಖ್ಯೆ ಹಾಗೂ ಸಾಕ್ಷರತೆಯ ಅಂಕಿ–ಅಂಶಗಳನ್ನು ಮತ್ತು ೨೦೧೧ರ ಜನಗಣತಿ (ತಾತ್ಕಾಲಿಕ ಅಂಶಗಳು)ಯ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**ಪರಿಶಿಷ್ಟ ಜಾತಿಯ ಅಕ್ಷರಸ್ಥರ ವಿವರ – ೨೦೦೧**

| ಕ್ರ.ಸಂ. | ತಾಲೂಕು | ಅಕ್ಷರಸ್ಥರು | | | ಶೇಕಡವಾರು ಅಕ್ಷರಸ್ಥರು | | |
|---|---|---|---|---|---|---|---|
| | | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ೧ | ಗುಂಡ್ಲುಪೇಟೆ | ೧೫೨೧೯ | ೯೦೯೭ | ೬೧೨೨ | ೪೬.೩ | ೫೪.೮ | ೩೭.೬ |
| ೨ | ಚಾಮರಾಜನಗರ | ೨೮೩೬೫ | ೧೬೬೧೨ | ೧೧೭೫೩ | ೪೭.೫ | ೫೪.೭ | ೪೦.೦ |
| ೩ | ಯಳಂದೂರು | ೧೧೧೪೭ | ೬೩೪೫ | ೪೮೦೨ | ೫೧.೭ | ೫೭.೮ | ೪೫.೪ |
| ೪ | ಕೊಳ್ಳೇಗಾಲ | ೩೧೩೮೩ | ೧೮೭೮೬ | ೧೨೫೯೭ | ೪೬.೫ | ೫೪.೦ | ೩೮.೫ |
| | ಒಟ್ಟು | ೮೬೧೧೪ | ೫೦೮೪೦ | ೩೫೨೭೪ | ೪೭.೪ | ೫೪.೮ | ೩೯.೬ |

## ಪರಿಶಿಷ್ಟ ವರ್ಗದ ಅಕ್ಷರಸ್ಥರ ವಿವರ – ೨೦೦೧

| ಕ್ರ. ಸಂ. | ತಾಲೂಕು | ಅಕ್ಷರಸ್ಥರು | | | ಶೇಕಡವಾರು ಅಕ್ಷರಸ್ಥರು | | |
|---|---|---|---|---|---|---|---|
| | | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ೧ | ಗುಂಡ್ಲುಪೇಟೆ | ೬೧೮೬ | ೩೮೯೦ | ೨೨೯೬ | ೩೭.೮ | ೪೭.೮ | ೨೭.೮ |
| ೨ | ಚಾಮರಾಜನಗರ | ೮೨೮೦ | ೪೯೯೨ | ೩೨೮೮ | ೩೪.೭ | ೪೨.೦ | ೨೭.೫ |
| ೩ | ಯಳಂದೂರು | ೪೦೦೦ | ೨೪೭೭ | ೧೫೨೩ | ೪೨.೭ | ೫೧.೬ | ೩೩.೩ |
| ೪ | ಕೊಳ್ಳೇಗಾಲ | ೯೦೪೫ | ೫೬೧೪ | ೩೪೩೧ | ೩೭.೦ | ೪೫.೨ | ೨೮.೫ |
| | ಒಟ್ಟು | ೨೭೫೧೧ | ೧೬೯೭೩ | ೧೦೫೩೮ | ೩೭.೨ | ೪೫.೬ | ೨೮.೬ |

## ಸಾಮಾನ್ಯವರ್ಗದ ಅಕ್ಷರಸ್ಥರ ವಿವರ – ೨೦೦೧

| ಕ್ರ.ಸಂ. | ತಾಲೂಕು | | ಅಕ್ಷರಸ್ಥರು | | | | ಶೇಕಡವಾರು ಅಕ್ಷರಸ್ಥರು | |
|---|---|---|---|---|---|---|---|---|
| | | | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ೧ | **ಗುಂಡ್ಲುಪೇಟೆ** | **ಒಟ್ಟು** | **೯೩೪೧೯** | **೫೬೨೫೯** | **೩೭೧೬೦** | **೪೯.೪** | **೫೯.೧** | **೩೯.೫** |
| | | ಗ್ರಾಮಾಂತರ | ೭೬೯೬೨ | ೪೬೯೦೭ | ೩೦೦೫೫ | ೪೬.೪ | ೫೬.೨ | ೩೬.೪ |
| | | ನಗರ | ೧೬೪೫೭ | ೯೩೫೨ | ೭೧೦೫ | ೭೧.೧ | ೭೯.೫ | ೬೨.೪ |
| ೨ | **ಚಾಮರಾಜನಗರ** | **ಒಟ್ಟು** | **೧೪೬೮೧೫** | **೮೫೩೫೬** | **೬೧೪೫೯** | **೪೯.೨** | **೫೬.೬** | **೪೧.೬** |
| | | ಗ್ರಾಮಾಂತರ | ೧೧೧೪೩೬ | ೬೫೭೩೪ | ೪೫೭೦೨ | ೪೫.೪ | ೫೩.೧ | ೩೭.೬ |
| | | ನಗರ | ೩೫೩೭೯ | ೧೯೬೨೨ | ೧೫೭೫೭ | ೬೬.೭ | ೭೩.೨ | ೬೦.೧ |
| ೩ | **ಯಳಂದೂರು** | **ಒಟ್ಟು** | **೩೪೦೫೪** | **೧೯೮೮೪** | **೧೪೧೭೦** | **೪೯.೬** | **೫೭.೦** | **೪೨.೦** |
| | | ಗ್ರಾಮಾಂತರ | ೨೯೧೫೮ | ೧೭೦೬೬ | ೧೨೦೯೨ | ೪೭.೮ | ೫೫.೧ | ೪೦.೩ |
| | | ನಗರ | ೪೮೯೬ | ೨೮೧೮ | ೨೦೭೮ | ೬೪.೨ | ೭೨.೨ | ೫೫.೮ |
| ೪ | **ಕೊಳ್ಳೇಗಾಲ** | **ಒಟ್ಟು** | **೧೫೮೪೧೨** | **೯೩೧೭೩** | **೬೫೨೩೯** | **೫೩.೯** | **೬೧.೯** | **೪೫.೫** |
| | | ಗ್ರಾಮಾಂತರ | ೧೨೨೩೯೫ | ೭೩೪೦೩ | ೪೮೯೯೨ | ೪೯.೫ | ೫೭.೯ | ೪೦.೭ |
| | | ನಗರ | ೩೬೦೧೭ | ೧೯೭೭೦ | ೧೬೨೪೭ | ೭೬.೬ | ೮೨.೭ | ೭೦.೨ |
| | **ಒಟ್ಟು** | **ಒಟ್ಟು** | **೪೩೨೭೦೦** | **೨೫೪೬೭೨** | **೧೭೮೦೨೮** | **೫೦.೯** | **೫೯.೦** | **೪೨.೫** |
| | | **ಗ್ರಾಮಾಂತರ** | **೩೩೯೯೫೧** | **೨೦೩೧೧೦** | **೧೩೬೮೪೧** | **೪೭.೨** | **೫೫.೬** | **೩೮.೬** |
| | | **ನಗರ** | **೯೨೭೪೯** | **೫೧೫೬೨** | **೪೧೧೮೭** | **೭೦.೯** | **೭೭.೭** | **೬೩.೯** |

*ಆಧಾರ: ೨೦೦೧ ಜನಗಣತಿ ವರದಿ*

## ಜಿಲ್ಲೆಯ ಸಾಕ್ಷರರ ವಿವರ – ೨೦೧೧

| ಅಕ್ಷರಸ್ಥರು | ಒಟ್ಟು | ಗ್ರಾಮೀಣ | ನಗರ |
|---|---|---|---|
| **ಒಟ್ಟು** | **೫,೬೬,೦೭೬** | **೪,೪೧,೫೨೧** | **೧,೨೪,೫೫೫** |
| ಪುರುಷರು | ೩,೧೫,೩೨೧ | ೨,೪೯,೧೯೯ | ೬೬,೧೨೨ |
| ಮಹಿಳೆಯರು | ೨,೫೦,೭೫೫ | ೧,೯೨,೩೨೨ | ೫೮,೪೩೩ |

ಜಿಲ್ಲೆಯ ಸಾಕ್ಷರರ ಶೇಕಡಾವಾರು ವಿವರ –೨೦೧೧

| ಅಕ್ಷರಸ್ಥರು ಶೇಕಡವಾರು | ಒಟ್ಟು | ಗ್ರಾಮೀಣ | ನಗರ |
|---|---|---|---|
| **ಒಟ್ಟು** | **೫೦.೮೭** | **೪೭.೨೪** | **೭೦.೮೮** |
| ಪುರುಷರು | ೫೯.೦೩ | ೫೫.೬೪ | ೭೭.೬೯ |
| ಮಹಿಳೆಯರು | ೪೨.೪೮ | ೩೮.೫೯ | ೬೩.೮೬ |

*ಆಧಾರ: ೨೦೧೧ರ ಜನಗಣತಿ ವರದಿ*

ಜಿಲ್ಲೆಯ ಸಾಕ್ಷರತಾ ವಿವರ – ೨೦೧೧

| ಕ್ರ.ಸಂ. | ವಿವರ | ಒಟ್ಟು | ಗಂಡಸರು | ಹೆಂಗಸರು |
|---|---|---|---|---|
| ೧ | ೨೦೧೧ರ ಜನಸಂಖ್ಯೆ | ೧೦,೨೦,೯೬೨ | ೫,೧೩,೩೫೯ | ೫,೦೭,೬೦೩ |
| ೨ | ೦–೬ ವಯೋಗುಂಪಿನ ಜನಸಂಖ್ಯೆ | ೯೪,೮೫೯ | ೪೮,೮೫೪ | ೪೬,೦೦೫ |
| ೩ | ಅಕ್ಷರಸ್ಥರ ಸಂಖ್ಯೆ | ೫,೬೬,೦೭೬ | ೩,೧೫,೩೨೧ | ೨,೫೦,೭೫೫ |
| ೪ | ಅಕ್ಷರಸ್ಥರ ಶೇಕಡಾವಾರು | ೬೧.೧೨ | ೬೭.೮೮ | ೫೪.೩೨ |

*ಆಧಾರ: ೨೦೧೧ರ (ತಾತ್ಕಾಲಿಕ) ಜನಗಣತಿ ವರದಿ*

ಮೇಲ್ಕಂಡ ಅಂಕಿ ಅಂಶಗಳನ್ನು ಅವಲೋಕಿಸಿದಾಗ ಚಿಕ್ಕ ತಾಲೂಕಾದ ಯಳಂದೂರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿದ್ದು, ಇತರೆಡೆಗಳಲ್ಲಿ ಇವರನ್ನು ಮೀರಿಸುವ ಸಾಕ್ಷರತಾ ಸಾಧನೆಯಾಗಬೇಕಿದೆ. ೧೫ ರಿಂದ ೩೫ರ ವಯೋಮಾನದ ಯುವಜನರು ಜಿಲ್ಲೆಯಲ್ಲಿ ಸುಮಾರು ನಾಲ್ಕು ಲಕ್ಷವಿದ್ದು, ಇವರನ್ನು ವಿವಿಧ ಹಂತಗಳಲ್ಲಿ ಸಾಕ್ಷರರನ್ನಾಗಿಯೂ ವಿದ್ಯಾವಂತರನ್ನಾಗಿಯೂ ಪರಿವರ್ತಿಸಲು ಸರ್ಕಾರ ನಡೆಸುತ್ತಿರುವ ಪ್ರಯತ್ನಗಳು ಫಲಕಾರಿಯಾದಲ್ಲಿ, ಜಿಲ್ಲೆಯ ಸಾಕ್ಷರತಾ ಪ್ರಮಾಣದಲ್ಲಿ ನಿರೀಕ್ಷಿತ ಹೆಚ್ಚಳವನ್ನು ಕಾಣಬಹುದಾಗಿದೆ.

## ಆಧುನಿಕ ಶಿಕ್ಷಣದ ಪ್ರಾರಂಭ

ಮೈಸೂರಿನಲ್ಲಿ ೧೮೩೩ರಲ್ಲಿ ಪ್ರಾರಂಭಗೊಂಡ 'ರಾಜಾಸ್ ಫ್ರೀ ಸ್ಕೂಲ್' ಆಧುನಿಕ ಶಿಕ್ಷಣಕ್ಕೆ ನಾಂದಿ ಹಾಡಿದರೂ, ಇದಕ್ಕೆ ವ್ಯವಸ್ಥಿತ ಸ್ವರೂಪ ೧೮೫೪ರ ವುಡ್ಸ್ ವರದಿಯ ನಂತರ ಬಂದಿತು. ಈ ವರದಿಯ ಶಿಫಾರಸ್ಸಿನ ಮೇರೆಗೆ ರಾಜ್ಯ ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಯೂ, ಜುಡಿಷಿಯಲ್ ಕಮಿಷನರ್‌ರವರೂ ಆಗಿದ್ದ ಡೆವರೋ ಎಂಬುವವರು ಇಡೀ ಮೈಸೂರು ರಾಜ್ಯಕ್ಕೆ ಅನ್ವಯವಾಗುವಂತೆ ಒಂದು ಶೈಕ್ಷಣಿಕ ಯೋಜನೆಯನ್ನು ರೂಪಿಸಿದರು. ಇದನ್ನು ಕೇಂದ್ರ ಸರಕಾರ ೧೮೫೭ರಲ್ಲಿ ಅಂಗೀಕರಿಸಿತು. ಇದರಂತೆ ೧೮೬೬ರಲ್ಲಿ ಶಿಕ್ಷಣ ಇಲಾಖೆಗೆಂದೇ ಸಾರ್ವಜನಿಕ ಶಿಕ್ಷಣ ನಿರ್ದೇಶಕರ (ಡಿ.ಪಿ.ಐ.) ಹುದ್ದೆ ರಚನೆಗೊಂಡಿತು. ೧೮೮೧ರಲ್ಲಿ ರಾಜ್ಯವು ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟಾಗ, ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು ಉಂಟಾದವು. ೧೮೯೧ರಲ್ಲಿ ಶಿಕ್ಷಣ ಕ್ಷೇತ್ರದ ಕೇಂದ್ರ ಸ್ಥಾನವನ್ನು ಬೆಂಗಳೂರಿನಿಂದ ಮೈಸೂರಿಗೆ ವರ್ಗಾಯಿಸಲಾಯಿತು. ೧೮೯೫ರಲ್ಲಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜುಕೇಷನ್ ಹುದ್ದೆ ಸೃಷ್ಟಿಯಾಗಿ, ಶಿಕ್ಷಣ ಇಲಾಖೆಯ ಕಾರ್ಯದರ್ಶಿಯ ಕಛೇರಿಯು ಇದರೊಡನೆ ವಿಲೀನಗೊಂಡಿತು. ೧೯೨೭ರಲ್ಲಿ ಶಿಕ್ಷಣ ಇಲಾಖೆಯ ಮುಖ್ಯಸ್ಥರನ್ನು ಪುನಃ ಸಾರ್ವಜನಿಕ ಶಿಕ್ಷಣ ನಿರ್ದೇಶಕರೆಂದು ಕರೆಯಲಾಯಿತು. ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ೧೯೩೧ರಲ್ಲಿ ಜಿಲ್ಲಾ ಬೋರ್ಡ್ ಹಾಗೂ ಮುನಿಸಿಪಾಲಿಟಿಗಳಂತಹ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಯಿತು. ಆದರೆ, ೧೯೪೧ರಲ್ಲಿ ಇವನ್ನು ಪುನಃ ಸರಕಾರವೇ ವಹಿಸಿಕೊಂಡಿತು. ರಾಜ್ಯ ಪುನರ್ ಸಂಘಟನೆಯ ಸಮಯಕ್ಕೆ

ಮೈಸೂರು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ತಾಂತ್ರಿಕ ಶಿಕ್ಷಣವೂ ಸೇರಿದಂತೆ, ಶಿಕ್ಷಣ ಕ್ಷೇತ್ರದ ಎಲ್ಲಾ ವಿಭಾಗಗಳೂ ಡಿ.ಪಿ.ಐ. ಅವರ ಆಡಳಿತಾಧಿಕಾರದಲ್ಲಿದ್ದವು.

## ಪೂರ್ವ ಪ್ರಾಥಮಿಕ ಶಿಕ್ಷಣ

ರಾಜ್ಯ ಪುನರ್ವಿಂಗಡಣೆಯಾಗಿ ಐದು ದಶಕಗಳು ಸಂದಿರುವ ಈ ಸಮಯದಲ್ಲಿ ನಡೆದಿರುವ ಶೈಕ್ಷಣಿಕ ಬದಲಾವಣೆಗಳನ್ನು ಹಲವು ಹಂತಗಳಲ್ಲಿ ಗುರುತಿಸಬಹುದಾಗಿದೆ. ಪೂರ್ವ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರದವರೆಗೆ ಮಹತ್ತರ ಸಾಧನೆಗಳಾಗಿವೆ. ಪ್ರಾಥಮಿಕ–ಮಾಧ್ಯಮಿಕ–ಪ್ರೌಢ ಹಾಗೂ ಕಾಲೇಜು ಹಂತಗಳು ಮೊದಲಿನಂತೆ ಯಾಂತ್ರಿಕವಾಗಿ ಸಾಗದೆ, ಪ್ರಾರಂಭಿಕ ಹಂತದಿಂದಲೇ ವೃತ್ತಿಪರ ದೃಷ್ಟಿಕೋನ ಬೆಳೆದು ಬಂದಿದೆ. ಪ್ರಸ್ತುತ ಶಾಲೆಗೆ ಸೇರಿದ ಸಮಯದಿಂದಲೇ ತಾಯಿ ತಂದೆಯರು ತಮ್ಮ ಮಗುವಿನ ಶೈಕ್ಷಣಿಕ ಹಾಗೂ ಸಾಮಾಜಿಕ ಭದ್ರತೆ ಬಗ್ಗೆ ಚಿಂತನೆ ನಡೆಸಿ, ಹತ್ತನೇ ತರಗತಿಯ ನಂತರ ಮಗುವಿನ ಅಭಿರುಚಿಗೆ ತಕ್ಕ ವಿಷಯಗಳನ್ನು ಆರಿಸಿ, ಆ ವಿಷಯದಲ್ಲಿ ಮಗುವಿಗೆ ವಿಶೇಷ ವ್ಯಾಸಂಗ ನೀಡುವ ನಿಟ್ಟಿನಲ್ಲಿ ಯೋಚಿಸುತ್ತಾರೆ. ಮಕ್ಕಳ ಬೌದ್ಧಿಕ ಮಟ್ಟವೂ ಗಣನೀಯವಾಗಿ ಅಭಿವೃದ್ಧಿ ಹೊಂದಿದ್ದು, ಇದರಲ್ಲಿ ಆಧುನಿಕ ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳು ಮಹತ್ತರ ಪಾತ್ರ ವಹಿಸಿವೆ. ಇಂತಹ ಮಕ್ಕಳಿಗೆ ಬೋಧಿಸಲು ಬೋಧಕರೂ ಸಹ ಸಾಕಷ್ಟು ತಯಾರಿ ನಡೆಸಬೇಕಿದೆ. ವಿದೇಶೀ ಶಿಕ್ಷಣ ಹಾಗೂ ಸಂಸ್ಕೃತಿಗಳ ಪ್ರಭಾವ ದೇಶೀಯ ವಿದ್ಯಾರ್ಥಿಗಳ ಮೇಲೆ ಪ್ರೇರಕ ಶಕ್ತಿಯಾಗಿದೆ. ಕೆಜಿ ಹಂತದಿಂದ ಪಿಜಿ ಹಂತದವರೆಗೆ, ಅಂದರೆ ಪೂರ್ವ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿ ಕಲಿಸುವವರಿಗೆ ಮತ್ತು ಕಲಿಯುವವರಿಗೆ ಸವಾಲಾಗಿ ಮಾರ್ಪಟ್ಟಿದೆ. ಪಠ್ಯವಸ್ತು ವಿಭಿನ್ನವಾಗಿ, ಕಲಿಕೆಯ ಎಲ್ಲಾ ಸ್ಥರಗಳಲ್ಲಿ ಕಂಪ್ಯೂಟರ್ ಪ್ರಭಾವವಿದ್ದು, ಇದರ ಜ್ಞಾನ ಅತ್ಯವಶ್ಯಕವಾಗಿದೆ. ಗಣಕಾಕ್ಷರತೆ (ಕಂಪ್ಯೂಟರ್ ಜ್ಞಾನ) ಎಲ್ಲೆಡೆ ಅಪೇಕ್ಷಣೀಯವಾಗಿದೆ. ೧೯೮೬–೮೭ರಲ್ಲಿದ್ದಂತೆ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಈ ಮುಂದೆ ತಿಳಿಸಿದಂತೆ ಪೂರ್ವ ಪ್ರಾಥಮಿಕ ಶಾಲೆಗಳೂ, ಮಕ್ಕಳೂ ಇದ್ದರು:– ಚಾಮರಾಜನಗರ–೨೧ ಶಾಲೆಗಳು ಮತ್ತು ೧,೨೬೦ ಮಕ್ಕಳು (೭೧೮–ಗಂ, ೫೪೨–ಹೆ); ಗುಂಡ್ಲುಪೇಟೆ–೨೬ ಶಾಲೆಗಳು ಮತ್ತು ೧,೫೬೦ ಮಕ್ಕಳು (೮೨೬ ಗಂ, ೭೩೪ ಹೆ); ಕೊಳ್ಳೇಗಾಲ–೮೮ ಶಾಲೆಗಳು ಮತ್ತು ೫೨೮೦ ಮಕ್ಕಳು (೨,೭೬೯ ಗಂ, ೨,೫೧೧ ಹೆ) ಹಾಗೂ ಯಳಂದೂರು–೧೫ ಶಾಲೆಗಳು ಮತ್ತು ೯೦೦ ಮಕ್ಕಳು (೫೨೪ ಗಂ, ೩೭೬ ಹೆ).

ತಾಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಅನೇಕ ಖಾಸಗಿ ಸಂಸ್ಥೆಗಳು ಎರಡು ವರ್ಷದ ಮಕ್ಕಳನ್ನು ತಮ್ಮ ಶಾಲೆಗಳಿಗೆ ಸೇರಿಸಿಕೊಂಡು ಅವರುಗಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿವೆ. ಇಂತಹ ಶಾಲೆಗಳಿಗೆ ಭಾರಿ ಬೇಡಿಕೆ ಇದ್ದು, ತಾಯಿ–ತಂದೆಯರು ಇಂಗ್ಲೀಷ್ ಶಿಕ್ಷಣದ ಅನಿವಾರ್ಯತೆಯ ಅರಿವಿನಿಂದ ಪ್ರಾರಂಭದಿಂದಲೇ ತಮ್ಮ ಮಕ್ಕಳನ್ನು ದುಬಾರಿ ಶುಲ್ಕವಿದ್ದರೂ, ಆಂಗ್ಲ ಮಾಧ್ಯಮ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ಪಟ್ಟಣ ವಾಸಿಗಳಾದ ಉದ್ಯೋಗಸ್ಥ ತಾಯಿ ತಂದೆಗಳಿಗೆ ಇದು ವರದಾನವಾಗಿದೆ. ಕಾನ್ವೆಂಟ್‌ಗಳೆಂದು ಕರೆಯಲ್ಪಡುವ ಇಂತಹ ಸಂಸ್ಥೆಗಳಲ್ಲಿ ಮೂರು ತರಗತಿಗಳಲ್ಲಿ ಅಂದರೆ, ಪ್ರೀನರ್ಸರಿ, ಲೋಯರ್ ಕಿಂಡರ್‌ಗಾರ್ಟನ್, (ಎಲ್‌ಕೆಜಿ) ಮತ್ತು ಅಪ್ಪರ್ ಕಿಂಡರ್ ಗಾರ್ಟನ್ (ಯುಕೆಜಿ) ಶಿಕ್ಷಣ ನೀಡಲಾಗುತ್ತಿದೆ. ಮೊದಲನೆಯ ತರಗತಿಗೆ ಎರಡೂವರೆ ವರ್ಷ ಪೂರೈಸಿದ ಮಕ್ಕಳನ್ನು, ಎರಡನೇ ತರಗತಿಗೆ ಮೂರೂವರೆ ವರ್ಷ ಪೂರೈಸಿದ ಮಕ್ಕಳನ್ನು ಸೇರಿಸಬಹುದಾಗಿದೆ. ಎಲ್‌ಕೆಜಿ ಸೇರುವ ಮಗು ಮೂರೂವರೆ ವರ್ಷ ಪೂರೈಸದಿದ್ದಲ್ಲಿ ಅದನ್ನು ಒಂದು ವರ್ಷ ಅವಧಿಯ ಪ್ರಿಪ್ರೇಟರಿ ತರಗತಿಗೆ ಸೇರಿಸಲಾಗುತ್ತದೆ. ಅಂದರೆ, ಪ್ರಾಥಮಿಕ ಒಂದನೇ ತರಗತಿಗೆ ಸೇರುವ ವೇಳೆಗೆ ಮಗುವಿಗೆ ಕನಿಷ್ಠ ಎರಡು ವರ್ಷಗಳ ಶಾಲಾ ವ್ಯಾಸಂಗ ಮುಗಿದಿರುತ್ತದೆ.

ಪ್ರಸ್ತುತ ಪೂರ್ವ ಪ್ರಾಥಮಿಕ ಶಿಕ್ಷಣ ಹೊಸ ಆಯಾಮ ಪಡೆದಿದ್ದು, ಸರಕಾರ ನಡೆಸುತ್ತಿರುವ ಅಂಗನವಾಡಿಗಳಲ್ಲಿ ಈ ಕೆಳಕಂಡ ಹಂತದ ಶಿಕ್ಷಣ ನೀಡಲ್ಪಡುತ್ತಿದೆ.

**ಅಂಗನವಾಡಿಗಳು:** ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಪರ್ಯಾಯ ವ್ಯವಸ್ಥೆಯಾದ ಅಂಗನವಾಡಿ ಯೋಜನೆ ೧೯೭೫ರಲ್ಲಿ ರಾಜ್ಯಾದ್ಯಂತ ಜಾರಿಯಾಯಿತು. 'ಆಟದ ಮೂಲಕ ಪಾಠ' ಎಂಬ ಧ್ಯೇಯವಾಕ್ಯದೊಡನೆ ಶಾಲೆಯ ಪ್ರಥಮ ವರ್ಷದ ಮೊದಲು ಮಕ್ಕಳಿಗೆ ಶಾಲಾ ಪರಿಸರದ ಪರಿಚಯ ಮಾಡಿಸಿ, ಶಾಲೆಗೆ ಹೋಗುವ ಅಭ್ಯಾಸವನ್ನು ಬೆಳೆಸುವ ಉದ್ದೇಶ ಹೊಂದಿರುವ ಈ ಯೋಜನೆ ಸಾಕಷ್ಟು ಜನಪ್ರಿಯವಾಗಿದ್ದು, ಗ್ರಾಮೀಣ ಮಕ್ಕಳಿಗೆ ಬಹೂಪಯೋಗಿಯಾಗಿದೆ. ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಇಂಗ್ಲಿಷ್ ಶಿಕ್ಷಣ ನೀಡುವ ಶಾಲೆಗಳೊಡನೆ ಪೈಪೋಟಿ ನಡೆಸುವ ಸಾಮರ್ಥ್ಯವಿಲ್ಲದಿದ್ದರೂ, ಬಡತನ ರೇಖೆಗಿಂತ ಕೆಳಹಂತದ ಗ್ರಾಮೀಣ ಮಕ್ಕಳಿಗೆ ಶೈಕ್ಷಣಿಕ ತಳಹದಿಯನ್ನು ನೀಡುವಲ್ಲಿ ಸಫಲವಾಗಿದೆ. ಕೇಂದ್ರ ಸರಕಾರದ ಆರ್ಥಿಕ ನೆರವಿನೊಂದಿಗೆ ನಡೆಯುವ ಈ ಕೇಂದ್ರಗಳಲ್ಲಿ ಒಬ್ಬ ಮಹಿಳಾ ಕಾರ್ಯಕರ್ತೆ ಮತ್ತು ಒಬ್ಬ ಸಹಾಯಕಿ ಮಕ್ಕಳ ಯೋಗಕ್ಷೇಮವನ್ನೂ ಬೋಧನೆಯನ್ನೂ ನೋಡಿಕೊಳ್ಳುತ್ತಾರೆ. ಕಾರ್ಯಕರ್ತೆಗೆ ಮಾಹೆಯಾನ ₹ ೧,೭೫೦/– (₹ ೧,೦೦೦ ಕೇಂದ್ರ ಸರ್ಕಾರ, ₹ ೭೫೦/– ರಾಜ್ಯ ಸರ್ಕಾರ) ಮತ್ತು ಸಹಾಯಕಿಗೆ ₹ ೮೭೫ (₹ ೫೦೦/– ಕೇಂದ್ರ ಸರ್ಕಾರ, ₹ ೩೭೫/– ರಾಜ್ಯ ಸರ್ಕಾರ) ಗೌರವಧನ ನೀಡಲಾಗುತ್ತದೆ. ಜಿಲ್ಲಾ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಅಂಗನವಾಡಿಗಳ ಉಸ್ತುವಾರಿ ನೋಡಿಕೊಳ್ಳುತ್ತಾರೆ. ಆಗಸ್ಟ್ ೨೦೦೮ರಲ್ಲಿದ್ದಂತೆ ಚಾಮರಾಜನಗರ ಜಿಲ್ಲೆಯ ಅಂಗನವಾಡಿಗಳ ತಾಲೂಕುವಾರು ಅಂಕಿಅಂಶಗಳನ್ನು ಈ ಮುಂದೆ ನೀಡಲಾಗಿದೆ.

**ಅಂಗನವಾಡಿ ಕೇಂದ್ರಗಳ ವಿವರ**

| ತಾಲೂಕು | ಕೇಂದ್ರಗಳ ಸಂಖ್ಯೆ | ಮಕ್ಕಳ ಸಂಖ್ಯೆ |
|---|---:|---:|
| **ಚಾಮರಾಜನಗರ** | ೫೨೯ | ೨೩,೬೪೨ |
| **ಕೊಳ್ಳೇಗಾಲ** | ೪೩೩ | ೨೨,೩೭೯ |
| **ಗುಂಡ್ಲುಪೇಟೆ** | ೨೫೧ | ೧೩,೨೧೫ |
| **ಯಳಂದೂರು** | ೧೦೩ | ೪,೯೫೮ |
| **ಒಟ್ಟು** | **೧,೩೧೬** | **೬೪,೧೯೪** |

## ಪ್ರಾಥಮಿಕ ಶಿಕ್ಷಣ

ಸರ್ವರಿಗೂ ಸಮಗ್ರ ಶಿಕ್ಷಣ ನೀಡುವ ಉದ್ದೇಶದಿಂದ ಸರಕಾರ ೧೮೬೮ರಲ್ಲಿ ಹೋಬಳಿ ಶಾಲಾ ಪದ್ಧತಿಯನ್ನು ಜಾರಿಗೆ ತಂದಿತು. ಇದರಂತೆ ೪೧ ಚದರ ಕಿ.ಮೀ ವಿಸ್ತೀರ್ಣದ ರಾಜ್ಯದ ಎಲ್ಲಾ ಹೋಬಳಿಗಳಲ್ಲಿಯೂ ಒಂದು ಶಾಲೆಯನ್ನು ಪ್ರಾರಂಭಿಸಲಾಯಿತು. ಇದಲ್ಲದೆ, ಸ್ಥಳೀಯರೇ ಶಾಲಾ ಕಟ್ಟಡ ನೀಡಲು ಮುಂದಾದಲ್ಲಿ ಅಂತಹ ಸ್ಥಳಗಳಲ್ಲಿಯೂ ಒಂದು ಶಾಲೆಯನ್ನು ತೆರೆಯಲಾಯಿತು. ಈ ಶಾಲೆಗಳ ಶಿಕ್ಷಕರಿಗೆ ಪ್ರಾರಂಭದಲ್ಲಿ ಮಾಹೆಯಾನ ಐದು ರೂಪಾಯಿ ಹಾಗೂ ಖಾಯಂ ಆದ ನಂತರ ಮಾಹೆಯಾನ ಏಳು ರೂಪಾಯಿ ಸಂಬಳ ದೊರೆಯುತ್ತಿತ್ತು. ಹಗಲು ಶಾಲೆಯಲ್ಲಿ ಕಲಿಯಲು ಅನುಕೂಲವಿಲ್ಲದವರಿಗೆ ಸಂಜೆ ಶಾಲೆಗಳಲ್ಲಿ ಅವಕಾಶವಿದ್ದಿತು. ಆದರೆ ಇಲ್ಲಿಗೆ ಕಲಿಯಲು ಹೋಗುತ್ತಿದ್ದವರು ದೀಪ ಶುಲ್ಕವನ್ನು ನೀಡಬೇಕಿದ್ದಿತು. ಈ ಶಾಲೆಗಳ ಪರಿವೀಕ್ಷಣೆಗಾಗಿ ಒಬ್ಬ ಸಬ್–ಡೆಪ್ಯುಟಿ ಇನ್ಸ್‌ಪೆಕ್ಟರ್ ರವರಿದ್ದರು. ತರಬೇತಿ ಹೊಂದಿದ ಶಿಕ್ಷಕರ ಕೊರತೆಯಿಂದ ಈ ಶಾಲಾ ಪದ್ಧತಿ ಮುಂದುವರೆಯಲಿಲ್ಲ.

ಪ್ರಾಥಮಿಕ ಶಾಲೆಗಳಿಗಾಗಿ ೧೮೯೪ರಲ್ಲಿ ನಿಗದಿತ ಶುಲ್ಕ ಪದ್ಧತಿ ಜಾರಿಯಾಯಿತು. ಇದನ್ನು ೧೯೦೪ರಲ್ಲಿ ಪರಿಷ್ಕರಿಸಲಾಯಿತು. ಇದರಂತೆ ತಾಲೂಕು ಕಿರಿಯ ಪ್ರಾಥಮಿಕ ಶಾಲೆಗಳಿಗೆ ಎರಡು ಆಣೆ, ಹಿರಿಯ ಪ್ರಾಥಮಿಕ

ಶಾಲೆಗಳಿಗೆ ಮೂರು ಆಣೆ, ಮಾಧ್ಯಮಿಕ ಶಾಲೆಗಳಿಗೆ ನಾಲ್ಕು ಮತ್ತು ಐದು ಆಣೆಗಳ ಶುಲ್ಕ ವಿಧಿಸಲಾಗಿತ್ತು. ಗ್ರಾಮೀಣ ಮತ್ತು ಉಪಶಾಲೆಗಳಿಗೆ ಶುಲ್ಕ ಹೀಗಿತ್ತು ಲೋಯರ್ ಪ್ರೈಮರಿ ಇನ್‌ಫೆಂಟ್ ತರಗತಿ–೧, ಶುಲ್ಕ ರಹಿತ; ಹಿರಿಯ ಪ್ರಾಥಮಿಕ ಎರಡು ಮತ್ತು ಮೂರನೇ ತರಗತಿ–ಒಂದು ಆಣೆ; ಮಾಧ್ಯಮಿಕ ಶಾಲೆ ನಾಲ್ಕು ಹಾಗೂ ಐದನೇ ತರಗತಿ–ಎರಡು ಆಣೆ. ಬೋಧನಾ ಮಾಧ್ಯಮ ಸಾಮಾನ್ಯವಾಗಿ ಕನ್ನಡವಾಗಿದ್ದು, ಓದುವುದು, ಬರೆಯುವುದು, ಗಣಿತ ಹಾಗೂ ಭೂಗೋಳಗಳು ಬೋಧನಾ ವಿಷಯಗಳಾಗಿದ್ದವು. ವರ್ನ್ಯಾಕ್ಯುಲರ್ ಅಭ್ಯರ್ಥಿಗಳಿಗಾಗಿ ಮೈಸೂರು ಲೋಕಲ್ ಪರೀಕ್ಷೆ ೧೮೮೬ರಲ್ಲಿ ಪ್ರಾರಂಭವಾಯಿತು. ಧಾರ್ಮಿಕ ಮತ್ತು ನೈತಿಕ ಬೋಧನೆ ೧೯೦೮ರಿಂದ ಪ್ರಾರಂಭಿಸಲ್ಪಟ್ಟಿತು.

ಶೈಕ್ಷಣಿಕ ವರ್ಷ ೧೯೨೩–೨೪ ರಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ತರಗತಿಗಳು ಪ್ರತ್ಯೇಕಿಸಲ್ಪಟ್ಟು ಅದೇ ವರ್ಷದಿಂದ ಪ್ರತೀ ಹಂತ ನಾಲ್ಕು ವರ್ಷಗಳಿಗೆ ನಿಗದಿಯಾಯಿತು. ೧೯೪೧ರಲ್ಲಿ ಶಾಲೆಗೆ ಸೇರಿದ ಪ್ರತೀ ಮಗುವೂ ಸಹ ೧೨ನೇ ವಯಸ್ಸಿನವರೆಗೆ ಶಾಲಾ ಶಿಕ್ಷಣ ಪಡೆಯಬೇಕೆಂಬುದು ಕಡ್ಡಾಯವಾಯಿತು. ೧೯೫೦ರಲ್ಲಿ ಈ ವಯೋಮಿತಿಯನ್ನು ೧೪ಕ್ಕೆ ಏರಿಸಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ಏಕತೆ ಸಾಧಿಸುವ ಉದ್ದೇಶದಿಂದ ಶಿಕ್ಷಣ ಇಲಾಖೆಯ ರಾಜ್ಯದ ಮುಖ್ಯಸ್ಥನನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶಕರು ಎಂದು ಕರೆಯಲಾಯಿತು. ಇವರ ಆಡಳಿತಾನುಕೂಲಕ್ಕೆ ಮೂರು ಮಂದಿ ಉಪನಿರ್ದೇಶಕರೂ, ಎಂಟು ಮಂದಿ ಜಿಲ್ಲಾ ಶಿಕ್ಷಣಾಧಿಕಾರಿಗಳೂ ಇದ್ದರು. ಪ್ರತೀ ಜಿಲ್ಲೆಯನ್ನು ಹಲವು ವಲಯಗಳನ್ನಾಗಿ ವಿಂಗಡಿಸಿ, ಪ್ರತೀ ವಲಯಕ್ಕೆ ಒಬ್ಬ ಸಹಾಯಕ ಇನ್ಸ್‌ಪೆಕ್ಟರ್‌ರನ್ನು ನೇಮಿಸಲಾಯಿತು. ಉರ್ದು ಶಾಲೆಗಳಿಗಾಗಿಯೇ ಒಂದು ಪ್ರತ್ಯೇಕ ವಲಯವಿದ್ದಿತು. ಹೆಣ್ಣು ಮಕ್ಕಳ ಶಾಲೆಗಳ ತಪಾಸಣೆಗಾಗಿ ನಾಲ್ಕು ಮಂದಿ ಮಹಿಳಾ ಇನ್ಸ್‌ಪೆಕ್ಟರ್‌ಗಳಡಿ ಪ್ರತ್ಯೇಕ ಇನ್ಸ್‌ಪೆಕ್ಟರೇಟ್ ಇದ್ದಿತು. ಈ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ, ತಾಯಿ– ತಂದೆಗಳ ಮತ್ತು ಶಿಕ್ಷಕರ ವಿಚಾರ ಸಂಕಿರಣಗಳನ್ನೇರ್ಪಡಿಸುವ ಮೂಲಕ ಮಹಿಳಾ ಶಿಕ್ಷಣದ ಪ್ರಾಮುಖ್ಯತೆಯನ್ನು ಮನದಟ್ಟು ಮಾಡಿಕೊಡುತ್ತಿದ್ದರು.

**ಪ್ರಾಥಮಿಕ ಶಾಲೆಗಳ ಮಾಹಿತಿ ೨೦೦೯–೧೦**

| ತಾಲೂಕು | ಕಿರಿಯ ಪ್ರಾಥಮಿಕ ಶಾಲೆಗಳು | | | | | ಹಿರಿಯ ಪ್ರಾಥಮಿಕ ಶಾಲೆಗಳು | | | | | ಒಟ್ಟು ಪ್ರಾಥಮಿಕ ಶಾಲೆಗಳು | | | | |
|---|---|---|---|---|---|---|---|---|---|---|---|---|---|---|---|
| | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಆಶ್ರಮ ಶಾಲೆ | ಒಟ್ಟು | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಆಶ್ರಮ ಶಾಲೆ | ಒಟ್ಟು | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಆಶ್ರಮ ಶಾಲೆ | ಒಟ್ಟು |
| **ಚಾಮರಾಜನಗರ** | ೧೪೧ | ೦೫ | ೧೩ | ೦೭ | **೧೬೬** | ೧೨೮ | ೦೪ | ೨೧ | ೦೧ | **೧೫೪** | ೨೬೯ | ೦೯ | ೩೪ | ೦೮ | **೩೨೦** |
| **ಗುಂಡ್ಲುಪೇಟೆ** | ೯೪ | ೦ | ೦೭ | ೦೪ | **೧೦೫** | ೯೪ | ೦೩ | ೦೫ | ೦೧ | **೧೦೩** | ೧೮೮ | ೦೩ | ೧೨ | ೦೫ | **೨೦೮** |
| **ಕೊಳ್ಳೇಗಾಲ** | ೪೩ | ೦೨ | ೧೧ | ೦೩ | **೫೯** | ೫೩ | ೧೧ | ೦೭ | ೦ | **೭೧** | ೯೬ | ೧೩ | ೧೮ | ೦೩ | **೧೩೦** |
| **ಹನೂರು*** | ೧೦೦ | ೦೨ | ೦೫ | ೦೮ | **೧೧೫** | ೬೯ | ೧೧ | ೧೦ | ೦೧ | **೯೧** | ೧೬೯ | ೧೩ | ೧೫ | ೦೯ | **೨೦೬** |
| **ಯಳಂದೂರು** | ೨೩ | ೦ | ೦೬ | ೦೧ | **೩೦** | ೩೪ | ೦೩ | ೦೩ | ೦ | **೪೦** | ೫೭ | ೦೩ | ೦೯ | ೦೧ | **೭೦** |
| **ಒಟ್ಟು** | **೪೦೧** | **೦೯** | **೪೨** | **೨೩** | **೪೭೫** | **೩೭೮** | **೩೨** | **೪೬** | **೦೩** | **೪೫೯** | **೭೭೯** | **೪೧** | **೮೮** | **೨೬** | **೯೩೪** |

## ೨೦೧೧-೧೨ರ ಸಾಲಿನ ಬ್ಲಾಕ್‌ವಾರು ಪ್ರಾಥಮಿಕ ಶಾಲೆಗಳ ವಿವರ

| ಕ್ರ.ಸಂ. | ಬ್ಲಾಕ್ ಹೆಸರು | ಸರ್ಕಾರಿ | ಸಮಾಜ ಕಲ್ಯಾಣ ಇಲಾಖೆ | ಅನುದಾನಿತ | ಅನುದಾನರಹಿತ | ಕೇಂದ್ರೀಯ ಶಾಲೆಗಳು | ಒಟ್ಟು |
|---|---|---|---|---|---|---|---|
| ೧ | ಚಾಮರಾಜನಗರ | ೨೬೮ | ೧೦ | ೦೭ | ೪೮ | ೦೨ | ೩೩೫ |
| ೨ | ಗುಂಡ್ಲುಪೇಟೆ | ೧೯೦ | ೦೭ | ೦೩ | ೧೫ | ೦ | ೨೧೫ |
| ೩ | ಹನೂರು | ೧೬೬ | ೧೧ | ೧೩ | ೨೨ | ೦ | ೨೧೨ |
| ೪ | ಕೊಳ್ಳೇಗಾಲ | ೯೫ | ೦೪ | ೧೪ | ೨೩ | ೦ | ೧೩೬ |
| ೫ | ಯಳಂದೂರು | ೫೭ | ೦೨ | ೦೩ | ೧೩ | ೦ | ೭೫ |
| | **ಒಟ್ಟು** | **೭೭೬** | **೩೪** | **೪೦** | **೧೨೧** | **೦೨** | **೯೭೩** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

## ೨೦೧೧-೧೨ರ ಸಾಲಿನ ಬ್ಲಾಕ್‌ವಾರು ಶಿಕ್ಷಕರ ವಿವರ

| ಕ್ರ.ಸಂ. | ಬ್ಲಾಕ್ ಹೆಸರು | ಸರ್ಕಾರಿ | ಸಮಾಜ ಕಲ್ಯಾಣ ಇಲಾಖೆ | ಅನುದಾನಿತ | ಅನುದಾನರಹಿತ | ಒಟ್ಟು |
|---|---|---|---|---|---|---|
| ೧ | ಚಾಮರಾಜನಗರ | ೧೧೧೫ | ೨೮ | ೩೦ | ೩೪೮ | ೧೫೨೧ |
| ೨ | ಗುಂಡ್ಲುಪೇಟೆ | ೬೮೫ | ೪೧ | ೧೪ | ೧೨೫ | ೮೬೫ |
| ೩ | ಹನೂರು | ೫೭೭ | ೪೦ | ೫೭ | ೧೨೦ | ೭೯೪ |
| ೪ | ಕೊಳ್ಳೇಗಾಲ | ೪೭೪ | ೦೮ | ೫೯ | ೧೮೦ | ೭೨೧ |
| ೫ | ಯಳಂದೂರು | ೨೯೩ | ೧೦ | ೧೬ | ೮೪ | ೪೦೩ |
| | **ಒಟ್ಟು** | **೩೧೪೪** | **೧೨೭** | **೧೭೬** | **೮೫೭** | **೪೩೦೪** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

## ೨೦೧೧-೧೨ರ ಸಾಲಿನ ಬ್ಲಾಕ್‌ವಾರು ಮಕ್ಕಳ ವಿವರ

| ಬ್ಲಾಕ್ ಹೆಸರು | ಸರ್ಕಾರಿ | | | ಅನುದಾನಿತ | | | ಅನುದಾನರಹಿತ | | | ಒಟ್ಟು | | |
|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಚಾಮರಾಜ ನಗರ | ೧೪೧೩೯ | ೧೪೪೧೮ | **೨೮೫೫೭** | ೧೩೩೬ | ೧೧೦೨ | **೨೪೩೮** | ೪೬೩೩ | ೩೮೧೮ | **೮೪೫೧** | ೨೦೧೦೮ | ೧೯೩೩೮ | **೩೯೪೪೬** |
| ಗುಂಡ್ಲುಪೇಟೆ | ೯೩೮೫ | ೯೪೯೩ | **೧೮೮೭೮** | ೮೭೭ | ೭೩೮ | **೧೬೧೫** | ೨೩೨೦ | ೧೮೮೭ | **೪೨೦೭** | ೧೨೫೮೨ | ೧೨೧೧೮ | **೨೪೭೦೦** |
| ಹನೂರು | ೭೮೮೩ | ೭೪೪೧ | **೧೫೩೨೪** | ೨೩೧೩ | ೨೧೬೦ | **೪೪೭೩** | ೨೧೫೪ | ೧೫೬೭ | **೩೭೨೧** | ೧೨೩೫೦ | ೧೧೧೬೮ | **೨೩೫೧೮** |
| ಕೊಳ್ಳೇಗಾಲ | ೫೧೦೨ | ೫೪೬೫ | **೧೦೫೬೭** | ೨೨೧೧ | ೧೯೬೫ | **೪೧೭೬** | ೩೧೪೧ | ೨೫೮೪ | **೫೭೨೫** | ೧೦೪೫೪ | ೧೦೦೧೪ | **೨೦೪೬೮** |
| ಯಳಂದೂರು | ೩೨೪೬ | ೩೧೮೯ | **೬೪೩೫** | ೩೦೬ | ೩೨೧ | **೬೨೭** | ೧೦೪೬ | ೭೩೭ | **೧೭೮೩** | ೪೫೯೮ | ೪೨೪೭ | **೮೮೪೫** |
| ಒಟ್ಟು | **೩೯೭೫೫** | **೪೦೦೦೬** | **೭೯೭೬೧** | **೭೦೪೩** | **೬೨೮೬** | **೧೩೩೨೯** | **೧೩೨೯೪** | **೧೦೫೯೩** | **೨೩೮೮೭** | **೬೦೦೯೨** | **೫೬೮೮೫** | **೧೧೬೯೭೭** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

## ೨೦೧೧-೧೨ರ ಸಾಲಿನ ಮಕ್ಕಳ ಮೂಲಭೂತ ಸೌಲಭ್ಯಗಳ ವಿವರ

| ಬ್ಲಾಕ್ ಹೆಸರು | ಒಟ್ಟು ಶಾಲೆಗಳು | ಸರ್ಕಾರಿ ಕಟ್ಟಡ | ಕಟ್ಟಡ | | ಕೊಠಡಿ | | | |
|---|---|---|---|---|---|---|---|---|
| | | | ಬಾಡಿಗೆ ಕಟ್ಟಡ | ಬಾಡಿಗೆ ರಹಿತ ಕಟ್ಟಡ | ಉತ್ತಮ ಕೊಠಡಿಗಳ ಸಂಖ್ಯೆ | ಸಣ್ಣಪ್ರಮಾಣದ ದುರಸ್ತಿ ಆಗಬೇಕಾದ ಕೊಠಡಿಗಳು | ದೊಡ್ಡ ಪ್ರಮಾಣದ ದುರಸ್ತಿ ಆಗಬೇಕಾದ ಕೊಠಡಿಗಳು | ಒಟ್ಟು ತರಗತಿ ಕೊಠಡಿಗಳ ಸಂಖ್ಯೆ |
| ಚಾಮರಾಜನಗರ | ೨೬೮ | ೨೬೨ | ೩ | ೩ | ೮೧೩ | ೨೬೪ | ೧೨೭ | ೧೨೦೪ |
| ಗುಂಡ್ಲುಪೇಟೆ | ೧೯೦ | ೧೮೮ | ೦ | ೨ | ೫೬೭ | ೧೬೯ | ೮೯ | ೮೨೫ |
| ಹನೂರು | ೧೬೬ | ೧೬೫ | ೦ | ೧ | ೪೨೮ | ೧೨೧ | ೬೪ | ೬೧೩ |
| ಕೊಳ್ಳೇಗಾಲ | ೯೫ | ೯೦ | ೨ | ೩ | ೩೪೦ | ೮೪ | ೬೨ | ೪೬೬ |
| ಯಳಂದೂರು | ೫೭ | ೫೭ | ೦ | ೦ | ೧೯೨ | ೫೯ | ೨೩ | ೨೭೪ |
| **ಒಟ್ಟು** | **೭೭೬** | **೭೬೨** | **೫** | **೯** | **೨೩೪೦** | **೬೯೭** | **೩೪೫** | **೩೩೮೨** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

## ೨೦೧೧-೧೨ರ ಸಾಲಿನ ಜಿಲ್ಲೆಯ ಶೈಕ್ಷಣಿಕ ಸೂಚ್ಯಂಕಗಳ ವಿವರ

| ಬ್ಲಾಕ್ ಹೆಸರು | ಒಟ್ಟು ಮಕ್ಕಳ ಸಂಖ್ಯೆ | ಒಟ್ಟು ಶಿಕ್ಷಕರ ಸಂಖ್ಯೆ | ಒಟ್ಟು ಕೊಠಡಿಗಳ ಸಂಖ್ಯೆ | ಪಿಟಿಆರ್ | ಪಿಸಿಆರ್ | ಟಿಸಿಆರ್ |
|---|---|---|---|---|---|---|
| ಚಾಮರಾಜನಗರ | ೨೮೫೫೭ | ೧೧೪೩ | ೧೨೦೪ | ೧:೨೫ | ೧:೨೩.೭ | ೧:೦.೯೪ |
| ಗುಂಡ್ಲುಪೇಟೆ | ೧೮೮೭೮ | ೭೨೬ | ೮೨೫ | ೧:೨೬ | ೧:೨೨.೮ | ೧:೦.೮೮ |
| ಹನೂರು | ೧೫೩೨೪ | ೬೧೭ | ೬೧೩ | ೧:೨೫ | ೧:೨೪.೯ | ೧:೧.೦ |
| ಕೊಳ್ಳೇಗಾಲ | ೧೦೫೬೭ | ೪೮೨ | ೪೬೬ | ೧:೨೨ | ೧:೨೨.೭ | ೧:೧.೦೩ |
| ಯಳಂದೂರು | ೬೪೩೫ | ೩೦೩ | ೨೭೪ | ೧:೨೧ | ೧:೨೩.೪ | ೧:೧.೧೦ |
| **ಒಟ್ಟು** | **೭೯೭೬೧** | **೩೨೭೧** | **೩೩೮೨** | **೧:೨೪** | **೧:೨೩.೬** | **೧:೦.೯೭** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

## ೨೦೧೧-೧೨ರ ಸಾಲಿನ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳ, ಶಿಕ್ಷಕರ ಹಾಗೂ ಕೊಠಡಿಗಳ ಸೂಚ್ಯಂಕಗಳ ವಿವರ

| ಕ್ರ.ಸಂ. | ಬ್ಲಾಕ್ ಹೆಸರು | ಶಾಲೆಗಳು | ಒಟ್ಟು ದಾಖಲಾತಿ | ಒಟ್ಟು ಕೊಠಡಿಗಳು (ಬೋಧನೆ) | ಮಂಜೂರಾದ ಶಿಕ್ಷಕರ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ಪಿಟಿಆರ್ | ಪಿಸಿಆರ್ | ಟಿಸಿಆರ್ |
|---|---|---|---|---|---|---|---|---|---|
| ೧ | ಚಾಮರಾಜನಗರ | ೧೭ | ೧೩೩೧ | ೬೬ | ೮೪ | ೭೭ | ೧:೧೭.೭ | ೧:೨೦ | ೧:೦.೮೫ |
| ೨ | ಗುಂಡ್ಲುಪೇಟೆ | ೦೫ | ೧೩೦ | ೧೬ | ೧೫ | ೧೩ | ೧:೧೦.೦ | ೧:೮ | ೧:೧.೨ |
| ೩ | ಹನೂರು | ೧೨ | ೨೪೨ | ೩೫ | ೩೯ | ೩೦ | ೧:೮.೦ | ೧:೭ | ೧:೧.೨ |
| ೪ | ಕೊಳ್ಳೇಗಾಲ | ೦೮ | ೨೦೬ | ೨೮ | ೨೬ | ೨೬ | ೧:೭.೯ | ೧:೭ | ೧:೧.೧ |
| ೫ | ಯಳಂದೂರು | ೦೫ | ೧೦೦ | ೧೨ | ೧೪ | ೧೩ | ೧:೭.೭ | ೧:೮ | ೧:೦.೯ |
| | ಒಟ್ಟು | **೪೭** | **೨೦೦೯** | **೧೫೭** | **೧೭೮** | **೧೫೯** | **೧:೧೨.೦** | **೧:೧೨.೮** | **೧:೧.೦** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

**೨೦೧೧-೧೨ನೇ ಸಾಲಿನ ಮೂಲಭೂತ ಸೌಕರ್ಯಗಳ ವಿವರ (ಪ್ರಾಥಮಿಕ ಶಾಲಾ ವಿಭಾಗ)** *( ₹ ಲಕ್ಷಗಳಲ್ಲಿ)*

| ಯೋಜನೆಯ ವಿವರ | ಕುಡಿಯುವ ನೀರು | | ಶೌಚಾಲಯ | | ಕಾಂಪೌಂಡ್ | | ಕೊಠಡಿ ನಿರ್ಮಾಣ | | ಪೀಠೋಪಕರಣ | | ಕ್ರೀಡಾ ಸಾಮಗ್ರಿ | | ಕ್ರೀಡಾಂಗಣ ಅಭಿವೃದ್ಧಿ | |
|---|---|---|---|---|---|---|---|---|---|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಪಂಚಸೌಲಭ್ಯ | ೧೦ | ೭.೦೦ | ೪೭ | ೩೨.೧೩ | ೩ | ೨.೦೦೧ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ |
| ವಿಶೇಷ ಅಭಿವೃದ್ಧಿ ಯೋಜನೆ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ |
| ವೈದ್ಯನಾಥನ್ ಸಮಿತಿ ಶಿಫಾರಸ್ಸು | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ |
| ಮುಂದುವರೆದ ಯೋಜನೆ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೨ | ೧.೫೦ | ೧ | ೦.೫೦ |
| ಒಟ್ಟು | ೧೦ | ೭.೦೦ | ೪೭ | ೩೨.೧೩ | ೩ | ೨.೦೦೧ | ೦ | ೦.೦೦ | ೦ | ೦.೦೦ | ೨ | ೧.೫೦ | ೧ | ೦.೫೦ |

**ಮಾಧ್ಯಮಿಕ ಶಿಕ್ಷಣ:** ಈ ಹಂತದ ಶಾಲೆಗಳು ಲೋಯರ್ ಸೆಕೆಂಡರಿ ವರೆಗೆ ತರಗತಿಗಳನ್ನು ಹೊಂದಿದ್ದವು. ಇವುಗಳ ಬೋಧನ ಮಾಧ್ಯಮ ಇಂಗ್ಲಿಷ್ ಅಥವಾ ವರ್ನಾಕ್ಯುಲರ್ (ಮಾತೃಭಾಷೆ) ಆಗಿರುತ್ತಿತ್ತು. ಈ ಹಂತದ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರಕಾರ ೧೯೧೯ ರಲ್ಲಿ ಎಲ್ಲಾ ಸರಕಾರಿ ಮಾಧ್ಯಮಿಕ ಶಾಲೆಗಳಲ್ಲಿ ಎಲ್ಲಾ ರೀತಿಯ ಶುಲ್ಕವನ್ನು ರದ್ದುಪಡಿಸಿತು. ಈ ರೀತಿ ಶುಲ್ಕ ರದ್ದುಪಡಿಸಿದ ಅನುದಾನಿತ ಶಾಲೆಗಳಿಗೆ ಸರಕಾರ ಅಷ್ಟು ಹಣವನ್ನು ಮರು ಪಾವತಿ ಮಾಡುವ ವ್ಯವಸ್ಥೆ ಇದ್ದಿತು. ಮಾಧ್ಯಮಿಕ ಶಾಲೆಗಳಲ್ಲಿ ಗಣಿತ, ಭಾರತದ ಇತಿಹಾಸ, ಭೂಗೋಳ, ಪ್ರಕೃತಿ ಅಧ್ಯಯನ, ವಿಜ್ಞಾನ, ಚಿತ್ರ ಬಿಡಿಸುವುದು, ಕಸೂತಿ, ನೈತಿಕ ಶಿಕ್ಷಣ, ಕೃಷಿ ಮತ್ತು ಶುಚಿತ್ವಗಳು ಬೋಧನಾ ವಿಷಯಗಳಾಗಿದ್ದವು. ಗಣಿತ, ಇಂಗ್ಲಿಷ್, ಇತಿಹಾಸ ಹಾಗೂ ಭೂಗೋಳ ವಿಷಯಗಳನ್ನು ಕಡ್ಡಾಯವಾಗಿ ಇಂಗ್ಲಿಷ್ ಮಾಧ್ಯಮದಲ್ಲಿಯೂ ಉಳಿದೆಲ್ಲ ವಿಷಯಗಳನ್ನು ಕನ್ನಡ ಮಾಧ್ಯಮದಲ್ಲಿಯೂ ಬೋಧಿಸಲಾಗುತ್ತಿತ್ತು. ಶಿಕ್ಷಣ ಮಸೂದೆ ಜಾರಿಯಾದ ನಂತರ ಮಾಧ್ಯಮಿಕ ಶಾಲೆಗಳಲ್ಲಿ ಎಲ್ಲಾ ವಿಷಯಗಳನ್ನು ಸ್ಥಳೀಯ ಭಾಷೆಯಲ್ಲಿಯೇ ಬೋಧಿಸುವ ಕ್ರಮ ಜಾರಿಯಾಯಿತು. ಇಂಗ್ಲಿಷ್ ಭಾಷೆ ಕಡಾಯವಾಗಿ ದ್ವಿತೀಯ ಭಾಷೆಯಾಯಿತು.

ರಾಜ್ಯ ಪುನರ್‌ಸಂಘಟನೆಯ ನಂತರ ಪ್ರಾಥಮಿಕ ಶಿಕ್ಷಣಕ್ಕೆ ಹೊಸ ಆಯಾಮ ದೊರಕಿತು. ನಾಲ್ಕು ವರ್ಷಗಳ ಪ್ರಾಥಮಿಕ ಮತ್ತು ನಾಲ್ಕು ವರ್ಷಗಳ ಮಾಧ್ಯಮಿಕ ಶಿಕ್ಷಣಗಳನ್ನು ಒಂದುಗೂಡಿಸಿ, ಒಂದರಿಂದ ಎಂಟರವರೆಗೆ ಪ್ರಾಥಮಿಕ ಶಾಲಾ ಪದ್ಧತಿ ಪ್ರಾರಂಭಗೊಂಡಿತು. ಮೊದಲ ನಾಲ್ಕು ವರ್ಷಗಳ ಹಂತವನ್ನು ಕಿರಿಯ ಪ್ರಾಥಮಿಕ ಶಾಲೆ ಎಂದೂ, ನಂತರದ ನಾಲ್ಕು ವರ್ಷಗಳ ಹಂತವನ್ನು ಹಿರಿಯ ಪ್ರಾಥಮಿಕ ಶಾಲೆ ಎಂದೂ ಕರೆಯಲಾಯಿತು. ನಂತರದ ವರ್ಷಗಳಲ್ಲಿ ಈ ವ್ಯವಸ್ಥೆ ಪುನರ್ವಿಮರ್ಶೆಗೆ ಒಳಗಾಗಿ ಐದು ಹಾಗೂ ಮೂರು ವರ್ಷಗಳಿಗೆ ಬದಲಾವಣೆ ಮಾಡಲಾಯಿತು. ಆದರೆ ಸಮಗ್ರ ಶಿಕ್ಷಣ ಸಲಹಾ ಸಮಿತಿಯು ಪ್ರಾಥಮಿಕ ಶಿಕ್ಷಣ ಏಳು ವರ್ಷಗಳಿಗೆ ಸೀಮಿತವಾಗಿರಬೇಕೆಂದು ಶಿಫಾರಸ್ಸು ಮಾಡಲಾಗಿ ಇದು ಏಳು ವರ್ಷಗಳ ಸಮಗ್ರ ಪ್ರಾಥಮಿಕ ಹಂತವಾಯಿತು. ಇದನ್ನು ೧೯೫೯–೬೦ ರಿಂದ ೧೯೬೨–೬೩ರ ವರೆಗೆ ಹಂತ ಹಂತವಾಗಿ ಜಾರಿಗೊಳಿಸಲಾಯಿತು. ನಂತರದ ಎಂಟು, ಒಂಭತ್ತು ಹಾಗೂ ಹತ್ತನೇ ತರಗತಿಗಳನ್ನು ಪ್ರೌಢ ಶಿಕ್ಷಣವೆಂದು ಕರೆಯಲಾಯಿತು.

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಬಲವರ್ಧನೆ ಗುಣವರ್ಧನಾ ಕಾರ್ಯಕ್ರಮ:** ಈ ಕಾರ್ಯಕ್ರಮವು ೨೦೦ಕ್ಕಿಂತ ಹೆಚ್ಚು ಮಕ್ಕಳಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಗುಣಾತ್ಮಕತೆ ಮತ್ತು ಉತ್ತಮ ನಿರ್ವಹಣೆಗಾಗಿ ಒತ್ತಾಸೆ ನೀಡುವ ಕಾರ್ಯಕ್ರಮವಾಗಿದ್ದು, ಇದರ ಮುಖ್ಯ ಉದ್ದೇಶ ಎಂದರೆ ಗುಣಾತ್ಮಕತೆ ಭರವಸೆ, ಉತ್ತಮ ನಿರ್ವಹಣೆ, ಶಾಲಾ ಆಧಾರಿತ ಗುಣಾತ್ಮಕ ಸೂಚಿಗಳ ಅನುಪಾಲನೆ ಮತ್ತು ಮಾರ್ಗದರ್ಶನ ಹಾಗೂ ಶಾಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ಸಾಂಸ್ಥಿಕ ಅಭಿವೃದ್ಧಿಗೆ ಒತ್ತು ನೀಡುವುದಾಗಿದೆ.

ಶಿಕ್ಷಣದ ಗುಣಮಟ್ಟ ಚೇತನಕ್ಕಾಗಿ ೨೦೧೨-೧೩ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ: ಶಾಲಾವಾರು ಪಟ್ಟಿ ತಯಾರಿಸಿದ್ದು, ಪಟ್ಟಿಯಲ್ಲಿನ ಮಕ್ಕಳು ಶಾಲೆಗೆ ಸೇರುವಂತೆ ಪೋಷಕರಿಗೆ ಮನವರಿಕೆ ಮಾಡಿ ಆಹ್ವಾನ ನೀಡುವುದು, ಚಿಣ್ಣರ ಅಂಗಳ ಕೇಂದ್ರಗಳನ್ನು ಗುರುತಿಸಿ ಏಪ್ರಿಲ್‌ನಲ್ಲಿ ವ್ಯವಸ್ಥೆ ಮಾಡುವುದು, ಕೆ.ಜಿ.ಬಿ.ವಿ. ಹೆಣ್ಣುಮಕ್ಕಳ ದಾಖಲಾತಿಯ ಕ್ರಮಗಳನ್ನು ಪರಿಶೀಲಿಸುವುದು, ಸ್ವಯಂ ಸೇವಕರು ಮತ್ತು ಶಿಕ್ಷಕರ ಮೂಲಕ ಜಾಗೃತಿ ಕ್ರಮಗಳನ್ನು ಕೈಗೊಳ್ಳುವುದು, ಹಿಂದುಳಿದ ಜನವಸತಿ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಕಿರಿಯ ಪ್ರಾಥಮಿಕ ಶಾಲೆಗಳಲ್ಲಿನ ಎಲ್ಲಾ ಐದನೇ ತರಗತಿ ಮಕ್ಕಳು ಆರನೇ ತರಗತಿಗೆ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಎಲ್ಲಾ ಏಳನೇ ತರಗತಿಯ ಮಕ್ಕಳು ಎಂಟನೇ ತರಗತಿಗೆ ಹಾಜರಾಗುವುದನ್ನು ಖಚಿತಪಡಿಸಿಕೊಳ್ಳುವುದು.

ಜಿಲ್ಲೆಯ ಶಾಲೆಗಳಲ್ಲಿ ತರಗತಿ ಗ್ರಂಥಾಲಯ, ತೆರೆದ ಗ್ರಂಥಾಲಯ, ಓದುವ ಕಾರ್ನರ್ ಸ್ಥಾಪನೆ ಹಾಗೂ ಪುಸ್ತಕ ಪ್ರದರ್ಶನ ಮತ್ತು ಪರಿಚಯ ಇವುಗಳಿದ್ದು, ಈ ಗ್ರಂಥಾಲಯಗಳು ವಿದ್ಯಾರ್ಥಿಗಳ ಉಪಯೋಗಕ್ಕೆ ಬರಲಿವೆ.

## ಪ್ರೌಢ ಶಿಕ್ಷಣ

ಪ್ರಸ್ತುತ ಏಳು ವರ್ಷಗಳ ಪ್ರಾಥಮಿಕ ಶಿಕ್ಷಣ ಹಂತದ ನಂತರದ ಮೂರು ವರ್ಷಗಳ ಶಿಕ್ಷಣವನ್ನು ಪ್ರೌಢ ಶಿಕ್ಷಣ ಎಂದು ಕರೆಯಲಾಗುತ್ತಿದ್ದು, ಇದರಲ್ಲಿ ಎಂಟು, ಒಂಭತ್ತು ಹಾಗೂ ಹತ್ತನೇ ತರಗತಿಗಳು ಸೇರುತ್ತವೆ. ಪ್ರಾಥಮಿಕ ಶಿಕ್ಷಣದಲ್ಲಿ ಕಲಿತ ಎಲ್ಲಾ ಸಾಮರ್ಥ್ಯಗಳನ್ನು ವಿಸ್ತರಿಸುವುದು ಮತ್ತು ಬೆಳೆಸುವುದು ಪ್ರೌಢಶಿಕ್ಷಣದ ಪ್ರಮುಖ ಉದ್ದೇಶವಾಗಿದೆ. ಕೊಳ್ಳೇಗಾಲದಲ್ಲಿ ೧೯೧೬ರಲ್ಲಿ ಪ್ರಾರಂಭಗೊಂಡ ಪ್ರೌಢಶಾಲೆ ಜಿಲ್ಲೆಯ ಅತಿ ಹಳೆಯ ಪ್ರೌಢಶಾಲೆ ಎನ್ನಲಾಗುತ್ತದೆ. ೧೯೧೨ರ ವರೆಗೆ ಆಗಿನ ಮೈಸೂರು ಜಿಲ್ಲೆಯ ಮೆಟ್ರಿಕ್ಯುಲೇಷನ್ ಪರೀಕ್ಷೆ ಮದರಾಸು ವಿಶ್ವವಿದ್ಯಾಲಯದ ಆಡಳಿತದಡಿ ನಡೆಯುತ್ತಿತ್ತು. ೧೯೧೩ರಲ್ಲಿ ಎಸ್.ಎಸ್.ಎಲ್.ಸಿ ಯೋಜನೆ (ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್) ಜಾರಿಯಾಯಿತು. ೧೯೩೭ರಲ್ಲಿ ಪಠ್ಯಕ್ರಮ ಪರಿಷ್ಕರಣಗೊಂಡು, ಕಡ್ಡಾಯ ವಿಷಯಗಳು ಮತ್ತು ಐಚ್ಛಿಕ ವಿಷಯಗಳು ಎಂದು ಅದನ್ನು ಬೇರ್ಪಡಿಸಲಾಯಿತು. ೧೯೪೦ರಲ್ಲಿ ಸರಕಾರ ಮುನಿಸಿಪಾಲಿಟಿಗಳಿಗೆ ಪ್ರೌಢಶಾಲೆಗಳನ್ನು ತೆರೆಯಲು ಅವಕಾಶ ನೀಡಿತು. ೧೯೫೦ರಲ್ಲಿ ಜಿಲ್ಲಾ ಮಂಡಳಿಗಳಿಗೂ ಇದನ್ನು ವಿಸ್ತರಿಸಲಾಯಿತು.

ರಾಜ್ಯ ಪುನರ್ ವಿಂಗಡಣೆಯಾದ ನಂತರ ಪ್ರೌಢಶಾಲೆಗಳಲ್ಲಿ ಏಕರೂಪ ಶುಲ್ಕ ವ್ಯವಸ್ಥೆ ಜಾರಿ ಬಂದಿತು. ಅದರಂತೆ ಸರಕಾರಿ ಶಾಲೆಗಳ ಎಂಟನೇ ತರಗತಿಗೆ ತಿಂಗಳಿಗೆ ನಾಲ್ಕು ರೂ., ಒಂಭತ್ತನೇ ತರಗತಿಗೆ ಐದು ರೂ. ಹತ್ತನೇ ತರಗತಿಗೆ ೫.೫೦ ರೂ. ಹಾಗೂ ಹನ್ನೊಂದನೇ ತರಗತಿಗೆ ಆರು ರೂ. ಎಂದು ನಿಗದಿ ಪಡಿಸಲಾಯಿತು. ೧೯೬೦ ರಲ್ಲಿ ವಾರ್ಷಿಕ ೧೨೦೦ ರೂ.ಗಳಿಗಿಂತ ಕಡಿಮೆ ವರಮಾನವಿದ್ದ ಪೋಷಕರ ಮಕ್ಕಳಿಗೆ ಶುಲ್ಕವನ್ನು ರದ್ದುಮಾಡಲಾಯಿತು. ೧೯೬೨ರ ಈ ವರಮಾನ ಮಿತಿಯನ್ನು ೨,೪೦೦ಕ್ಕೆ ಏರಿಕೆ ಮಾಡಲಾಯಿತು. ಆದರೂ, ವಿದ್ಯಾರ್ಥಿಗಳಿಗೆ ಮೂರು ರೂ. ಕ್ರೀಡಾಶುಲ್ಕ, ಎರಡು ರೂ. ವಾಚನಾಲಯ ಶುಲ್ಕ, ಒಂದು ರೂ. ವೈದ್ಯಕೀಯ ಶುಲ್ಕ, ಎರಡು ರೂ. ದೃಶ್ಯ ಶ್ರವ್ಯ ಶುಲ್ಕ ಹಾಗೂ ಹತ್ತು ರೂ.ಗಳ ಶಾಲಾ ಅಭಿವೃದ್ಧಿ ಶುಲ್ಕ ಕಡ್ಡಾಯವಾಗಿತ್ತು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಇದರಿಂದಲೂ ವಿನಾಯತಿ ಇದ್ದಿತು. ಗ್ರಾಮೀಣ ಮಕ್ಕಳಿಗೆ ಶಾಲಾ ಶಿಕ್ಷಣದ ಮುಂದುವರಿದ ಭಾಗವಾಗಿ, ೧೯೬೪ ರಿಂದ ೧೧ನೇ ತರಗತಿಯನ್ನು ತೆರೆಯುವ ಯೋಜನೆಯನ್ನು ಪ್ರಾರಂಭಿಸಲಾಯಿತು.

**೨೦೦೯–೧೦ರ ಸಾಲಿನ ಜಿಲ್ಲೆಯ ಪ್ರೌಢಶಾಲೆಗಳ ವಿವರ**

| ಕ್ರಮ ಸಂಖ್ಯೆ | ತಾಲೂಕುಗಳು | ಶಾಲೆಗಳ ಸಂಖ್ಯೆ | ಹುಡುಗರು | ಹುಡುಗಿಯರು |
|---|---|---|---|---|
| ೧ | ಚಾಮರಾಜನಗರ | ೫೯ | ೬೭೫೪ | ೬೭೬೦ |
| ೨ | ಕೊಳ್ಳೇಗಾಲ | ೪೧ | ೪೩೦೬ | ೪೧೭೭ |
| ೩ | ಗುಂಡ್ಲುಪೇಟೆ | ೭೦ | ೭೯೩೬ | ೭೪೦೭ |
| ೪ | ಯಳಂದೂರು | ೧೮ | ೨೮೩೦ | ೩೦೪೦ |
| | ಒಟ್ಟು | **೧೮೮** | **೨೧೮೨೬** | **೨೧೩೮೪** |

*ಆಧಾರ: ಚಾಮರಾಜನಗರ ಜಿಲ್ಲಾ ಅಂಕಿ–ಅಂಶಗಳ ನೋಟ*

**೨೦೧೧–೧೨ನೇ ಸಾಲಿನ ಬ್ಲಾಕ್‌ವಾರು/ಆಡಳಿತವಾರು ಪ್ರೌಢಶಾಲೆಗಳ ವಿವರ**

| ಕ್ರ.ಸಂ. | ಬ್ಲಾಕ್ ಹೆಸರು | ಸರ್ಕಾರಿ | ಸಮಾಜ ಕಲ್ಯಾಣ ಇಲಾಖೆ | ಅನುದಾನಿತ | ಅನುದಾನ ರಹಿತ | ಕೇಂದ್ರೀಯ ಶಾಲೆಗಳು | ಒಟ್ಟು |
|---|---|---|---|---|---|---|---|
| ೧ | ಚಾಮರಾಜನಗರ | ೨೮ | ೦೩ | ೦೮ | ೨೧ | ೦೧ | ೬೧ |
| ೨ | ಗುಂಡ್ಲುಪೇಟೆ | ೧೯ | ೦೫ | ೦೬ | ೧೫ | ೦೦ | ೪೫ |
| ೩ | ಹನೂರು | ೧೮ | ೦೨ | ೧೦ | ೦೭ | ೦೦ | ೩೭ |
| ೪ | ಕೊಳ್ಳೇಗಾಲ | ೧೧ | ೦೨ | ೦೯ | ೧೬ | ೦೦ | ೩೮ |
| ೫ | ಯಳಂದೂರು | ೦೬ | ೦೧ | ೦೪ | ೦೮ | ೦೦ | ೧೯ |
| | ಒಟ್ಟು | **೮೨** | **೧೩** | **೩೭** | **೬೭** | **೦೧** | **೨೦೦** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ವಾರ್ಷಿಕ ವರದಿ*

## ೨೦೧೧–೧೨ನೇ ಸಾಲಿನ ಬ್ಲಾಕ್‌ವಾರು ಪ್ರೌಢಶಾಲೆಗಳ ಶಿಕ್ಷಕರ ಮಾಹಿತಿ

| ಕ್ರ.ಸಂ. | ಬ್ಲಾಕ್ ಹೆಸರು | ಸರ್ಕಾರಿ | | ಸಮಾಜ ಕಲ್ಯಾಣ ಇಲಾಖೆ | | ಅನುದಾನಿತ | | ಒಟ್ಟು | |
|---|---|---|---|---|---|---|---|---|---|
| | | ಮಂಜೂರಾದ | ಭರ್ತಿಯಾದ ಹುದ್ದೆಗಳು | ಮಂಜೂರಾದ | ಭರ್ತಿಯಾದ ಹುದ್ದೆಗಳು | ಮಂಜೂರಾದ | ಭರ್ತಿಯಾದ ಹುದ್ದೆಗಳು | ಮಂಜೂರಾದ | ಭರ್ತಿಯಾದ ಹುದ್ದೆಗಳು |
| ೧ | ಚಾಮರಾಜನಗರ | ೩೧೪ | ೨೭೧ | ೨೫ | ೧೫ | ೮೭ | ೭೪ | ೪೨೬ | ೩೬೦ |
| ೨ | ಗುಂಡ್ಲುಪೇಟೆ | ೨೦೧ | ೧೫೭ | ೩೬ | ೩೬ | ೫೬ | ೪೬ | ೨೯೩ | ೨೩೯ |
| ೩ | ಹನೂರು | ೧೪೮ | ೧೨೫ | ೧೬ | ೧೬ | ೭೫ | ೬೭ | ೨೩೯ | ೨೦೮ |
| ೪ | ಕೊಳ್ಳೇಗಾಲ | ೧೨೬ | ೧೧೪ | ೦೫ | ೦೫ | ೮೨ | ೭೦ | ೨೧೩ | ೧೮೯ |
| ೫ | ಯಳಂದೂರು | ೫೬ | ೫೫ | ೦೮ | ೦೮ | ೨೮ | ೨೮ | ೯೨ | ೯೧ |
| | **ಒಟ್ಟು** | **೮೪೫** | **೭೨೨** | **೮೦** | **೮೦** | **೩೨೮** | **೨೮೫** | **೧೨೬೩** | **೧೦೮೭** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ವಾರ್ಷಿಕ ವರದಿ*

## ೨೦೧೧–೧೨ನೇ ಸಾಲಿನ ತರಗತಿವಾರು ವಿದ್ಯಾರ್ಥಿಗಳ ವಿವರ

| ಕ್ರ.ಸಂ. | ತರಗತಿ | ಸರ್ಕಾರಿ | ಅನುದಾನಿತ | ಅನುದಾನರಹಿತ | ಕೇಂದ್ರೀಯ ಶಾಲೆ | ಒಟ್ಟು |
|---|---|---|---|---|---|---|
| ೧ | ೧ನೇ | ೯೩೧೬ | ೧೩೩೪ | ೩೭೯೯ | ೧೬೫ | ೧೪೬೧೪ |
| ೨ | ೨ನೇ | ೯೪೪೯ | ೧೩೬೧ | ೩೪೨೬ | ೧೭೦ | ೧೪೪೦೬ |
| ೩ | ೩ನೇ | ೯೪೪೮ | ೧೪೪೮ | ೩೧೭೯ | ೧೪೫ | ೧೪೨೨೦ |
| ೪ | ೪ನೇ | ೯೮೫೭ | ೧೪೫೨ | ೨೮೪೬ | ೧೩೦ | ೧೪೨೮೫ |
| ೫ | ೫ನೇ | ೧೦೬೭೩ | ೧೪೯೦ | ೨೫೩೯ | ೧೧೦ | ೧೪೮೧೨ |
| ೬ | ೬ನೇ | ೧೧೨೫೮ | ೧೬೫೫ | ೨೬೨೨ | ೧೧೫ | ೧೫೬೫೦ |
| ೭ | ೭ನೇ | ೧೧೫೨೦ | ೧೬೧೩ | ೨೨೮೯ | ೭೦ | ೧೫೪೯೨ |
| ೮ | ೮ನೇ | ೯೭೪೨ | ೨೭೩೭ | ೨೫೮೧ | ೭೨ | ೧೫೧೩೨ |
| ೯ | ೯ನೇ | ೭೯೨೮ | ೩೦೬೧ | ೨೯೨೦ | ೪೩ | ೧೩೯೫೨ |
| ೧೦ | ೧೦ನೇ | ೬೯೧೭ | ೨೯೮೨ | ೨೯೦೬ | ೪೫ | ೧೨೮೫೦ |
| | **ಒಟ್ಟು** | **೯೬೧೦೮** | **೧೯೧೩೩** | **೨೯೧೦೭** | **೧೦೬೫** | **೧೪೫೪೧೩** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ವಾರ್ಷಿಕ ವರದಿ*

೨೦೧೦–೧೧ರ ಸಾಲಿನಲ್ಲಿ ಜಿಲ್ಲೆಯು ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದಲ್ಲಿ ೧೮ನೇ ಸ್ಥಾನದಲ್ಲಿದ್ದು, ೨೦೧೧–೧೨ನೇ ಸಾಲಿನಲ್ಲಿ ಫಲಿತಾಂಶವನ್ನು ಉತ್ತಮಪಡಿಸುವ ದಿಸೆಯಲ್ಲಿ ಶಾಲಾ ಹಂತದ ಹಾಗೂ ಜಿಲ್ಲಾ ಹಂತದಲ್ಲಿ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

## ಉಚಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರ ಸರಬರಾಜು ಯೋಜನೆ

ಮೇಲ್ಕಂಡ ಯೋಜನೆಯಡಿ ಪ್ರಾಥಮಿಕ ಹಂತದಲ್ಲಿ ಮಕ್ಕಳು ಶಾಲೆಗೆ ಹಾಜರಾಗುವಂತೆ ಪ್ರೋತ್ಸಾಹಿಸಲು ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬರುವ ಮಕ್ಕಳಿಗೆ ಅನುಕೂಲವಾಗುವಂತೆ ಸರಕಾರ ವಿವಿಧ ತರಗತಿಗಳ ಮಕ್ಕಳಿಗೆ ವಿವಿಧ ರೀತಿಗಳಲ್ಲಿ ಉಚಿತವಾಗಿ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದರಂತೆ, ಒಂದರಿಂದ ಏಳನೇ ತರಗತಿಗಳ ಸರ್ಕಾರಿ ಶಾಲೆಗಳ ಎಲ್ಲಾ ಮಕ್ಕಳಿಗೆ; ಎಂಟನೇ ತರಗತಿಯ ಸರ್ಕಾರಿ ಶಾಲೆಗಳ ಎಲ್ಲಾ ಹೆಣ್ಣು ಮಕ್ಕಳಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಗಂಡು ಮಕ್ಕಳಿಗೆ; ಮತ್ತು ಒಂಭತ್ತು ಮತ್ತು ಹತ್ತನೇ ತರಗತಿಯ ಎಲ್ಲಾ ಸರ್ಕಾರಿ ಶಾಲೆಯ ಹೆಣ್ಣು ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಗುತ್ತಿದೆ.

(ಲಕ್ಷ ₹ ಗಳಲ್ಲಿ)

| ಯೋಜನೆಯ ವಿವರ | ಕುಡಿಯುವ ನೀರು | | ಶೌಚಾಲಯ | | ಕಾಂಪೌಂಡ್ | | ಕೊಠಡಿ ನಿರ್ಮಾಣ | | ಪೀಠೋಪಕರಣ | | ಕ್ರೀಡಾ ಸಾಮಗ್ರಿ | | ಕ್ರೀಡಾಂಗಣ ಅಭಿವೃದ್ಧಿ | | ದೈಶಿಶಿ ವೇತನ | |
|---|---|---|---|---|---|---|---|---|---|---|---|---|---|---|---|---|
| | ಘಟಕ | ಮೊತ್ತ | ಘಟಕ | ಮೊತ್ತ | ಘಟಕ | ಮೊತ್ತ | ಘಟಕ | ಮೊತ್ತ | ಘಟಕ | ಮೊತ್ತ | ಘಟಕ | ಮೊತ್ತ | ಘಟಕ | ಮೊತ್ತ | ಘಟಕ | ಮೊತ್ತ |
| ಪಂಚಸೌಲಭ್ಯ | ೧೦ | ೭.೦೦ | ೪೫ | ೬೮.೮೫ | ೩ | ೧.೬೭೬ | ೦ | ೦.೦೦ | ೦ | ೦.೦೦೦ | ೦ | ೦.೦೦ | ೦ | ೦.೦೦ | ೦ | ೦.೦೦ |
| ವಿಶೇಷ ಅಭಿವೃದ್ಧಿ ಯೋಜನೆ | ೦ | ೦.೦೦ | ೦ | ೦.೦೦ | ೩ | ೩.೯೪೭ | ೦ | ೦.೦೦ | ೦ | ೦.೦೦೦ | ೦ | ೦.೦೦ | ೦ | ೦.೦೦ | ೦ | ೦.೦೦ |
| ಮೂಲಭೂತ ಸೌಕರ್ಯದಡಿ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೬ | ೨.೯೭೫ | ೦ | ೦.೦೦ | ೦ | ೦.೦೦ | ೦ | ೦.೦೦ |
| ರಾಜ್ಯವಲಯ ಯೋಜನೇತರಡಿ | ೦ | ೦.೦೦ | ೦ | ೦.೦೦ | ೦ | ೦.೦೦ | ೧೪ | ೬೮.೧೦ | ೦ | ೦.೦೦೦ | ೦ | ೦.೦೦ | ೦ | ೦.೦೦ | ೦ | ೦.೦೦ |
| ವೈದ್ಯನಾಥನ್ ಸಮಿತಿ ಶಿಫಾರಸ್ಸು | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦೦ | ೧ | ೨.೫೦ | ೨ | ೧.೦೦ | ೧ | ೧.೫೧ |
| ಮುಂದುವರೆದ ಯೋಜನೆ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦ | ೦ | ೦.೦೦೦ | ೩ | ೪.೦೦ | ೧ | ೦.೫೦ | ೦ | ೦.೦೦ |
| ಒಟ್ಟು | ೧೦ | ೭.೦೦ | ೪೫ | ೬೮.೮೫ | ೬ | ೫.೬೨೩ | ೧೪ | ೬೮.೧೦ | ೬ | ೨.೯೭೫ | ೪ | ೬.೫೦ | ೩ | ೧.೫೦ | ೧ | ೧.೫೧ |

*ಆಧಾರ: ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

### ಉಚಿತ ಪಠ್ಯ ಪುಸ್ತಕಗಳ ವಿತರಣಾ ವಿವರ

| ವಿವರ | ಬೇಡಿಕೆ | ಪೂರೈಕೆ | ವಿತರಣೆ | ಇನ್ನೂ ಪೂರೈಕೆ ಆಗಬೇಕಾದ ಪುಸ್ತಕಗಳು |
|---|---|---|---|---|
| ಉಚಿತ ಪಠ್ಯಪುಸ್ತಕಗಳು | ೫೮೫೧೯೯ | ೫೮೫೧೯೯ | ೫೮೫೧೯೯ | – |
| ಮಾರಾಟ ಪಠ್ಯಪುಸ್ತಕಗಳು | ೨೩೩೪೦೧ | ೨೩೩೪೦೧ | ೧೧೯೦೮೦ | ೧೧೪೩೨೧ |

*ಆಧಾರ: ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

ಸಮವಸ್ತ್ರ ಹಂಚಿಕೆಯಲ್ಲಿ ಅಲ್ಪ ಬದಲಾವಣೆ ಇದ್ದು, ಒಂದರಿಂದ ಏಳನೇ ತರಗತಿಯ ಸರ್ಕಾರಿ ಶಾಲೆಗಳ ಎಲ್ಲಾ ಮಕ್ಕಳಿಗೆ ಹಾಗೂ ೮ ರಿಂದ ೧೦ನೇ ತರಗತಿಯ ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಿಸಲಾಗಿದೆ.

**ಉಚಿತ ಸಮವಸ್ತ್ರ ವಿತರಣಾ ವಿವರ ೨೦೦೭-೦೮**

| ಕ್ರಸಂ | ತಾಲೂಕು | ೧ ರಿಂದ ೭ನೇ ತರಗತಿ | | ೮ ರಿಂದ ೧೦ನೇ ತರಗತಿಗಳಲ್ಲಿನ ಬಾಲಕಿಯರು |
|---|---|---|---|---|
| | | ಬಾಲಕರು | ಬಾಲಕಿಯರು | |
| ೧. | ಚಾಮರಾಜನಗರ | ೧೬,೫೫೦ | ೧೬,೫೨೪ | ೫,೨೭೯ |
| ೨. | ಗುಂಡ್ಲುಪೇಟೆ | ೧೦,೩೪೦ | ೧೦,೧೫೧ | ೩,೫೩೫ |
| ೩. | ಕೊಳ್ಳೇಗಾಲ | ೬,೬೩೬ | ೬,೬೬೯ | ೧,೯೧೭ |
| ೪. | ಹನೂರು ವಲಯ | ೮,೮೨೯ | ೮,೧೯೫ | ೧,೧೭೩ |
| ೫. | ಯಳಂದೂರು | ೪,೩೪೦ | ೪,೪೫೧ | ೧,೨೬೭ |
| | ಒಟ್ಟು | **೪೬,೯೬೫** | **೪೫,೯೯೦** | **೧೩,೧೭೧** |

**ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಸರಬರಾಜಾದ ಸಮವಸ್ತ್ರದ ವಿವರ ೨೦೦೮-೦೯**

| ತಾಲೂಕಿನ ಹೆಸರು | ೧ ರಿಂದ ೨ | | | ೩ ರಿಂದ ೪ | | | ೫ ರಿಂದ ೭ | | | ೧ ರಿಂದ ೭ | | |
|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಚಾಮರಾಜನಗರ | ೪೭೫೯ | ೪೪೬೩ | **೯೨೨೨** | ೪೫೬೦ | ೪೬೮೧ | **೯೨೪೧** | ೭೩೨೩ | ೭೪೨೨ | **೧೪೭೪೫** | ೧೬೬೪೨ | ೧೬೫೬೬ | **೩೩೨೦೮** |
| ಗುಂಡ್ಲುಪೇಟೆ | ೨೮೫೦ | ೨೯೩೮ | **೫೭೮೮** | ೩೦೨೮ | ೨೯೦೭ | **೫೯೩೫** | ೪೭೯೮ | ೪೬೮೪ | **೯೪೮೨** | ೧೦೬೭೬ | ೧೦೫೨೯ | **೨೧೨೦೫** |
| ಕೊಳ್ಳೇಗಾಲ | ೧೭೪೯ | ೧೮೧೦ | **೩೫೫೯** | ೧೮೧೫ | ೧೭೬೦ | **೩೫೭೫** | ೩೦೪೭ | ೩೦೫೩ | **೬೧೦೦** | ೬೬೧೧ | ೬೬೨೩ | **೧೩೨೩೪** |
| ಹನೂರು | ೨೫೦೬ | ೨೩೬೭ | **೪೮೭೩** | ೨೫೪೫ | ೨೩೧೮ | **೪೮೬೩** | ೩೬೯೧ | ೩೩೬೧ | **೭೦೫೨** | ೮೭೪೨ | ೮೦೪೬ | **೧೬೭೮೮** |
| ಯಳಂದೂರು | ೧೦೧೪ | ೧೦೮೯ | **೨೧೦೩** | ೧೦೩೩ | ೧೦೩೪ | **೨೦೬೭** | ೧೭೫೯ | ೧೮೨೦ | **೩೫೭೯** | ೩೮೦೬ | ೩೯೪೩ | **೭೭೪೯** |
| ಒಟ್ಟು | **೧೨೮೭೮** | **೧೨೬೬೭** | **೨೫೫೪೫** | **೧೨೯೮೧** | **೧೨೭೦೦** | **೨೫೬೮೧** | **೨೦೬೧೮** | **೨೦೩೪೦** | **೪೦೯೫೮** | **೪೬೪೭೭** | **೪೫೭೦೭** | **೯೨೧೮೪** |

| ತಾಲೂಕಿನ ಹೆಸರು | ೮ | | | ೯ | | | ೧೦ | | | ೮ ರಿಂದ ೧೦ | | | ೧ ರಿಂದ ೧೦ | | |
|---|---|---|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಚಾಮರಾಜನಗರ | ೧೯೪೬ | ೧೯೬೧ | ೩೯೦೭ | ೧೬೮೫ | ೧೭೭೮ | ೩೪೬೩ | ೧೬೨೮ | ೧೫೨೩ | ೩೧೫೧ | ೫೨೫೯ | ೫೨೬೨ | ೧೦೫೨೧ | ೨೧೯೦೧ | ೨೧೮೨೮ | ೪೩೭೨೯ |
| ಗುಂಡ್ಲುಪೇಟೆ | ೧೧೭೧ | ೧೧೦೩ | ೨೨೭೪ | ೯೨೬ | ೮೮೦ | ೧೮೦೬ | ೬೬೧ | ೬೪೩ | ೧೩೦೪ | ೨೭೫೮ | ೨೬೨೬ | ೫೩೮೪ | ೧೩೪೩೪ | ೧೩೧೫೫ | ೨೬೫೮೯ |
| ಕೊಳ್ಳೇಗಾಲ | ೫೦೧ | ೬೮೯ | ೧೧೯೦ | ೪೬೭ | ೬೩೯ | ೧೧೦೬ | ೩೬೯ | ೫೭೯ | ೯೪೮ | ೧೩೩೭ | ೯೦೭ | ೨೨೪೪ | ೭೯೪೮ | ೮೫೩೦ | ೧೬೪೭೮ |
| ಹನೂರು | ೬೭೬ | ೫೦೬ | ೧೧೮೨ | ೪೬೭ | ೩೩೮ | ೮೦೫ | ೩೫೬ | ೨೮೯ | ೬೪೫ | ೧೪೯೯ | ೧೧೩೩ | ೨೬೩೨ | ೧೦೨೪೧ | ೯೧೭೯ | ೧೯೪೨೦ |
| ಯಳಂದೂರು | ೨೫೭ | ೧೭೪ | ೪೩೧ | ೨೩೦ | ೧೬೯ | ೩೯೯ | ೧೯೨ | ೧೭೭ | ೩೬೯ | ೬೭೯ | ೫೨೦ | ೧೧೯೯ | ೪೪೮೫ | ೪೪೬೩ | ೮೯೪೮ |
| **ಒಟ್ಟು** | **೪೫೫೧** | **೪೪೩೩** | **೮೯೮೪** | **೩೭೭೫** | **೩೮೦೪** | **೭೫೭೯** | **೩೨೦೬** | **೩೨೧೧** | **೬೪೧೭** | **೧೧೫೩೨** | **೧೧೪೪೮** | **೨೨೯೮೦** | **೫೮೦೦೯** | **೫೭೧೫೫** | **೧೧೫೧೬೪** |

**ಉಚಿತ ಸೈಕಲ್ ವಿತರಣೆ:** ಶಾಲೆಗಳಲ್ಲಿ ವಿದ್ಯಾರ್ಥಿಗಳು ಸಮಯಪಾಲನೆ ಮಾಡಲು ಅನುಕೂಲವಾಗುವಂತೆ ಹಾಗೂ ಶಾಲಾ ಸಮಯದ ನಂತರ ಶೀಘ್ರ ಮನೆಗೆ ತಲುಪಲು ಅನುಕೂಲವಾಗುವಂತೆ ಸರಕಾರ ಉಚಿತ ಸೈಕಲ್ ವಿತರಣೆಯ ಹೊಸ ಯೋಜನೆಯನ್ನು ಹಮ್ಮಿಕೊಂಡಿದ್ದು, ಇದರಡಿ, ೨೦೦೭–೦೮ ಮತ್ತು ೨೦೦೮–೦೯ನೇ ಸಾಲಿಗೆ ವಿತರಿಸಿರುವ ಸೈಕಲ್‌ಗಳ ತಾಲೂಕುವಾರು ಅಂಕಿ–ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

**೨೦೦೮–೦೯ರ ಸಾಲಿನಲ್ಲಿನ ತಾಲೂಕುವಾರು ಉಚಿತ ಸೈಕಲ್ ವಿತರಣಾ ವಿವರ**

| ಕ್ರಸಂ | ತಾಲೂಕು | ಫಲಾನುಭವಿಗಳು | | ಒಟ್ಟು |
|---|---|---|---|---|
| | | ಗಂಡು | ಹೆಣ್ಣು | |
| ೧. | ಚಾಮರಾಜನಗರ | ೨೦೧೦ | ೧೯೭೪ | ೩೯೮೪ |
| ೨. | ಗುಂಡ್ಲುಪೇಟೆ | ೧೨೪೨ | ೧೨೨೦ | ೨೪೬೨ |
| ೩. | ಕೊಳ್ಳೇಗಾಲ | ೬೯೨ | ೯೦೨ | ೧೫೯೪ |
| ೪. | ಹನೂರು ವಲಯ | ೮೨೮ | ೬೬೯ | ೧೪೯೭ |
| ೫. | ಯಳಂದೂರು | ೪೩೭ | ೪೧೭ | ೮೫೪ |
| | **ಒಟ್ಟು** | **೫೨೦೯** | **೫೧೮೨** | **೧೦೩೯೧** |

### ೨೦೧೦-೧೧ ಹಾಗೂ ೨೦೧೧-೧೨ನೇ ಸಾಲಿನಲ್ಲಿ ಜಿಲ್ಲೆಯಲ್ಲಿನ ಉಚಿತ ಸೈಕಲ್‌ಗಳ ಬೇಡಿಕೆ, ಸರಬರಾಜು ಹಾಗೂ ವಿತರಣಾ ಮಾಹಿತಿ

| ವಿವರ | | ಬೇಡಿಕೆ | ಪೂರೈಕೆ | ವಿತರಣೆ |
|---|---|---|---|---|
| ೨೦೧೦-೧೧ | ಗಂಡು | ೪೯೦೨ | ೪೮೩೦ | ೪೮೩೦ |
| | ಹೆಣ್ಣು | ೪೯೩೮ | ೪೮೨೧ | ೪೮೨೧ |
| ೨೦೧೧-೧೨ | ಗಂಡು | ೫೦೪೪ | ೪೯೩೦ | ೪೯೩೦ |
| | ಹೆಣ್ಣು | ೪೮೨೨ | ೪೮೮೯ | ೪೮೮೯ |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

### ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಇರುವ ವಿಶೇಷ ಕಾರ್ಯಕ್ರಮಗಳು ೨೦೧೧-೧೨ನೇ ಸಾಲಿನ ಬ್ಲಾಕ್‌ವಾರು ಮಾಹಿತಿ

| ಕ್ರ.ಸಂ. | ಬ್ಲಾಕ್ ಹೆಸರು | ಶಾಲಾ ಬ್ಯಾಗ್ | | ನೋಟ್ ಪುಸ್ತಕ | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೧ | ಚಾಮರಾಜನಗರ | ೨೨೫೯ | ೧.೧೩೦ | ೮೩೦೨ | ೭.೨೯೨ |
| ೨ | ಗುಂಡ್ಲುಪೇಟೆ | ೧೬೩೪ | ೦.೮೧೭ | ೫೬೩೬ | ೪.೮೮೧ |
| ೩ | ಹನೂರು | ೧೬೧೪ | ೦.೮೦೭ | ೪೬೬೪ | ೩.೯೨೪ |
| ೪ | ಕೊಳ್ಳೇಗಾಲ | ೧೨೬೩ | ೦.೬೩೧೫ | ೪೮೫೮ | ೧.೨೩೪ |
| ೫ | ಯಳಂದೂರು | ೮೫೦ | ೦.೪೨೫ | ೨೮೬೧ | ೨.೪೭೭ |
| | ಒಟ್ಟು | **೭೬೨೦** | **೩.೮೧೦** | **೨೬೩೨೧** | **೧೯.೮೦೮** |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

ಮಾಹಿತಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಧಾಪುಗಾಲು ಹಾಕುತ್ತಿರುವ ಜಾಗತಿಕ ಪ್ರಪಂಚದಲ್ಲಿ ಪ್ರಾಥಮಿಕ ಹಂತದಿಂದಲೇ ಶಿಕ್ಷಣವನ್ನು ಮಕ್ಕಳಿಗೆ ಪರಿಚಯಿಸುವ ಉದ್ದೇಶದಿಂದ ಸರಕಾರ ಎಲ್ಲಾ ಶಾಲಾ ಕಾಲೇಜುಗಳಲ್ಲಿ 'ಎಜುಸ್ಯಾಟ್' ಶಿಕ್ಷಣವನ್ನು ಪ್ರಾರಂಭಿಸಿ, ಅದಕ್ಕೆ ಸಂಬಂಧಿಸಿದಂತೆ ದೂರದರ್ಶನ ಹಾಗೂ ಇನ್ನಿತರ ಸಲಕರಣೆಗಳನ್ನು ಒದಗಿಸಿದೆ. ಅಂತಹ ಶಾಲೆಗಳ ಅಂಕಿ-ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

### ಎಜುಸ್ಯಾಟ್ ಶಿಕ್ಷಣದ ವಿವರ

| ಬ್ಲಾಕ್ ಹೆಸರು | ವ್ಯವಸ್ಥೆ ಅಳವಡಿಸಿದ ಶಾಲೆಗಳ ಸಂಖ್ಯೆ | ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳ ಸಂಖ್ಯೆ | ವ್ಯವಸ್ಥೆ ದುರಸ್ಥಿಯಲ್ಲಿರುವ ಶಾಲೆಗಳ ಸಂಖ್ಯೆ | ಷರಾ |
|---|---|---|---|---|
| ಚಾಮರಾಜನಗರ | ೨೮೮ | ೨೭೫ | ೧೩ | ೩೭ ಶಾಲೆಗಳಲ್ಲಿ ಟಿ.ವಿ.ಗೆ ಸಂಬಂಧಿಸಿದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಬೇಕಾದ ಸಮಸ್ಯೆಗಳಿದ್ದು, ಸಂಬಂಧಿಸಿದ ಬಿಇಎಲ್ ಕಂಪನಿಗೆ ಈ ಬಗ್ಗೆ ವರದಿ ಮಾಡಿ ಉಳಿದಂತೆ ಪ್ರತಿ ತಾಲೂಕಿನಲ್ಲಿಯೂ ಸೇವಾ ಕೇಂದ್ರಗಳನ್ನು ಪ್ರಾರಂಭಿಸಿದ್ದು, ೨೪ ಗಂಟೆಯ ಒಳಗಾಗಿ ತಾಂತ್ರಿಕ ತೊಂದರೆಗಳಿದ್ದಲ್ಲಿ ಸರಿಪಡಿಸಲಾಗುತ್ತಿದೆ. |
| ಗುಂಡ್ಲುಪೇಟೆ | ೨೦೩ | ೨೦೧ | ೦೨ | |
| ಕೊಳ್ಳೇಗಾಲ | ೧೧೪ | ೧೦೩ | ೧೧ | |
| ಹನೂರು | ೧೯೪ | ೧೮೬ | ೦೮ | |
| ಯಳಂದೂರು | ೬೯ | ೬೬ | ೦೩ | |
| ಒಟ್ಟು | **೮೬೮** | **೮೩೧** | **೩೭** | |

## ಶಾಲೆ ಬಿಟ್ಟ ಮಕ್ಕಳಿಗಾಗಿ ವಿಶೇಷ ಯೋಜನೆ – ದಾಖಲಾತಿ ಆಂದೋಲನ

ಪ್ರಾಥಮಿಕ ಹಂತದಿಂದ ಪದವಿಪೂರ್ವ ಹಂತದವರೆಗೆ ವಿವಿಧ ಕಾರಣಗಳಿಂದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸದೆ ಶಾಲೆ ಬಿಡಬಹುದಾದ ಸಂದರ್ಭಗಳು ಎಲ್ಲೆಡೆ ಉದ್ಭವಿಸುತ್ತವೆ. ಶಾಲೆ ಬಿಟ್ಟ ಹಾಗೂ ಶಾಲೆಗೆ ಸೇರಬೇಕಾದ ಮಕ್ಕಳನ್ನು ಗುರುತಿಸಿ ವಿದ್ಯಾರ್ಥಿಗಳ ತಂದೆ ತಾಯಿ, ಪೋಷಕರನ್ನು ಸಂಪರ್ಕಿಸಿ ಅವರ ಮಕ್ಕಳನ್ನು ಶಾಲೆಗೆ ನಿಯಮಿತವಾಗಿ ಕಳುಹಿಸುವಂತೆ ಮನವೊಲಿಸುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. ೨೦೦೯–೧೦ನೇ ಸಾಲಿನಲ್ಲಿ ದಾಖಲಾತಿ ಆಂದೋಲನ ಕಾರ್ಯಕ್ರಮಗಳಿಂದ ೦.೯೩ ಲಕ್ಷ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲಾಗಿದೆ. ಚಿಣ್ಣರ ಅಂಗಳ, ವಸತಿರಹಿತ, ವಸತಿಸಹಿತ, ಗೃಹಾಧಾರಿತ ಶಿಕ್ಷಣ, ಅಲ್ಪಾವಧಿ, ದೀರ್ಘಕಾಲಾವಧಿ ಶಾಲೆಗಳು, ಸಂಚಾರಿ ಶಾಲೆಗಳು, ಶಾಲೆ ದೂರ ಇರುವ ಮಕ್ಕಳಿಗೆ ಸಂಚಾರಿ ವ್ಯವಸ್ಥೆ ಸಮುದಾಯದತ್ತ ಶಾಲಾ ಕಾರ್ಯಕ್ರಮ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಶಾಲೆ ಬಿಟ್ಟ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲಾಗುತ್ತಿದೆ. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಕ್ಕಳು ಪಡೆಯಬೇಕೆಂಬ ಸದುದ್ದೇಶದಿಂದ ಸರಕಾರ ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಹಲವಾರು ಯೋಜನೆಗಳು ಹಾಗೂ ಅವುಗಳ ಅನುಷ್ಠಾನದ ವಿವರಗಳನ್ನು ಈ ಮುಂದೆ ನೀಡಲಾಗಿದೆ.

**೨೦೦೮–೦೯ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮುಖ್ಯವಾಹಿನಿಗೆ ದಾಖಲಾದ ಮಕ್ಕಳ ಮತ್ತು ವಿವಿಧ ಕಾರ್ಯತಂತ್ರಗಳಲ್ಲಿ ಅಳವಡಿಸಿಕೊಂಡಿರುವ ಮಕ್ಕಳ ವಿವರ.**

| ಬ್ಲಾಕ್ | ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ | ಮುಖ್ಯವಾಹಿನಿಗೆ ಬಂದ ಮಕ್ಕಳ ವಿವರ | | | | | ವಿವಿಧ ಕಾರ್ಯತಂತ್ರಗಳಲ್ಲಿ ಅಳವಡಿಸಿಕೊಂಡಿರುವ ಮಕ್ಕಳ ವಿವರ | | | |
|---|---|---|---|---|---|---|---|---|---|---|
| | | ಚಿಣ್ಣರ ಅಂಗಳ | ದಾಖಲಾತಿ ಆಂದೋಲನ | ವಿಶೇಷ ದಾಖಲಾತಿ ಆಂದೋಲನ | ಗೃಹಾಧಾರಿತ ಶಿಕ್ಷಣ | ಒಟ್ಟು | ಟಿ.ಸಿ.ಸಿ. | ಡಿ.ಟಿ.ಸಿ. | ಮದರಸಾ | ಒಟ್ಟು |
| ಚಾಮರಾಜನಗರ | ೩೬೭ | ೧೦೫ | ೦ | ೫೫ | ೧೦ | ೧೭೦ | ೧೦೦ | ೫೯ | ೪೮ | ೨೦೭ |
| ಗುಂಡ್ಲುಪೇಟೆ | ೩೧೬ | ೭೪ | ೧೦ | ೮೪ | ೧೦ | ೧೭೮ | ೧೦೩ | ೨೫ | ೦ | ೧೨೮ |
| ಕೊಳ್ಳೇಗಾಲ | ೨೮೩ | ೧೩೩ | ೩೩ | ೩೪ | ೧೦ | ೨೧೦ | ೫೦ | ೨೩ | ೦ | ೭೩ |
| ಹನೂರು | ೫೯೪ | ೧೭೮ | ೭೨ | ೧೬೯ | ೧೦ | ೪೨೯ | ೦ | ೧೬೫ | ೦ | ೧೬೫ |
| ಯಳಂದೂರು | ೧೧೨ | ೨೪ | ೦೭ | ೪೫ | ೧೦ | ೮೬ | ೧೦ | ೦ | ೧೬ | ೨೬ |
| ಒಟ್ಟು | ೧೬೭೨ | ೫೧೪ | ೧೨೨ | ೩೮೭ | ೫೦ | ೧೦೭೩ | ೨೬೩ | ೨೭೨ | ೬೪ | ೫೯೯ |

## ಸರ್ವಶಿಕ್ಷಣ ಅಭಿಯಾನ

ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವು ರಾಷ್ಟ್ರದಲ್ಲಿ ಪ್ರಾಥಮಿಕ ಶಿಕ್ಷಣವನ್ನು (೬ ರಿಂದ ೧೪ ರ ವಯೋಮಾನದ ಎಲ್ಲಾ ಮಕ್ಕಳಿಗೆ) ಸಾರ್ವತ್ರೀಕರಣಗೊಳಿಸಲು ಕೇಂದ್ರ ಸರ್ಕಾರ ರೂಪಿಸಿದ ಕಾರ್ಯಕ್ರಮವಾಗಿದೆ. ರಾಜ್ಯ ಸರ್ಕಾರ ರೂಪಿಸಿದ ಕಾರ್ಯಕ್ರಮವಾಗಿದೆ. ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ ಅರ್ಹ ಎಲ್ಲಾ ಮಕ್ಕಳಿಗೆ ಜೀವನಕ್ಕೆ ಉಪಯುಕ್ತವಾದ ಗುಣಾತ್ಮಕ ಪ್ರಾಥಮಿಕ ಶಿಕ್ಷಣ ನೀಡಲು ಉದ್ದೇಶಿಸಲಾಗಿದೆ. ಇದು ಸಾಮಾಜಿಕ, ಪ್ರಾದೇಶಿಕ ಹಾಗೂ ಲಿಂಗ ತಾರತಮ್ಯಗಳನ್ನು ನಿವಾರಿಸಲು ರೂಪಿತ ಕಾರ್ಯಕ್ರಮವಾಗಿದ್ದು, ರಾಷ್ಟ್ರದ ಅತ್ಯುನ್ನತ ಮಟ್ಟದಲ್ಲಿ ರಾಜಕೀಯ ಇಚ್ಛಾ ಶಕ್ತಿಯನ್ನು ಘೋಷಿಸಿರುವ ಮೊಟ್ಟ ಮೊದಲ ಕಾರ್ಯಕ್ರಮವಾಗಿದೆ.

ಪ್ರಾಥಮಿಕ ಶಾಲಾ ನಿರ್ವಹಣೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು, (ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತಿ) ಮತ್ತು ರಾಜ್ಯ ಸರ್ಕಾರಗಳು ಪರಿಣಾಮಕಾರಿಯಾಗಿ ಭಾಗವಹಿಸಿ ತಮ್ಮ ತಮ್ಮ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ತಮ್ಮದೇ ಆದ ಯೋಜನೆಗಳನ್ನು ರೂಪಿಸಿಕೊಳ್ಳಲು ಇದು ಒಂದು ಮಹತ್ವದ ಅವಕಾಶವಾಗಿದೆ.

೬ ರಿಂದ ೧೪ ವಯೋಮಾನದ ಎಲ್ಲಾ ಮಕ್ಕಳು ಶಾಲೆಗಳಿಗೆ ಬರಬೇಕು ಎಂಬ ಉದ್ದೇಶಕ್ಕಾಗಿ ಒಂದು ಕಿ.ಮೀ. ಒಳಗೆ ಕಿರಿಯ ಪ್ರಾಥಮಿಕ ಶಾಲೆಗಳ ಸೌಲಭ್ಯ ಒದಗಿಸುವುದು, ಎಲ್ಲಾ ಮಕ್ಕಳೂ ಕನಿಷ್ಠ ಎಂಟನೇ ತರಗತಿಯವರೆಗಿನ ಶಿಕ್ಷಣ ಸೌಲಭ್ಯ ಕಲ್ಪಿಸುವುದು, ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು, ಎಲ್ಲಾ ಶಾಲೆಗಳಲ್ಲಿ ಅವಶ್ಯಕ ಸಂಖ್ಯೆಯಲ್ಲಿ ಶಿಕ್ಷಕರ ಕೊಠಡಿ ಕಲಿಕಾ ಮತ್ತು ಬೋಧನಾ ಸಾಮಗ್ರಿ, ಶೌಚಾಲಯ ಕುಡಿಯುವ ನೀರು, ವಿದ್ಯುಚ್ಛಕ್ತಿ, ಕಾಂಪೌಂಡ್ ಮುಂತಾದ ಭೌತಿಕ ಸೌಲಭ್ಯಗಳ ಜೊತೆಗೆ ಶಿಕ್ಷಕರ ಕಾರ್ಯದಕ್ಷತೆಯನ್ನು ವೃದ್ಧಿಸುವ ವಿವಿಧ ತರಬೇತಿಯನ್ನು ಹಮ್ಮಿಕೊಳ್ಳುವುದು, ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ಪ್ರಮುಖ ಉದ್ದೇಶಗಳಾಗಿವೆ. ಚಾಮರಾಜನಗರ ಜಿಲ್ಲೆಯಲ್ಲಿ ೨೦೦೨-೦೩ನೇ ಸಾಲಿನಿಂದ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ಅಧಿಕೃತವಾಗಿ ಜಾರಿಗೆ ತರಲಾಗಿದೆ.

## ಸಮನ್ವಯ ಶಿಕ್ಷಣ

ಸರ್ವಶಿಕ್ಷಣ ಅಭಿಯಾನ ಯೋಜನೆಯಡಿ ಸಮನ್ವಯ ಶಿಕ್ಷಣ(ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ)ಕ್ಕೆ ಆದ್ಯತೆ ನೀಡಲಾಗಿದೆ. ೨೦೧೦-೧೧ರ ಸಾಲಿನಲ್ಲಿ ಜಿಲ್ಲೆಯಲ್ಲಿ ೬ ರಿಂದ ೧೪ ರ ವಯೋಮಾನದ ವಿವಿಧ ನ್ಯೂನತೆಗಳುಳ್ಳ ೧೯೬೯ ಮಕ್ಕಳನ್ನು ಗುರುತಿಸಲಾಗಿದ್ದು, ೧೨೭೭ ಮಕ್ಕಳಿಗೆ ವೈದ್ಯಕೀಯ ತಪಾಸಣೆ ನಡೆಸಿ, ೨೩೩ ಮಕ್ಕಳಿಗೆ ವೈದ್ಯಾಧಿಕಾರಿಗಳ ಶಿಫಾರಸ್ಸಿನನ್ವಯ ಅಗತ್ಯ ಸಾಧನ ಸಲಕರಣೆಗಳನ್ನು ನೀಡಲಾಗಿದೆ. ಜಿಲ್ಲೆಯ ಐದು ಬಿ.ಆರ್.ಸಿ. ಕೇಂದ್ರಗಳಲ್ಲಿ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳನ್ನು ತೆರೆಯಲಾಗಿದೆ. ಜಿಲ್ಲಾ ಮಟ್ಟದಲ್ಲಿ ಒಬ್ಬ ಜಿಲ್ಲಾ ಕೋಆರ್ಡಿನೇಟರ್ ಹಾಗೂ ಪ್ರತೀ ತಾಲೂಕಿನಲ್ಲಿ ತಲಾ ಮೂವರು ಪಿ.ಇ.ಆರ್.ಟಿ. ಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ಐದು ತಾಲೂಕುಗಳಲ್ಲಿ ತೀವ್ರ ಸ್ವರೂಪದ ಅಂಗವಿಕಲತೆಯುಳ್ಳ ೩೧೧ ಮಕ್ಕಳಿಗೆ ಮನೆಯಲ್ಲಿಯೇ ಶಿಕ್ಷಣ ನೀಡುವ ವ್ಯವಸ್ಥೆ (Home Based Education) ಮಾಡಲಾಗಿದೆ ಹಾಗೂ ಪ್ರತೀ ತಾಲೂಕಿನಲ್ಲಿ ಪ್ರತೀ ಮೂರು ಮಕ್ಕಳಿಗೆ ಒಬ್ಬೊಬ್ಬ ಸ್ವಯಂ ಸೇವಕರನ್ನು ನೇಮಿಸಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಸಿದ್ಧಪಡಿಸಲು ಬೇಸಿಗೆ ರಜಾದಲ್ಲಿ ನಡೆಸುತ್ತಿರುವ ಎರಡು ತಿಂಗಳ ಚಿಣ್ಣರ ಅಂಗಳ ಕಾರ್ಯಕ್ರಮದಡಿಯಲ್ಲಿ ಶಾಲೆಯಿಂದ ಹೊರಗುಳಿದ ೭ ರಿಂದ ೧೪ರ ವಯೋಮಾನದ ೨೬೦೨ ಮಕ್ಕಳನ್ನು ಗುರುತಿಸಿ, ಮಕ್ಕಳಿಗೆ ಬೇಸಿಗೆ ರಜಾ ಅವಧಿಯಲ್ಲಿ ೬೦ ದಿನಗಳ ಬ್ರಿಡ್ಜ್ ಕೋರ್ಸ್ ನಡೆಸಿ ೧೨ ತಿಂಗಳ ವಸತಿ ಮತ್ತು ವಸತಿ ರಹಿತ ಕೇಂದ್ರಗಳ ಮೂಲಕ ೭೯೩ ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಗಿದೆ.

**೧. ಸಮನ್ವಯ ಶಿಕ್ಷಣ**

* ಜಿಲ್ಲೆಯಲ್ಲಿ ಗುರುತಿಸಿದ ವಿಕಲಚೇತನ ಮಕ್ಕಳ ಸಂಖ್ಯೆ: ೧೮೧೯
* ಜಿಲ್ಲೆಯ ೦೫ ಬ್ಲಾಕ್‌ಗಳಲ್ಲಿ ವೈದ್ಯಕೀಯ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆ:೪೮
* ವೈದ್ಯಕೀಯ ಶಿಬಿರದಲ್ಲಿ ವೈದ್ಯರು ಗುರುತಿಸಲ್ಪಟ್ಟ ೨೧೩ ಮಕ್ಕಳಿಗೆ ಸಾಧನ ಸಲಕರಣೆಗಳ ಪೂರೈಕೆ ಮಾಡಲಾಗಿದೆ.
* ಜಿಲ್ಲೆಯಾದ್ಯಂತ ೪೨ ಕ್ಲಸ್ಟರ್‌ಗಳಲ್ಲಿ ವಿಶ್ವ ಅಂಗವಿಕಲರ ದಿನಾಚರಣೆಯನ್ನು ನಡೆಸಲಾಗಿದೆ. ಉಳಿದ ಕ್ಲಸ್ಟರ್ ಮಕ್ಕಳಿಗೆ ಬ್ಲಾಕ್ ಹಂತದಲ್ಲಿ ಹಾಗೂ ಜಿಲ್ಲಾ ಹಂತದಲ್ಲಿ ದಿನಾಚರಣೆ ನಡೆಸಲಾಗಿದೆ.
* ಜಿಲ್ಲೆಯ ವಿವಿಧ ಬ್ಲಾಕ್‌ಗಳಲ್ಲಿ ಗೃಹಾಧಾರಿತ ಶಿಕ್ಷಣ ಮೂಲಕ ೨೩೧ ಮಕ್ಕಳಿಗೆ ಸ್ವಯಂ ಸೇವಕರ ನೆರವಿನೊಂದಿಗೆ ಶಿಕ್ಷಣದ ವ್ಯವಸ್ಥೆ ಮಾಡಲಾಗಿದೆ.
* ೨೦೧೧–೧೨ನೇ ಸಾಲಿನಲ್ಲಿ ಯಾವುದೇ ಮಕ್ಕಳಿಗೆ ಕರೆಕ್ಟೀವ್ ಸರ್ಜರಿ ನಡೆಸಿರುವುದಿಲ್ಲ.

೨೦೧೧–೧೨ನೇ ಸಾಲಿನಲ್ಲಿ ೩,೮೩೬ ಶಿಕ್ಷಕರಿಗೆ ೧೯.೧೮ ಲಕ್ಷ ರೂ.ಗಳು ಶಿಕ್ಷಕರ ಅನುದಾನ (ತಲಾ ರೂ. ೫೦೦/– ರಂತೆ) ಬಿಡುಗಡೆ ಮಾಡಿದ್ದು, ಶಿಕ್ಷಕರು ಕಲಿಕೆ ಬೋಧನೋಪಕರಣಗಳ ತಯಾರಿ ಮಾಡಿಕೊಂಡು ಗುಣಾತ್ಮಕ ಕಲಿಕೆಗೆ ಒತ್ತು ನೀಡುತ್ತಿದ್ದಾರೆ ಹಾಗೂ ವಿಶೇಷವಾಗಿ ಮುಖ್ಯ ಶಿಕ್ಷಕರುಗಳಿಗೆ ಧನಾತ್ಮಕ ಚಿಂತನೆ ತರಬೇತಿ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದೆ.

## ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ೨೦೧೧–೧೨ರ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು

೨೦೧೧–೧೨ನೇ ಸಾಲಿನಲ್ಲಿ ಸಮಗ್ರ ಮಕ್ಕಳ ಗಣತಿಯಲ್ಲಿ ಈ ಬಾರಿ ಜಿಲ್ಲೆಯಲ್ಲಿ ೭೩೭ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿದ್ದು, ಏಪ್ರಿಲ್, ಮೇ ಮತ್ತು ಜೂನ್ ೨೦೧೧ರಲ್ಲಿ ನಡೆದ ಚಿಣ್ಣರ ಅಂಗಳ ಕಾರ್ಯಕ್ರಮದ ಮೂಲಕ ೪೪ ಮಕ್ಕಳು, ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮದ ಮೂಲಕ ೫೪ ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಗಿದೆ. ೧೨ ತಿಂಗಳ ವಿಶೇಷ ತರಬೇತಿ ಕಾರ್ಯಕ್ರಮದ ಮೂಲಕ ೨೦೭ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಸಾಗಿದೆ. ಉಳಿದ ಮಕ್ಕಳಲ್ಲಿ ೯೧ ಮಕ್ಕಳ ೧೪ ವಯೋಮಾನ ಮೀರಿದವರು, ೧೧೮ ಮಕ್ಕಳ ವಲಸೆ ಹೋಗಿದ್ದು ಹಾಗೂ ೪೭ ಮಕ್ಕಳು ಮದುವೆ/ಪ್ರೌಢಾವಸ್ಥೆ ಹೊಂದಿದವರಾಗಿದ್ದು, ಉಳಿಕೆ ೧೭೬ ಮಕ್ಕಳನ್ನು ೨೦೧೨–೧೩ನೇ ಸಾಲಿಗೆ ಕ್ರಿಯಾ ಯೋಜನೆಯ ತಯಾರಿಸಿ ಕಾರ್ಯತಂತ್ರ ರೂಪಿಸಲಾಗುವುದು.

## ಎಜುಸ್ಯಾಟ್ ಕಾರ್ಯಕ್ರಮ

ಎಜುಸ್ಯಾಟ್ ಕಾರ್ಯಕ್ರಮಗಳ ಪ್ರಸಾರಕ್ಕಾಗಿ ಡಿಎಸ್‌ಇಆರ್‌ಟಿ ಯಲ್ಲಿ ಸ್ಟುಡಿಯೋ ಮತ್ತು ಹಬ್‌ಗಳನ್ನು ಸ್ಥಾಪಿಸಲಾಗಿದ್ದು, ಚಾಮರಾಜನಗರ ಜಿಲ್ಲೆಯಲ್ಲಿನ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇಸ್ರೋ ನೆರವಿನಿಂದ ಸ್ವೀಕೃತಿ ಕೇಂದ್ರಗಳನ್ನು ತೆರೆಯಲಾಗಿದೆ.

**೨೦೧೧-೧೨ರ ಸಾಲಿನ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಚಟುವಟಿಕೆಗಳವಾರು ಆರ್ಥಿಕ ಪ್ರಗತಿಯ ವಿವರ**

| ಕ್ರ.ಸಂ. | ಚಟುವಟಿಕೆಗಳು | ೨೦೧೧-೧೨ನೇ ಸಾಲಿನ ವಾರ್ಷಿಕ ಅನುಮೋದನೆ | | ಜಿಲ್ಲಾ ಒಟ್ಟು ಪ್ರಗತಿ | | ಒಟ್ಟು ಅನುಮೋದನೆಯಲ್ಲಿ ಉಳಿಕೆ | | ಶೇಕಡಾವಾರು |
|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | |
| ೧. | ಶಿಕ್ಷಕರ ವೇತನ | ೬೧೪ | ೭೪೫.೯೬೮ | ೩೫೬ | ೬೫೮.೬೮೦ | ೨೫೮ | ೮೭.೨೮೮ | ೮೮.೩೦ |
| ೨. | ಶಿಕ್ಷಕರ ಅನುದಾನ | ೩೮೮೮ | ೧೯.೪೪೦ | ೩೮೩೬ | ೧೯.೧೮೦ | ೫೨ | ೦.೨೬ | ೯೮.೬೬ |
| ೩. | ಬಿ.ಆರ್.ಸಿ. | ೫ | ೭೪.೧೦೦ | ೫ | ೩೬.೬೦೦ | ೦ | ೩೭.೫ | ೪೯.೩೯ |
| ೪. | ಸಿ.ಆರ್.ಸಿ. | ೭೧ | ೮೬.೧೧೦ | ೭೧ | ೮೬.೧೧೦ | ೦ | ೦ | ೧೦೦.೦೦ |
| ೫. | ಶಿಕ್ಷಕರ ತರಬೇತಿ | ೪೦೮೩ | ೧೨೧.೦೨೫ | ೪೦೮೩ | ೯೧.೫೮೬ | ೦ | ೨೯.೪೩೯ | ೭೫.೬೮ |
| ೬. | ಶಾಲೆಯಿಂದ ಹೊರಗುಳಿದ ಮಕ್ಕಳು | ೬೫೦ | ೪೩.೪೭೫ | ೪೨೬ | ೨೯.೧೧೦ | ೨೨೪ | ೧೪.೩೬೫ | ೬೬.೯೬ |
| ೭. | ಉಚಿತ ಪಠ್ಯಪುಸ್ತಕ | ೪೧೬೫೬ | ೩೪.೩೮೦ | ೪೧೬೫೬ | ೩೪.೩೮೦ | ೦ | ೦ | ೧೦೦.೦೦ |
| ೮. | ವಿಶೇಷ ಅಗತ್ಯತೆಯುಳ್ಳ ಮಕ್ಕಳು | ೧೮೮೯ | ೫೪.೫೭೦ | ೧೮೮೯ | ೫೪.೫೭೦ | ೦ | ೦ | ೧೦೦.೦೦ |
| ೯. | ಸಿವಿಲ್ ಕಾಮಗಾರಿ | ೬೯೬೮ | ೨೨೩.೪೬೦ | ೬೯೬೮ | ೨೨೩.೪೬೦ | ೦ | ೦ | ೧೦೦.೦೦ |
| ೧೦. | ಟಿ.ಎಲ್.ಇ. | ೩ | ೦.೬೦೦ | ೦ | ೦.೦೦೦ | ೩ | ೦.೬ | ೦.೦೦ |
| ೧೧. | ನಿರ್ವಹಣಾ ಅನುದಾನ | ೧೧೫೫ | ೮೬.೬೨೫ | ೧೧೫೫ | ೮೬.೬೨೫ | ೦ | ೦ | ೧೦೦.೦೦ |
| ೧೨. | ಶಾಲಾ ಅನುದಾನ | ೧೨೬೨ | ೭೧.೮೬೦ | ೧೨೫೦ | ೭೧.೦೮೦ | ೧೨ | ೦.೭೮ | ೯೮.೯೧ |
| ೧೩. | ಸಂಶೋಧನೆ & ಮೌಲ್ಯಮಾಪನ | ೧೨೬೨ | ೧೮.೯೩೦ | ೧೨೬೨ | ೧೮.೯೩೦ | ೦ | ೦ | ೧೦೦.೦೦ |
| ೧೪. | ಆಡಳಿತಾತ್ಮಕ ವೆಚ್ಚ | ೧ | ೧೦೧.೫೦೦ | ೧ | ೧೦೧.೫೦೦ | ೦ | ೦ | ೧೦೦.೦೦ |
| ೧೫. | ಆವಿಷ್ಕಾರ ಚಟುವಟಿಕೆ | ೧ | ೧೦೦.೦೦೦ | ೧ | ೮೯.೯೬೦ | ೦ | ೧೦.೦೪ | ೮೯.೯೬ |
| ೧೬. | ಕಮ್ಯುನಿಟಿ ತರಬೇತಿ | ೯೮೪೦ | ೪೫.೦೦೦ | ೯೮೪೦ | ೪೫.೦೦೦ | ೦ | ೦ | ೧೦೦.೦೦ |
| | ಒಟ್ಟು ಎಸ್.ಎಸ್.ಎ. ಮೊತ್ತ | | ೧೮೨೭.೦೪೩ | | ೧೬೪೬.೭೭೧ | ೦ | ೧೮೦.೨೭೨ | ೯೦.೧೩ |
| ೧೭. | ಕೆ.ಜಿ.ಬಿ.ವಿ. (ಯಳಂದೂರು) | ೧ | ೪೦.೮೨ | ೧ | ೨೦.೬೪ | ೦ | ೨೦.೧೮ | ೫೦.೫೬ |
| | ಒಟ್ಟು (ಎಸ್‌ಎಸ್‌ಎ+ಕೆಜಿಬಿವಿ) | | ೧೮೬೭.೮೬೩ | | ೧೬೬೭.೪೧೧ | ೦ | ೨೦೦.೪೫೨ | ೮೯.೨೭ |

*ಆಧಾರ: ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖಾ ವಾರ್ಷಿಕ ವರದಿ*

೨೦೧೧-೧೨ನೇ ಸಾಲಿನಲ್ಲಿ ಸಿವಿಲ್ ಕಾಮಗಾರಿಗಳ ಅಡಿಯಲ್ಲಿ ಕೊಠಡಿಗಳ ಕೊರತೆ ಇರುವ ಶಾಲೆಗಳನ್ನು ಗುರುತಿಸಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಶಾಲಾ ಆವರಣದೊಳಗೆ ಶೌಚಾಲಯಗಳನ್ನು ನಿರ್ಮಿಸಿ ಮಕ್ಕಳು ಬಾಹ್ಯ ಶೌಚ ವ್ಯವಸ್ಥೆಯಿಂದ ಮುಕ್ತರಾಗುವಂತೆ ಶೌಚಾಲಯಗಳ ನಿರ್ಮಾಣ ಮಾಡಲು ಕ್ರಮ ವಹಿಸಲಾಗಿದೆ.

## ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಿಯಾಶೀಲ ಆಡಳಿತ-೨೦೧೧-೧೨

**ಈ ಯೋಜನೆಯ ಮುಖ್ಯ ಉದ್ದೇಶಗಳೆಂದರೆ;**

ಶಾಲೆಗಳ ಶೈಕ್ಷಣಿಕ ವಸ್ತುಸ್ಥಿತಿಯ ಅರಿವು, "ನಲಿ-ಕಲಿ" ಅನುಷ್ಠಾನ - ಒತ್ತಾಸೆ, ಸೌಲಭ್ಯಗಳ ಬಳಕೆ - ಖಚಿತತೆ, ಶಾಲೆಗಳ ಶೈಕ್ಷಣಿಕ ಮಟ್ಟ ಮತ್ತು ಮಕ್ಕಳ ಕಲಿಕೆ-ಮೌಲ್ಯಮಾಪನ, ಮುಖ್ಯ ಶಿಕ್ಷಕರೂ ಸೇರಿದಂತೆ ಶಿಕ್ಷಕರ ಕಾರ್ಯದಕ್ಷತೆಗೆ ಒತ್ತಾಸೆ ನೀಡಿಕೆ, ತರಬೇತಿಗಳ ಅನುಷ್ಠಾನದ ಅವಲೋಕನ, ಸಹಪಠ್ಯ ಚಟುವಟಿಕೆಗಳು ಮತ್ತು ದೈಹಿಕ ಶಿಕ್ಷಣದ ಅನುಪಾಲನೆ, ಅನುದಾನಗಳ ಬಳಕೆಯ ಖಚಿತತೆ, ಎಸ್.ಡಿ.ಎಂ.ಸಿ ಹಾಗೂ ಸಮುದಾಯ

ಭಾಗವಹಿಸುವಿಕೆ ಖಚಿತತೆ, ಪ್ರತಿ ಸಂದರ್ಶನದ ನಂತರ ಜಿಲ್ಲಾ ಹಂತದಲ್ಲಿ ಉನ್ನತಾಧಿಕಾರಿಗಳ ಸಮ್ಮುಖದಲ್ಲಿ ಗುಣಚಿಂತನ ಸಮಿತಿಗೆ ತಾಲ್ಲೂಕು ಹಾಗೂ ಜಿಲ್ಲಾ ವಿಶ್ಲೇಷಣಾ ವರದಿ ಮಂಡನೆ. ಹಿಮ್ಮಾಹಿತಿ ಪಡೆಯುವಿಕೆ ಮತ್ತು ಮುಂದಿನ ಕ್ರಮದ ಚರ್ಚೆ.

೨೦೧೧–೧೨ನೇ ಸಾಲಿನ ವರದಿಯನ್ವಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಸ್ಥಿತಿಗತಿಗಳನ್ನು ಪರಿಶೀಲಿಸಲು ಮೂರು ಹಂತದ ಸಂದರ್ಶನವನ್ನು ನಡೆಸಿರುವ ಮೇರೆಗೆ ಎ+ ಶ್ರೇಣಿಯಲ್ಲಿ ಗುಂಡ್ಲುಪೇಟೆ ತಾಲೂಕು ಹೆಚ್ಚು ಶಾಲೆಗಳನ್ನು ಹೊಂದಿದೆ. ಯಳಂದೂರು ತಾಲೂಕು ಯಾವುದೇ ಬಿ ಮತ್ತು ಸಿ ಶ್ರೇಣಿಯ ಶಾಲೆಗಳನ್ನು ಹೊಂದಿಲ್ಲ. ಎಲ್ಲಾ ತಾಲೂಕುಗಳಲ್ಲಿಯೂ ಮೊದಲ ಮತ್ತು ಮೂರನೇ ಸಂದರ್ಶನಕ್ಕೆ ಹೋಲಿಸಿದಾಗ ಹೆಚ್ಚು ಪ್ರಗತಿ ಹೊಂದಿರುವುದನ್ನು ಗಮನಿಸಲಾಗಿದೆ. ಹನೂರು ಶೈಕ್ಷಣಿಕ ವಲಯದಲ್ಲಿ ಶಿಕ್ಷಕರ ಕೊರತೆ ಹಾಗೂ ಮೂಲಸೌಲಭ್ಯಗಳ ಕೊರತೆಯಿಂದಾಗಿ ಬೇರೆ ತಾಲೂಕುಗಳಿಗಿಂತ ಸ್ವಲ್ಪ ಕಡಿಮೆ ಪ್ರಗತಿ ಇರುವುದು ಕಂಡುಬಂದಿದೆ. ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳನ್ನು ಗಮನಿಸಿದಾಗ ಶೇ.೩೦ ರಷ್ಟು ೬೮ ಕಿರಿಯ ಪ್ರಾಥಮಿಕ ಶಾಲೆಗಳು ಎ+ ಶ್ರೇಣಿಯನ್ನು ಹೊಂದಿವೆ. ಶೇ.೨೪.೬೪ ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಎ+ ಶ್ರೇಣಿಯನ್ನು ಹೊಂದಿದ್ದು, ಹಿರಿಯ ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಒತ್ತು ನೀಡಬೇಕಾಗಿದೆ.

## ಸಂಸ್ಕೃತ ಶಿಕ್ಷಣ

ಜಿಲ್ಲೆಯಲ್ಲಿ ಪೂರ್ವಕಾಲದಿಂದಲೂ ಸಂಸ್ಕೃತ, ವೇದ ಪ್ರಸಾರವು ನಿರಂತರವಾಗಿ ನಡೆಯುತ್ತಿತ್ತು. ಈ ಕೆಲಸದಲ್ಲಿ ಹಲವಾರು ಗಣ್ಯ ವಿದ್ವಾಂಸರು ಹಾಗೂ ಅನೇಕ ಸಂಘ ಸಂಸ್ಥೆಗಳವರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಮೊದಲಿಗೆ ರಾಜಾಶ್ರಯ ತದನಂತರ ಸರ್ಕಾರದ ಆಶ್ರಯದಲ್ಲಿರುವ ಶ್ರೀ ಚಾಮರಾಜೇಶ್ವರ ದೇವಾಲಯದಲ್ಲಿ ಸುಮಾರು ೧೯೨೪–೨೫ರಲ್ಲಿ ಆಸ್ಥಾನ ವಿದ್ವಾನ್ ಜ್ಯೋತಿಷ್ಯ ಸಿದ್ಧಾಂತಿ ತಮ್ಮಯ್ಯಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವೇದ ಹಾಗೂ ಸಂಸ್ಕೃತ ಪ್ರಸಾರ ಕಾರ್ಯ ಪ್ರಾರಂಭವಾಯಿತು. ಚತುರ್ವೇದಗಳು ಹಾಗೂ ಸಂಸ್ಕೃತ ಸಾಹಿತ್ಯದ ಬೋಧನೆ ನಿರಂತರವಾಗಿ ಸಾಗುತ್ತಿತ್ತು.

ಸಂಸ್ಕೃತ ಸಾಹಿತ್ಯಕ್ಕೆ ಸುಬ್ಬಾ ಉಪಾಧ್ಯರು, ಋಗ್ವೇದಕ್ಕೆ ಕೃಷ್ಣಾವಧಾನಿಗಳು ಹಾಗೂ ಶ್ರೀನಿವಾಸ ಶಾಸ್ತ್ರಿಗಳು. ಯಜುರ್ವೇದಕ್ಕೆ ಸುಬ್ಬಾವಧಾನಿಗಳು, ಸಾಮವೇದಕ್ಕೆ ಸೋಮೇಶ್ವರ ಅಯ್ಯರ್ ಹಾಗೂ ಅಥರ್ವಣವೇದಕ್ಕೆ ಯಜ್ಞರಾಮ ಘನಪಾಟಿಗಳು ಬೋಧಕರಾಗಿದ್ದರು. ಆನಂತರದ ದಿನಗಳಲ್ಲಿ ಸಂಸ್ಕೃತವನ್ನು ಚಕ್ರವರ್ತಿ ಶ್ರೀನಿವಾಸ ವರದಾಚಾರ್ಯರು ಹಾಗೂ ಚಕ್ರವರ್ತಿ ಗೋಪಾಲಾಚಾರ್ಯರು ತ್ರಿಭಾಷಾ ಪಂಡಿತರು ಇವರು ಬೋಧಿಸುವ ಕಾಯಕವನ್ನು ಮುಂದುವರೆಸಿಕೊಂಡು ಬಂದಿದ್ದರು. ದೇವಾಲಯದಲ್ಲಿ ಶಿವಕೂಟವೆಂಬ ಹೆಸರಿನಿಂದ ನಡೆಯುತ್ತಿದ್ದ ಈ ಪ್ರಸಾರ ಕಾರ್ಯ ಅನೇಕ ಸ್ಥಳೀಯ ಹಾಗೂ ಪರಸ್ಥಳ ವಿದ್ಯಾರ್ಥಿಗಳನ್ನೊಳಗೊಂಡಿತ್ತು. ವಿದ್ಯಾರ್ಥಿಗಳಿಗೆ ಉಚಿತ ಊಟ ಹಾಗೂ ಉಪಹಾರ ನೀಡುತ್ತಿದ್ದರು. ಇಷ್ಟೇ ಅಲ್ಲದೆ ವಿದ್ಯಾರ್ಥಿ ವೇತನವನ್ನೂ ಸಹ ನೀಡುತ್ತಿದ್ದರು. ಹೀಗೆ ಸುಗಮವಾಗಿ ಸಂಸ್ಕೃತ ಹಾಗೂ ವೇದ ಪ್ರಸಾರ ನಡೆದು ಬಂದಿದ್ದ ಇಲ್ಲಿ ತದನಂತರ ಮೂರು–ನಾಲ್ಕು ವರ್ಷಗಳ ಕಾಲ ಕಾರಣಾಂತರಗಳಿಂದ ನಿಂತು ಹೋಯಿತು. ಮತ್ತೆ ವೆಂಕಟಸುಬ್ಬಾವಧಾನಿಗಳ ಅಧ್ಯಕ್ಷತೆಯಲ್ಲಿ ಮುಂದುವರೆದು ಕಾಲಕ್ರಮೇಣ ಅದೂ ನಿಂತು ಹೋಯಿತು. ತ್ರಿಭಾಷಾ ಪಂಡಿತ ಚಕ್ರವರ್ತಿ ಗೋಪಾಲಾಚಾರ್ಯರು ತಮ್ಮ ಹಿಂದಿ ಪ್ರಚಾರ ಕಾರ್ಯದೊಡನೆ ಸುಮಾರು ಆರು ತಿಂಗಳಿಂದ ಒಂದು ವರ್ಷದವರೆಗೆ ತಮ್ಮ ಹಿಂದೀ ಪ್ರಚಾರ ಸಭಾದಲ್ಲೇ ಸಂಸ್ಕೃತ ಪ್ರಚಾರವನ್ನೂ ಸಹ ನಡೆಸುತ್ತಾ ಬಂದಿದ್ದರು.

ಆನಂತರದ ದಿನಗಳಲ್ಲಿ ಅನೇಕ ಸಂಘ ಸಂಸ್ಥೆಗಳವರು ಸಂಸ್ಕೃತ ಪ್ರಸಾರವನ್ನು ಮಾಡುತ್ತಾ ಬಂದಿದ್ದರು. ರಾಮಸಮುದ್ರದ ಸಂಸ್ಕೃತ ಸಭಾ ಜಗದ್ಗುರು ಶಿವರಾತ್ರೀಶ್ವರ ಸಂಸ್ಕೃತ ಪಾಠಶಾಲಾ, ಸಿದ್ಧ ಮಲ್ಲೇಶ್ವರ ಸಂಸ್ಕೃತ ಪಾಠಶಾಲಾ ಹಾಗೆಯೇ ರಾಮಶೇಷ ದೀಕ್ಷಿತರ ಆಚಾರ್ಯತ್ವದಲ್ಲಿ ಸುರಸರಸ್ವತೀ ಸಂಸ್ಕೃತ ಸಭಾ ಹೀಗೆ ಹಲವಾರು ಪಾಠಶಾಲೆಗಳು ಸಂಸ್ಕೃತ ಹಾಗೂ ವೇದ ಪ್ರಸಾರವನ್ನು ಮಾಡುತ್ತಾ ಬಂದಿವೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–೧೮ ರವರಿಗೆ ಸರ್ಕಾರಿ ಆದೇಶ ಸಂಖ್ಯೆ:ಇಡಿ೫೦.ಎಲ್. ಎಸ್.ಇ.೨೦೧೦ ದಿನಾಂಕ ೧೧–೧೧–೨೦೧೦ರಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ವರ್ಗಾಯಿಸಿದ್ದು, ೨೦೧೦–೧೧ರ ಸಂಸ್ಕೃತ ಮತ್ತು ವೇದಪರೀಕ್ಷೆಗಳನ್ನು ಈ ವಿಶ್ವವಿದ್ಯಾಲಯದವರು ನಡೆಸಿರುತ್ತಾರೆ.

ಪ್ರಸ್ತುತ ಚಾಮರಾಜನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಪ್ರಸಾರ ಕೇಂದ್ರಗಳೆಂದರೆ ಶಿವರಾತ್ರೀಶ್ವರ ಸಂಸ್ಕೃತ ಪಾಠಶಾಲಾ. ಸಿದ್ಧ ಮಲ್ಲೇಶ್ವರ ಸಂಸ್ಕೃತ ಪಾಠಶಾಲಾ ಸರ್ಕಾರದಿಂದ ಅನುದಾನ ಪಡೆದು ಸಂಸ್ಕೃತ ಪ್ರಸಾರ ಮಾಡುತ್ತಿದ್ದು, ಖಾಸಗಿಯಾಗಿ ಉಚಿತವಾಗಿ ರಾಮಶೇಷ ಸಂಸ್ಕೃತ ಪಾಠಶಾಲಾ ಹಾಗೂ ಡಾ॥ ಮಹದೇವಪ್ಪರವರ ನೇತೃತ್ವದಲ್ಲಿ ಚಾಮರಾಜೇಶ್ವರ ಪಾಠಶಾಲಾ ಸಂಸ್ಕೃತ ಪಾಠ ಪ್ರವಚನದ ಜೊತೆಗೆ ಸಂಸ್ಕೃತ ಭಾಷೆಯ ಪ್ರಸಾರ ಕಾರ್ಯವನ್ನು ಮಾಡುತ್ತಿದೆ.

ಇದರ ಜೊತೆಗೆ ಸಂಸ್ಕೃತ ಭಾರತೀಯವರು ಇತ್ತೀಚಿನ ದಿನಗಳಲ್ಲಿ ಸಂಸ್ಕೃತ ಸಂಭಾಷಣಾ ಶಿಬಿರಗಳನ್ನು ನಡೆಸಿ ಸಂಸ್ಕೃತಾಭ್ಯಾಸದೆಡೆಗೆ ಜನರನ್ನು ಸೆಳೆಯುವಲ್ಲಿ ಸಫಲರಾಗಿದ್ದಾರೆ.

ಪ್ರಸ್ತುತ ಚಾಮರಾಜನಗರದಲ್ಲಿ ಈ ಕೆಳಕಂಡ ಸಂಸ್ಕೃತ ಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

೧. **ಶ್ರೀ ರಾಮಶೇಷ ಸಂಸ್ಕೃತ ಪಾಠಶಾಲಾ,** ರಥದ ಬೀದಿ, ಚಾಮರಾಜನಗರ

೨. **ಶ್ರೀ ಶಿವರಾತ್ರೀಶ್ವರ ಸಂಸ್ಕೃತ ಪಾಠಶಾಲಾ,** ಜೆ.ಎಸ್.ಎಸ್. ಪ್ರೌಢಶಾಲೆ, ಚಾಮರಾಜನಗರ.

೩. **ಸಿದ್ಧಮಲ್ಲೇಶ್ವರ ಸಂಸ್ಕೃತ ಪಾಠಶಾಲಾ,** ವಿರಕ್ತ ಮಠ, ಚಾಮರಾಜನಗರ

೪. **ಶ್ರೀ ಚಾಮರಾಜೇಶ್ವರ ಸಂಸ್ಕೃತ ಹಾಗೂ ಯೋಗಕೇಂದ್ರ,** ಶ್ರೀಚಾಮರಾಜೇಶ್ವರ ದೇವಾಲಯದ ಹತ್ತಿರ, ಚಾಮರಾಜನಗರ.

ಇವಲ್ಲದೆ ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ ಸ್ಥಳಗಳಲ್ಲೂ ಸಂಸ್ಕೃತ ಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

## ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನ ಬೆಟ್ಟ

ಸ್ವಯಂ ಸೇವಾ ಸಂಸ್ಥೆಯಾದ ಈ ಕೇಂದ್ರವು ಗಿರಿಜನರ ಸಾಂಸ್ಕೃತಿಕ ಹಿನ್ನೆಲೆಯನ್ನೂ ಅವರ ಹಕ್ಕುಗಳನ್ನೂ ಗಮನದಲ್ಲಿಟ್ಟು ಅವರ ಸರ್ವತೋಮುಖ ಮತ್ತು ನಿರಂತರ ಅಭಿವೃದ್ಧಿಗಾಗಿ ೧೯೭೮ರಲ್ಲಿ ಹಲವಾರು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರಶಸ್ತಿ ವಿಜೇತರಾದ ಪದ್ಮಶ್ರೀ ಡಾ. ಎಚ್. ಸುದರ್ಶನ್ ಅವರಿಂದ ಸ್ಥಾಪಿಸಲ್ಪಟ್ಟಿತು. ಮೈಸೂರು ಹಾಗೂ ಚಾಮರಾಜನಗರದ ಸೋಲಿಗರ ಮತ್ತು ಇತರೆ ಗಿರಿಜನರೊಂದಿಗೂ, ನೆರೆಯ ತಮಿಳುನಾಡಿನ ಗಿರಿಜನರೊಂದಿಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಳೆದ ೨೭ ವರ್ಷಗಳಿಂದ ಅವರ ಸಾಮಾಜಿಕ, ಕೌಟುಂಬಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಶ್ರಮಿಸುತ್ತ, ೧೫–೧೦–೨೦೦೬ ರಂದು ತನ್ನ ಬೆಳ್ಳಿಹಬ್ಬವನ್ನು ಆಚರಿಸಿರುವ ಈ ಕೇಂದ್ರದಲ್ಲಿ ಅಂದಿನ ಘನತೆವೆತ್ತ ರಾಷ್ಟ್ರಪತಿಗಳಾದಂತಹ ಮಾನ್ಯ

ಶ್ರೀ ಎ.ಪಿ.ಜೆ. ಅಬ್ದುಲ್‌ಕಲಾಂರವರೂ, ಘನತೆವೆತ್ತ ಕರ್ನಾಟಕದ ರಾಜ್ಯಪಾಲರಾದ ಮಾನ್ಯ ಶ್ರೀ ಟಿ.ಎನ್. ಚತುರ್ವೇದಿಯವರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಈ ಕೇಂದ್ರದ ಹಿರಿಮೆಗೆ ಸಾಕ್ಷಿಯಾಯಿತು. ಪ್ರಸ್ತುತ ಅರುಣಾಚಲ ಪ್ರದೇಶ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳ ಗಿರಿಜನರ ಅಭಿವೃದ್ಧಿಯ ಕಾರ್ಯಕ್ರಮವನ್ನೂ ಹಮ್ಮಿಕೊಂಡಿರುವ ಈ ಸಂಸ್ಥೆ ಗಿರಿಜನರ ಸಮಗ್ರ ಬೆಳವಣಿಗೆಗಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುತ್ತಿದೆ.

**ಗಿರಿಜನ ಶಾಲೆ:** ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದಲ್ಲಿ ಸಂಸ್ಥೆ ಉಚಿತ ವಸತಿ ಶಾಲೆಯೊಂದನ್ನು ನಡೆಸುತ್ತಿದ್ದು, ಇಲ್ಲಿ ಗಿರಿಜನರ ಭಾಷೆ, ಸಂಸ್ಕೃತಿ ಹಾಗೂ ಪರಿಸರಕ್ಕೆ ಅನುಗುಣವಾದ ವಿದ್ಯಾಭ್ಯಾಸ ಕ್ರಮವನ್ನು ಅಳವಡಿಸಿಕೊಂಡಿದೆ. ನಿರಂತರ ವ್ಯವಸಾಯ, ಅರಣ್ಯ ಸಂರಕ್ಷಣೆ, ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆ ಬಗ್ಗೆ ಗಿರಿಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಗಿರಿಜನ ಜೀವನ ನಿರ್ವಹಣೆ ಭದ್ರತೆಯನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ. ಇಲ್ಲಿ ಶಿಶುವಿಹಾರದಿಂದ ೧೦ನೇ ತರಗತಿಯವರೆಗೆ ೫೦೦ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ೨೦೦ ಮಕ್ಕಳಿಗೆ ವಸತಿ ಸೌಕರ್ಯವನ್ನೂ ಕಲ್ಪಿಸಲಾಗಿದೆ. ಇದೇ ಆವರಣದಲ್ಲಿ ಒಂದು ಕ್ರೀಡಾ ಶಾಲೆಯೂ ಕಾರ್ಯನಿರ್ವಹಿಸುತ್ತಿದೆ. ದುರ್ಗಮ ಅರಣ್ಯ ಪ್ರದೇಶದ ಮಕ್ಕಳು ವಿದ್ಯೆಯಿಂದ ವಂಚಿತರಾಗದಿರಲು, ಅವರಿಗಾಗಿ ನಾಲ್ಕು ಅನೌಪಚಾರಿಕ ಶಾಲೆಗಳನ್ನು ಕೇಂದ್ರ ನಡೆಸುತ್ತಿದೆ. ಇವಲ್ಲದೆ ಕಲಾ ಮತ್ತು ವಿಜ್ಞಾನ ವಿಷಯಗಳ ಬೋಧನೆ ಇರುವ ಒಂದು ಪದವಿಪೂರ್ವ ಕಾಲೇಜು, ಕೈಗಾರಿಕಾ ತರಬೇತಿ ಶಾಲೆ ಮತ್ತು ಅರಣ್ಯಶಾಸ್ತ್ರ ಬೋಧನಾ ವಿಷಯ ಹೊಂದಿದ ವೃತ್ತಿಪರ ಕೋರ್ಸುಗಳನ್ನು ಮತ್ತು ಸಾಂಸ್ಕೃತಿಕ ಬೆಳವಣಿಗೆಗಾಗಿ ಒಂದು ನಾಟಕ ಶಾಲೆಯನ್ನೂ ಕೇಂದ್ರ ನಡೆಸುತ್ತಿದೆ. ಮುಖ್ಯವಾಗಿ ಕೇಂದ್ರದಲ್ಲಿ ನೆಲೆಗೊಂಡಿರುವ ಆರೋಗ್ಯ ಕೇಂದ್ರವು ಸುತ್ತಮುತ್ತಲಿನ ಎಲ್ಲಾ 'ಪಾಡಿ'ಗಳ ಗಿರಿಜನರಿಗೆ ಉತ್ತಮ ಆರೋಗ್ಯಸೇವೆ ನೀಡುತ್ತಿದ್ದು, ಇಲ್ಲಿ ಕಾರ್ಯನಿರ್ವಹಿಸಲು ಬೇಕಾಗುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಲಭ್ಯತೆಗಾಗಿ 'ನಿವೇದಿತಾ ನರ್ಸಿಂಗ್ ತರಬೇತಿ ಶಾಲೆ'ಯನ್ನೂ ನಡೆಸುತ್ತಿದೆ. ವೃತ್ತಿ ಶಿಕ್ಷಣದಡಿ ಇಲ್ಲಿ ಅಗರಬತ್ತಿ ತಯಾರಿ, ಮರಗೆಲಸ, ಹೊಲಿಗೆ, ಹೆಣಿಗೆ, ಮತ್ತು ಬಿದಿರು ಬೆತ್ತ ಕಲೆ, ನೋಟ್‌ಬುಕ್ ತಯಾರಿಕೆ, ಕೈಕಾಗದ ಘಟಕ, ಜೇನು ಸಂಸ್ಕರಣೆ, ಆಹಾರ ಸಂಸ್ಕರಣೆ (ಮೈಸೂರಿನ ಸಿಎಫ್‌ಟಿಆರ್‌ಐ ಸಹಯೋಗ), ನಾರು, ಬೇರು, ಔಷಧಿ ಸಂಸ್ಕರಣೆ, ಮೇಣದಬತ್ತಿ ತಯಾರಿಕೆ, ಎಲೆದೊನ್ನೆ ತಯಾರಿಕೆ, ಸ್ಕ್ರೀನ್ ಪ್ರಿಂಟಿಂಗ್, ವೆಲ್ಡಿಂಗ್, ಕೈಮಗ್ಗದ ಬಟ್ಟೆ ನೇಯ್ಗೆ ಮತ್ತು ಬೇಕರಿ ಕಾರ್ಯ ಮುಂತಾದ ಸ್ವಾವಲಂಬನೆಗೆ ದಾರಿ ತೋರುವ ವೃತ್ತಿಪರ ವಿಷಯಗಳನ್ನು ಬೋಧಿಸಲಾಗುತ್ತದೆ. ಇದಲ್ಲದೆ, ದೂರ ಶಿಕ್ಷಣ, ದೂರ ವ್ಯವಸಾಯ ಹಾಗೂ ಇ–ಆಡಳಿತದ ಅನುಷ್ಠಾನಕ್ಕಾಗಿ ಇಸ್ರೋ ಸಂಸ್ಥೆಯ ಸಹಯೋಗದೊಂದಿಗೆ ಗ್ರಾಮೀಣ ಸಂಪನ್ಮೂಲ ಕೇಂದ್ರಗಳನ್ನೂ ಸಂಸ್ಥೆ ಸ್ಥಾಪಿಸಿದೆ. ಗಿರಿಜನರು ಉನ್ನತ ಶಿಕ್ಷಣ ಹೊಂದಲು ಆಸಕ್ತರಾಗಿದ್ದಲ್ಲಿ, ಅಂತಹವರಿಗೆ ಕೇಂದ್ರದಲ್ಲಿ ವೃತ್ತಿಪರ ಕೌನ್ಸಿಲಿಂಗ್ ಸಹ ನೀಡಲಾಗುತ್ತದೆ.

**ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು:** ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಗಿರಿಜನರ ಕಲ್ಯಾಣಕ್ಕಾಗಿ ಸರಕಾರ ಹಲವಾರು ಆರ್ಥಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇವುಗಳನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿದೆ. ಇದಕ್ಕಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸಮಾಜ ಕಲ್ಯಾಣ ಅಧಿಕಾರಿಗಳನ್ನು ನೇಮಿಸಲಾಗಿದೆ. ಇದಲ್ಲದೆ ಒಬ್ಬ ಮಹಿಳಾ ಸಂಚಾಲಕಿ ಮತ್ತು ನಿರ್ವಾಹಕಿಯರ ಮಾರ್ಗದರ್ಶನದಲ್ಲಿ ಹಲವಾರು ಕಲ್ಯಾಣ ಕೇಂದ್ರಗಳನ್ನೂ ಸರಕಾರ ನಡೆಸುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಕರ್ನಾಟಕ ವಸತಿ ಸಂಘಟನೆಗಳ ಶಿಕ್ಷಣ ಸಂಸ್ಥೆಗಳ ಅಡಿ ಇಂತಹ ಒಟ್ಟು ಹತ್ತು ವಸತಿ ಶಾಲೆಗಳು ಕಾರ್ಯೋನ್ಮುಖವಾಗಿವೆ. ಇವುಗಳಲ್ಲಿ ಒಂದು ದಶಕದ ಹಿಂದೆ ಗುಂಡ್ಲುಪೇಟೆಯಲ್ಲಿ

ಸ್ಥಾಪನೆಗೊಂಡ ವಸತಿ ಶಾಲೆಯಲ್ಲದೆ ಅಲ್ಪಸಂಖ್ಯಾತರಿಗಾಗಿ ಒಂದು ವಸತಿ ಶಾಲೆ ಕಾರ್ಯನಿರ್ವಹಿಸುತ್ತಿದೆ. ಇವಲ್ಲದೆ, ಸಂತೆಮರಳ್ಳಿ, ಯಳಂದೂರು ಹಾಗೂ ಹನೂರುಗಳಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಹಂಗಳ, ಕೊಳ್ಳೇಗಾಲ ಗಿರಿಜನರಿಗಾಗಿ ಮತ್ತು ತೆರಕಾಣಾಂಬಿಯಲ್ಲಿ ಹಿಂದುಳಿದವರಿಗಾಗಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ವಿದ್ಯಾ ಇಲಾಖೆಯಿಂದ ಮಾನ್ಯತೆ ಪಡೆದಿರುವ ಈ ಶಾಲೆಗಳಲ್ಲಿ ವರ್ಷಪ್ರತಿ ೫೦ ಮಕ್ಕಳಿಗೆ ಪ್ರವೇಶಾವಕಾಶವಿದ್ದು, ಒಂದರಿಂದ ನಾಲ್ಕನೇ ತರಗತಿಯವರೆಗೆ ಬೋಧನೆ ನಡೆಯುತ್ತದೆ. ಪ್ರತಿ ಶಾಲೆಯಲ್ಲಿ ಒಬ್ಬ ಮುಖ್ಯೋಪಾಧ್ಯಾಯರು, ವಾರ್ಡನ್‌ರು, ಸಹಶಿಕ್ಷಕರು ಹಾಗೂ ಅಡುಗೆ ಸಿಬ್ಬಂದಿ ಇರುತ್ತಾರೆ. ಮಕ್ಕಳ ಊಟ ವಸತಿಗಳಿಗಾಗಿ ಆಹಾರ ಹಾಗೂ ಇತರೆ ಸಾಮಗ್ರಿ ಕೊಳ್ಳುವಿಕೆ, ಆಹಾರ ತಯಾರಿ, ವಿತರಣೆ ಹಾಗೂ ಉಳಿದ ಆಡಳಿತಾತ್ಮಕ ವಿಷಯಗಳನ್ನು ಮುಖ್ಯೋಪಾಧ್ಯಾಯರು ನಿರ್ವಹಿಸುತ್ತಾರೆ. ಪ್ರತೀ ವಿದ್ಯಾರ್ಥಿಗೆ ವರ್ಷಕ್ಕೊಮ್ಮೆ ಎರಡು ಜೊತೆ ಸಮವಸ್ತ್ರವಲ್ಲದೆ, ಸಾಬೂನು, ಕೊಬ್ಬರಿ ಎಣ್ಣೆ, ಲೇಖನ ಸಾಮಗ್ರಿ, ಹಾಸಿಗೆ, ಹೊದಿಕೆ ಮತ್ತು ಔಷಧೋಪಚಾರ ನೀಡಲಾಗುತ್ತದೆ. ಡಾ॥ ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ೧೯೯೩–೯೪ನೇ ಸಾಲಿನಿಂದ ಒಂದರಿಂದ ನಾಲ್ಕನೇ ತರಗತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮಕ್ಕಳಿಗೆ ಶಾಲೆಗಳಿಗೆ ದಾಖಲಾಗಲು ಪ್ರೋತ್ಸಾಹ ಧನ ಮಂಜೂರು ಮಾಡುವ ಕಾರ್ಯಕ್ರಮದಡಿ ಪ್ರತೀ ವಿದ್ಯಾರ್ಥಿಗೆ ವಾರ್ಷಿಕ ರೂ.೭೫/–ನ್ನು ನೀಡಲಾಗುತ್ತಿದೆ. ಸರ್ಕಾರದಿಂದ ಅಂಗೀಕೃತವಾದ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆದರೆ ವಿದ್ಯಾರ್ಥಿನಿಲಯದ ಸೌಕರ್ಯ ಹೊಂದಿಲ್ಲದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಐದರಿಂದ ಏಳನೇ ತರಗತಿಯ ಮಕ್ಕಳಿಗೆ ವಾರ್ಷಿಕ ₹ ೭೫/– ಹಾಗೂ ಎಂಟರಿಂದ ಹತ್ತನೇ ತರಗತಿ ಮಕ್ಕಳಿಗೆ ವಾರ್ಷಿಕ ₹ ೧೦೦ ರ ಶಿಷ್ಯ ವೇತನವನ್ನು ನೀಡಲಾಗುತ್ತದೆ.

## ಪದವಿಪೂರ್ವ ಶಿಕ್ಷಣ

ಈ ಹಂತದ ಶಿಕ್ಷಣ ಮೊದಲು ಪ್ರಥಮ ದರ್ಜೆ ಕಾಲೇಜು ಹಾಗೂ ಸಂಯುಕ್ತ ಪ್ರೌಢ ಶಾಲೆಗಳಲ್ಲಿ ಕ್ರಮವಾಗಿ ಪಿ.ಯು.ಸಿ., ಮತ್ತು ಹನ್ನೊಂದನೇ ತರಗತಿ ಎಂಬ ಹೆಸರಿನಡಿ ನೀಡಲ್ಪಡುತ್ತಿತ್ತು. ಈ ಶೈಕ್ಷಣಿಕ ಹಂತಕ್ಕೆ ಒಂದು ವ್ಯವಸ್ಥಿತವಾದ ಸ್ವತಂತ್ರ ರೂಪ ನೀಡುವ ಉದ್ದೇಶದಿಂದ ಸರಕಾರ ನೂತನ ಶಿಕ್ಷಣ ನೀತಿಯನ್ವಯ (೧೦+೨+೩) ೧೯೭೧–೭೨ ಸಾಲಿನಲ್ಲಿ +೨ ಶಿಕ್ಷಣವನ್ನು ರಾಜ್ಯಾದ್ಯಂತ ಜಾರಿಮಾಡಿತು. ಇದರಿಂದಾಗಿ, ಸಂಯುಕ್ತ ಪ್ರೌಢ ಶಾಲೆಗಳಲ್ಲಿ ನೀಡಲ್ಪಡುತ್ತಿದ್ದ ಹತ್ತನೇ ತರಗತಿಯ ನಂತರದ ಒಂದು ವರ್ಷದ ೧೧ನೇ ತರಗತಿ ಹಾಗೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿಗೆ ಮೊದಲು ನೀಡಲ್ಪಡುತ್ತಿದ್ದ ಒಂದು ವರ್ಷದ ಪಿ.ಯು.ಸಿ., ತರಗತಿಗಳು ರದ್ದಾಗಿ, ಎರಡು ವರ್ಷ ಅವಧಿಯ ಪದವಿಪೂರ್ವ ಶಿಕ್ಷಣ ಜಾರಿಯಾಯಿತು. ಇದರ ಆಡಳಿತಕ್ಕಾಗಿ ಪದವಿ ಪೂರ್ವ ಶಿಕ್ಷಣ ಮಂಡಳಿಯೂ ಸ್ಥಾಪಿತವಾಯಿತು. ಪದವಿ ಪೂರ್ವ ಶಿಕ್ಷಣವು ಅತ್ಯಂತ ಮಹತ್ವಪೂರ್ಣ ಘಟ್ಟವಾಗಿದ್ದು, ಈ ಹಂತದಲ್ಲಿ ವಿದ್ಯಾರ್ಥಿಗಳು ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಪದವಿ ಪೂರ್ವ ಶಿಕ್ಷಣವನ್ನು ಬೋಧನೆ ಮಾಡುವ ಎಲ್ಲಾ ಕಾಲೇಜುಗಳು ಆಡಳಿತಾತ್ಮಕವಾಗಿ ಶೈಕ್ಷಣಿಕವಾಗಿ ಮತ್ತು ಪರೀಕ್ಷ ಕಾರ್ಯದಲ್ಲಿ ಪದವಿ ಪೂರ್ವಶಿಕ್ಷಣ ವ್ಯಾಪ್ತಿಗೆ ಒಳಪಟ್ಟಿವೆ. ಮಂಡಳಿಯ ಮುಖ್ಯಸ್ಥರಾಗಿ ಒಬ್ಬ ಅಧ್ಯಕ್ಷರು, ಇವರ ಸಹಾಯಕ್ಕಾಗಿ ಒಬ್ಬ ನಿರ್ದೇಶಕರು, ಉಪ ಮತ್ತು ಸಹ ನಿರ್ದೇಶಕರೂ ನಿಯೋಜಿಸಲ್ಪಟ್ಟರು. ತದನಂತರ ಮಂಡಳಿ ಕೆಲಕಾಲ ನಿರ್ದೇಶಕರ ನೇರ ಆಡಳಿತಕ್ಕೊಳಪಟ್ಟಿತು. ೧೯೮೬ ರಿಂದ ಪದವಿಪೂರ್ವ ಶಿಕ್ಷಣ ಮಂಡಳಿಯು 'ಪದವಿಪೂರ್ವ ಶಿಕ್ಷಣ ಇಲಾಖೆ' ಎಂದು ಪುನರ್ ನಾಮಕರಣಗೊಂಡಿತು. ಸರ್ಕಾರಿ, ಖಾಸಗಿ, ಅನುದಾನಿತ ಮತ್ತು ಅನುದಾನ ರಹಿತ ಪದವಿ ಕಾಲೇಜುಗಳು ಪಿ.ಯು.ಸಿ., ತರಗತಿಗಳು ಸ್ವತಂತ್ರ ಹಾಗೂ ಸಂಯುಕ್ತ ಪದವಿಪೂರ್ವ ಕಾಲೇಜುಗಳ

ಪಿ.ಯು.ಸಿ., ತರಗತಿಗಳ ಪರೀಕ್ಷೆ ಮತ್ತು ಆಡಳಿತಾತ್ಮಕ ಹತೋಟಿಯನ್ನು ಇಲಾಖೆ ಪಡೆಯಿತು. ಪ್ರಸ್ತುತ ಇಲಾಖೆ ಐ.ಎ.ಎಸ್. ದರ್ಜೆಯ ಆಯುಕ್ತರ ಆಡಳಿತಾಧಿಕಾರದಲ್ಲಿ ರಾಜ್ಯ ರಾಜಧಾನಿಯಲ್ಲಿ ತನ್ನ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಸ್ಥಾನದಲ್ಲಿ ಕಮಿಷನರ್‌ರವರ ಸಹಾಯಕ್ಕೆ  ಇಬ್ಬರು ಜಂಟಿ ನಿರ್ದೇಶಕರು, ನಾಲ್ವರು ಉಪ ನಿರ್ದೇಶಕರು ಮತ್ತು ಆರು ಸಹ ನಿರ್ದೇಶಕರು  ಇದ್ದು, ಜಿಲ್ಲಾ ಕಚೇರಿಗಳ ಆಡಳಿತಕ್ಕಾಗಿ ಉಪ ನಿರ್ದೇಶಕರು ನೇಮಿಸಲ್ಪಟ್ಟಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೯-೧೦ರ ಶೈಕ್ಷಣಿಕ ಸಾಲಿನಲ್ಲಿ ಒಟ್ಟು ೫೬ ಪದವಿಪೂರ್ವ ಕಾಲೇಜುಗಳಿದ್ದು, ಅವುಗಳಲ್ಲಿ ೨೪ ಸರಕಾರಿ, ಮೂರು ಅನುದಾನಿತ, ೨೮ ಅನುದಾನರಹಿತ, ಹಾಗೂ ಒಂದು ವಿಭಜಿತ ಕಾಲೇಜುಗಳಿವೆ.  ಶಿಕ್ಷಣ ಇಲಾಖೆಯ ೨೦೦೯-೧೦ರ ವಾರ್ಷಿಕ ವರದಿಯ ಪ್ರಕಾರ ಚಾಮರಾಜನಗರ ಜಿಲ್ಲೆಯ ೨೦೦೮ರ ಸಾಲಿನ ದ್ವಿತೀಯ ಪಿ.ಯು.ಸಿಯ ಶೇಕಡಾವಾರು ಫಲಿತಾಂಶ ೩೯.೫೦ ಆಗಿದ್ದು, ರಾಜ್ಯದಲ್ಲಿ ೧೫ ನೇ ಸ್ಥಾನದಲ್ಲಿದೆ ಹಾಗೂ ೨೦೦೯ರ ಶೇಕಡಾವಾರು ಫಲಿತಾಂಶ ೫೦.೩೩ ಆಗಿರುತ್ತದೆ.

೨೦೦೯-೧೦ರ ಸಾಲಿನ ಜಿಲ್ಲೆಯ ಪದವಿ ಪೂರ್ವ ಕಾಲೇಜುಗಳ ವಿವರ ಈ ಕೆಳಕಂಡಂತಿದೆ.

| ತಾಲೂಕುಗಳು | ಕಾಲೇಜುಗಳ ಸಂಖ್ಯೆ | ಹುಡುಗರು | ಹುಡುಗಿಯರು |
|---|---|---|---|
| **ಚಾಮರಾಜನಗರ** | ೧೫ | ೧೦೩೬ | ೧೨೪೦ |
| **ಗುಂಡ್ಲುಪೇಟೆ** | ೧೨ | ೯೬೮ | ೮೯೧ |
| **ಕೊಳ್ಳೇಗಾಲ** | ೨೪ | ೧೬೦೦ | ೧೫೯೨ |
| **ಯಳಂದೂರು** | ೦೩ | ೨೬೬ | ೨೬೭ |
| **ಜಿಲ್ಲಾ ಮೊತ್ತ** | **೫೪** | **೩೮೭೦** | **೩೯೯೦** |

***ಆಧಾರ: ಜಿಲ್ಲೆಯ ಅಂಕಿಅಂಶಗಳ ನೋಟ***

## ಜೆ. ಎಸ್. ಎಸ್. ಮಹಾವಿದ್ಯಾಪೀಠ, ಚಾಮರಾಜನಗರ

ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಸ್ಥೆಯಾದ ಜೆಎಸ್‌ಎಸ್ ಮಹಾವಿದ್ಯಾಪೀಠ ಮೈಸೂರಿನಲ್ಲಿ ೧೯೫೪ರಲ್ಲಿ ಸ್ಥಾಪನೆಗೊಂಡಿದ್ದು, ೨೦೦೪ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ರಾಜ್ಯಾದ್ಯಂತ ಶಿಶುವಿಹಾರ ಮತ್ತು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ತನ್ನ ವಿವಿಧ ಶಿಕ್ಷಣ ಕೇಂದ್ರಗಳ ಮೂಲಕ ಶೈಕ್ಷಣಿಕ ರಂಗಕ್ಕೆ ಗಣನೀಯ ಸೇವೆ ಸಲ್ಲಿಸುತ್ತಿದೆ. ಪೀಠವು ದೈಹಿಕ ಮತ್ತು ಮಾನಸಿಕ ಸವಾಲುಗಳನ್ನು ಎದುರಿಸುತ್ತಿರುವ ಮಕ್ಕಳಿಗೆ ವಿಶೇಷ ಪ್ರಾಶಸ್ತ್ಯ ನೀಡುತ್ತಿದೆ. ಮನೋವೈಕಲ್ಯವುಳ್ಳ ಮಕ್ಕಳು ಕಲಿಕೆಯ ಆನಂದವನ್ನು ಅನುಭವಿಸಲು ಅವರಿಗೆ 'ಸಹನಾ' ಶಾಲೆಗಳೆಂಬ ವಿಶೇಷ ಸಂಸ್ಥೆಗಳನ್ನು ನಡೆಸುತ್ತಿದೆ. ಸ್ತ್ರೀಯರ ಸಬಲೀಕರಣಕ್ಕೆ ಒತ್ತು ನೀಡುವ ಸಲುವಾಗಿ ಇವರಿಗೆ ಪ್ರತ್ಯೇಕ ಶಾಲಾ ಕಾಲೇಜುಗಳನ್ನು ನಡೆಸುತ್ತಿದೆ. ಸಾಂಪ್ರದಾಯಿಕ ಶಿಕ್ಷಣವನ್ನು ಉಳಿಸಿ, ಬೆಳೆಸುವ ಸಲುವಾಗಿ ಈ ಪೀಠ, ಗುರುಕುಲ ಮಾದರಿಯಲ್ಲಿ  ಸಂಸ್ಕೃತ ಶಿಕ್ಷಣವನ್ನು ನೀಡುತ್ತಿದೆ. ಹಲವಾರು ಪದವಿಪೂರ್ವ, ಪದವಿ, ಹಾಗೂ ಸ್ನಾತಕೋತ್ತರ ಕೇಂದ್ರಗಳ ಮೂಲಕ ವೃತ್ತಿಪರ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣವನ್ನು ನೀಡುತ್ತಿದೆ. ತನ್ನ ಸಾಂಪ್ರದಾಯಿಕ ಹಾಗೂ ಅಲೋಪತಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳ ಮೂಲಕ ಸಮಾಜ ಸೇವೆಯನ್ನು ಅವಿರತವಾಗಿ ನಡೆಸುತ್ತಿದೆ. ಗ್ರಾಮೀಣ ಜನಸಮುದಾಯದ

ಮುನ್ನಡೆಗಾಗಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ (ICAR) ಆಶ್ರಯದಲ್ಲಿ ಕೃಷಿ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಿ, ವ್ಯವಸಾಯ ಸಂಬಂಧಿತ ಕ್ಷೇತ್ರಗಳ ಬಗ್ಗೆ ತಂತ್ರಜ್ಞಾನ ಪ್ರಚಾರ ನಡೆಸುತ್ತಿದೆ. ಚಾಮರಾಜನಗರದಲ್ಲಿ ಸ್ಥಾಪಿತವಾಗಿರುವ ಗ್ರಾಮೀಣ ಅಭಿವೃದ್ಧಿ ಸ್ವ–ಉದ್ಯೋಗ ಮತ್ತು ತರಬೇತಿ ಸಂಸ್ಥೆ (RUDSET) ಮೂಲಕ ಯುವ ಜನಾಂಗವನ್ನು ಸ್ವಾವಲಂಬಿ ಉದ್ಯಮಶೀಲರನ್ನಾಗಿಸಿದೆ. ಈ ಪೀಠದ ಅಂಧ ವಿದ್ಯಾರ್ಥಿಗಳ ಶಾಲೆ ಹಾಗೂ ವಾಕ್‌ಶ್ರವಣ ಸಂಸ್ಥೆಗಳು ಸದರಿ ನ್ಯೂನತೆಗಳಿರುವವರಿಗೆ ಪರಿಣಾಮಕಾರಿ ತರಬೇತಿ ನೀಡುತ್ತವೆ. ಚಾಮರಾಜನಗರ ಜಿಲ್ಲೆಯಲ್ಲಿ ಪೀಠದ ವತಿಯಿಂದ ನಡೆಯುತ್ತಿರುವ ವಿವಿಧ ಹಂತಗಳ ಸಂಸ್ಥೆಗಳ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ. **ಶಿಶುವಿಹಾರ**: ೧. ಕಾಮಗೆರೆ ಮತ್ತು ೨. ರಾಮಾಪುರ (ಎರಡೂ ಕೊಳ್ಳೇಗಾಲ ತಾಲೂಕು); **ನರ್ಸರಿ ಶಾಲೆಗಳು:** ೧. ಸಂತೇಮರಳ್ಳಿ (ಚಾಮರಾಜನಗರ ತಾ.) ೨. ಬಾಚಹಳ್ಳಿ (ಗುಂಡ್ಲುಪೇಟೆ ತಾ.) ೩. ಕಾಮಗೆರೆ (ಕೊಳ್ಳೇಗಾಲ ತಾ.) ೪. ರಾಮಾಪುರ (ಕೊಳ್ಳೇಗಾಲ); **ಪ್ರಾಥಮಿಕ ಶಾಲೆಗಳು:** ೧. ಸಂತೇಮರಳ್ಳಿ (ಚಾಮರಾಜನಗರ), ಕಾಮಗೆರೆ, ರಾಮಾಪುರ (ಕೊಳ್ಳೇಗಾಲ); **ಪ್ರೌಢಶಾಲೆಗಳು–** ೧. ಚಾಮರಾಜನಗರ (ಬಾಲಕರು), ೨. ಚಾಮರಾಜನಗರ(ಬಾಲಕಿಯರು) ೩.ಯಳಂದೂರು (ಬಾಲಕಿಯರು), ೪. ಕಾಮಗೆರೆ (ಬಾಲಕಿಯರು) ೫. ಅರಕಲವಾಡಿ, ೬. ಉಮ್ಮತ್ತೂರು, ೭. ಉಡಿವಾಲ, ೮. ಸಂತೇಮರಳ್ಳಿ, ೯. ಹಳ್ಳಿಕೆರೆಹುಂಡಿ (ಎಲ್ಲಾ ಚಾಮರಾಜನಗರ ತಾ||), ೧೦. ಗುಂಡ್ಲುಪೇಟೆ, ೧೧. ತೆರಕಣಾಂಬಿ, ೧೨. ಪಡಗೂರು, ೧೩. ಬರಗಿ, ೧೪. ಶಿವಪುರ, ೧೫. ಹೊರೆಯಾಲ, ೧೬. ಕೊಡಸೋಗೆ (ಎಲ್ಲಾ ಗುಂಡ್ಲುಪೇಟೆ ತಾ||), ೧೭. ಅಜ್ಜಿಪುರ, ೧೮. ಬಂಡಹಳ್ಳಿ, ೧೯. ಮುಡಿಗುಂಡ, ೨೦. ರಾಮಾಪುರ (ಎಲ್ಲಾ ಕೊಳ್ಳೇಗಾಲ ತಾ||), ೨೧. ಗೌಡಳ್ಳಿ (ಯಳಂದೂರು); **ಸಂಸ್ಕೃತ ಪಾಠಶಾಲೆಗಳು:** ೧. ಚಾಮರಾಜನಗರ, ೨. ತೆರಕಣಾಂಬಿ (ಗುಂಡ್ಲುಪೇಟೆ ತಾ.), ೩. ರಾಮಾಪುರ (ಕೊಳ್ಳೇಗಾಲ ತಾ.); **ಪದವಿಪೂರ್ವ ಕಾಲೇಜುಗಳು:** ೧. ಚಾಮರಾಜನಗರ (ಮಹಿಳಾ), ೨. ಕೊಳ್ಳೇಗಾಲ (ಮಹಿಳಾ), ೩. ಯಳಂದೂರು (ಮಹಿಳಾ), ೪. ಗುಂಡ್ಲುಪೇಟೆ (ಮಹಿಳಾ), ೫. ರಾಮಾಪುರ, ೬. ಮಾರ್ಟಳ್ಳಿ (ಎಡರೂ ಕೊಳ್ಳೇಗಾಲ ತಾ||); **ಪದವಿ ಕಾಲೇಜುಗಳು:** ೧. ಗುಂಡ್ಲುಪೇಟೆ, ೨. ಚಾಮರಾಜನಗರ (ಮಹಿಳಾ), ೩. ಕೊಳ್ಳೇಗಾಲ (ಮಹಿಳಾ); **ಐ.ಟಿ.ಐ.ಗಳು:** ೧. ಚಾಮರಾಜನಗರ, ೨. ತಾಳವಾಡಿ, **ನರ್ಸಿಂಗ್:** ೧. ಚಾಮಾಜನಗರ, ೨.ಕೊಳ್ಳೇಗಾಲ (ಎರಡೂ ೨೦೦೪–೦೫ ರಿಂದ) **ಶಿಕ್ಷಕರ ತರಬೇತಿ ಸಂಸ್ಥೆಗಳು:** ೧. **ಡಿ.ಎಡ್. ಸಂಸ್ಥೆ,** ಯಳಂದೂರು, ೨. **ಬಿ.ಎಡ್. ಸಂಸ್ಥೆ,** ಚಾಮರಾಜನಗರ, **ಅಭಿವೃದ್ಧಿ ಸಂಸ್ಥೆಗಳು:** ೧. ಜನ ಶಿಕ್ಷಣ ಸಂಸ್ಥಾನ, ಚಾಮರಾಜನಗರ, ೨. ರುಡ್‌ಸೆಟ್, ಚಾಮರಾಜನಗರ.

## ಪದವಿ ಶಿಕ್ಷಣ

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ೧೫ ಪ್ರಥಮ ದರ್ಜೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ವಿವರ ಈ ಕೆಳಕಂಡಂತಿದೆ.

**ಜಿಲ್ಲೆಯ ಸಾಮಾನ್ಯ ಪದವಿ ಕಾಲೇಜುಗಳ ವಿವರ**

| ತಾಲೂಕುಗಳು | ಕಾಲೇಜುಗಳ ಸಂಖ್ಯೆ | ಹುಡುಗರು | ಹುಡುಗಿಯರು |
|---|---|---|---|
| ಚಾಮರಾಜನಗರ | ೬ | ೭೨೫ | ೮೧೫ |
| ಗುಂಡ್ಲುಪೇಟೆ | ೩ | ೬೬೫ | ೫೩೦ |
| ಕೊಳ್ಳೇಗಾಲ | ೪ | ೭೨೦ | ೬೮೬ |
| ಯಳಂದೂರು | ೨ | ೧೩೬ | ೧೧೭ |
| ಜಿಲ್ಲಾ ಮೊತ್ತ | ೧೫ | ೨೨೪೬ | ೨೧೪೭ |

*ಆಧಾರ: ಜಿಲ್ಲೆಯ ಅಂಕಿಅಂಶಗಳ ನೋಟ*

# ತಾಂತ್ರಿಕ ಶಿಕ್ಷಣ

ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಹಾಗೂ ತಾಂತ್ರಿಕ ತರಬೇತಿ ಸಂಸ್ಥೆ (ಐಟಿಐ ಅಥವಾ ಐಟಿಸಿ)ಗಳು ತಾಂತ್ರಿಕ ಶಿಕ್ಷಣ ನೀಡುವ ಪ್ರಮುಖ ಸಂಸ್ಥೆಗಳಾಗಿದ್ದು, ಮೊದಲನೇ ವರ್ಗದ ಸಂಸ್ಥೆ ವಿವಿಧ ತಾಂತ್ರಿಕ ವಿಷಯಗಳಲ್ಲಿ ಬಿ.ಇ., ಪದವಿ ನೀಡಿದರೆ, ಪಾಲಿಟೆಕ್ನಿಕ್‌ಗಳು ಡಿಪ್ಲೊಮಾ ಪದವಿಗಳಿಗಾಗಿ ಹಾಗೂ ಐಟಿಐ.,ಗಳು ಸರ್ಟಿಫಿಕೇಟ್ ಕೋರ್ಸ್‌ಗಾಗಿ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತವೆ. ೧೯೮೮ರಲ್ಲಿ ಚಾಮರಾಜನಗರದಲ್ಲಿ ಪ್ರಾರಂಭಗೊಂಡ ಸರಕಾರಿ ಪಾಲಿಟೆಕ್ನಿಕ್ ಜಿಲ್ಲೆಯ ಪ್ರಥಮ ತಾಂತ್ರಿಕ ಶಿಕ್ಷಣ ಸಂಸ್ಥೆ ಎನ್ನಬಹುದು. ಇದೇ ಕಟ್ಟಡದಲ್ಲಿ ಸರಕಾರ ೨೦೦೭–೦೮ನೇ ಸಾಲಿನಲ್ಲಿ ಒಂದು ಇಂಜನಿಯರಿಂಗ್ ಕಾಲೇಜನ್ನು ಪ್ರಾರಂಭಿಸಿರುತ್ತದೆ. ಇದರ ಮೊದಲ ಗುಂಪಿನ ವಿದ್ಯಾರ್ಥಿ ಸಮೂಹ ತನ್ನ ಎರಡನೇ ಸೆಮಿಸ್ಟರ್ ಹಂತವನ್ನು ಪೂರೈಸಿರುತ್ತದೆ. ಇದಲ್ಲದೆ ಜಿಲ್ಲೆಯಲ್ಲಿ ಒಟ್ಟು ಎಂಟು ಐಟಿಐ.(ಐಟಿಸಿ)ಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ ಚಾಮರಾಜನಗರದ ಜೆಎಸ್‌ಎಸ್ ಐಟಿಐ., ಅನುದಾನಿತ ಸಂಸ್ಥೆಯಾಗಿರುತ್ತದೆ. ಉಳಿದ ಏಳು ಸಂಸ್ಥೆಗಳು ಅನುದಾನ ರಹಿತವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಸಂಸ್ಥೆಗಳಲ್ಲಿ ೨೦೦೮–೦೯ನೇ ಸಾಲಿನಲ್ಲಿ ಒಟ್ಟು ೫೧೮ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು.

**ಜಿಲ್ಲೆಯಲ್ಲಿರುವ ತಾಂತ್ರಿಕ ಕಾಲೇಜುಗಳ ವಿವರ ಈ ಕೆಳಕಂಡಂತಿದೆ.**

| ತಾಲೂಕುಗಳು | ಪಾಲಿಟೆಕ್ನಿಕ್‌ಗಳು | | | ಎಂಜಿನಿಯರಿಂಗ್ ಕಾಲೇಜುಗಳು | | |
|---|---|---|---|---|---|---|
| | ಕಾಲೇಜುಗಳ ಸಂಖ್ಯೆ | ಹುಡುಗರು | ಹುಡುಗಿಯರು | ಕಾಲೇಜುಗಳ ಸಂಖ್ಯೆ | ಹುಡುಗರು | ಹುಡುಗಿಯರು |
| ಚಾಮರಾಜನಗರ | ೧ | ೫೭೬ | ೧೧೫ | ೧ | ೪೧೨ | ೨೯ |
| ಗುಂಡ್ಲುಪೇಟೆ | – | – | – | – | – | – |
| ಕೊಳ್ಳೇಗಾಲ | – | – | – | – | – | – |
| ಯಳಂದೂರು | – | – | – | – | – | – |
| ಜಿಲ್ಲಾ ಮೊತ್ತ | ೧ | ೫೭೬ | ೧೧೫ | ೧ | ೪೧೨ | ೨೯ |

*ಆಧಾರ: ಜಿಲ್ಲೆಯ ಅಂಕಿಅಂಶಗಳ ನೋಟ*

೨೦೦೯–೧೦ರ ಜಿಲ್ಲಾ ಅಂಕಿ–ಅಂಶಗಳ ವರದಿಯ ಮೇರೆಗೆ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜುಗಳು ಹಾಗೂ ದಂತ ವೈದ್ಯಕೀಯ ಕಾಲೇಜುಗಳು ಇರುವುದಿಲ್ಲ.

# ಸ್ನಾತಕೋತ್ತರ ಶಿಕ್ಷಣ

ಜೆ.ಎಸ್.ಎಸ್. ಮಹಾವಿದ್ಯಾಪೀಠವು ೨೦೦೨–೦೩ರಲ್ಲಿ ಚಾಮರಾಜನಗರದಲ್ಲಿ ಕನ್ನಡ ಸ್ನಾತಕೋತ್ತರ ವಿಭಾಗವನ್ನು ಪ್ರಾರಂಭಿಸಿದ್ದು, ಇದು ಉತ್ತಮ ಗ್ರಂಥಾಲಯ ಸೌಲಭ್ಯವನ್ನು ಹೊಂದಿದೆ ಹಾಗೂ ಕೊಳ್ಳೇಗಾಲದಲ್ಲಿರುವ ಪದವಿ ಕಾಲೇಜಿನಲ್ಲಿ ಎಂ.ಕಾಂ., ಸ್ನಾತಕೋತ್ತರ ತರಗತಿಗಳು ನಡೆಸುತ್ತಿದೆ. ೨೦೦೭–೦೮ ರ ಶೈಕ್ಷಣಿಕ ಸಾಲಿನಿಂದ ಚಾಮರಾಜನಗರದಲ್ಲಿ ಎಂಜನಿಯರಿಂಗ್ ಕಾಲೇಜು ಸ್ಥಾಪನೆಯಾಗಿದೆ.

## ನ್ಯಾಷನಲ್ ಕೆಡೆಟ್ ಕೋರ್ (ಎನ್. ಸಿ. ಸಿ.)

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಶಿಸ್ತು ಹಾಗೂ ದೇಶ ಪ್ರೇಮ ಬೆಳೆಸಲು ಸಹಕಾರಿಯಾದ ಎನ್.ಸಿ.ಸಿ., ತರಬೇತಿ ಶೈಕ್ಷಣಿಕವಾಗಿಯೂ ಅವರಿಗೆ ಉಪಯುಕ್ತವಾಗಿದೆ. ಪ್ರೌಢಶಾಲೆ, ಪದವಿಪೂರ್ವ ತರಗತಿ ಹಾಗೂ ಪದವಿ ತರಗತಿಗಳ ವಿದ್ಯಾರ್ಥಿಗಳು ಈ ದಳದಲ್ಲಿ ತಮ್ಮ ಇಚ್ಛೆಗೆ ಅನುಗುಣವಾದಂತೆ ಭೂ, ಜಲ ಅಥವಾ ವಾಯು ವಿಭಾಗ (ಆರ್ಮಿ, ನೇವಿ ಅಥವಾ ಏರ್‌ವಿಂಗ್) ಗಳಲ್ಲಿ ಕೆಡೆಟ್‌ಗಳಾಗಿ ದಾಖಲಾಗಬಹುದಾಗಿದೆ. ಅವರವರ ಶ್ರದ್ಧೆ ಪ್ರಗತಿ ಮತ್ತು ಶ್ರಮಕ್ಕೆ ತಕ್ಕಂತೆ ಕೆಡೆಟ್ ಗಳಿಗೆ ವಿವಿಧ ಬಡ್ತಿಗಳನ್ನು (ಲಾನ್ಸ್ ಕಾರ್ಪೊರಲ್, ಕಾರ್ಪೊರಲ್, ಸಾರ್ಜೆಂಟ್, ಸಿಎಸ್‌ಎಂ, ಅಂಡರ್ ಆಫೀಸರ್, ಸೀನಿಯರ್ ಅಂಡರ್ ಆಫೀಸರ್, ಕಂಪೆನಿ ಅಂಡರ್ ಆಫೀಸರ್ ಮತ್ತು ಬೆಟ್ಯಾಲಿಯನ್ ಅಂಡರ್ ಆಫೀಸರ್) ನೀಡಲಾಗುತ್ತದೆ. ಪ್ರೌಢಶಾಲಾ ವಿಭಾಗಕ್ಕೆ 'ಎ' ಸರ್ಟಿಫಿಕೇಟ್, ಕಾಲೇಜು ವಿಭಾಗಕ್ಕೆ 'ಬಿ' ಹಾಗೂ 'ಸಿ' ಸರ್ಟಿಫಿಕೇಟ್ ಪರೀಕ್ಷೆಗಳು ನಿಗದಿಯಾಗಿದ್ದು, ಮೇಲ್ಕಂಡ ಬಡ್ತಿ ನೀಡುವಿಕೆಗೆ ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಕಡ್ಡಾಯವಾಗಿರುತ್ತದೆ. ಎನ್.ಸಿ.ಸಿ. ತರಬೇತಿಯ ಅವಧಿಯನ್ನಾಧರಿಸಿ, ಇವರಿಗೆ ವೃತ್ತಿ ಶಿಕ್ಷಣ ಸೀಟು ಹಂಚಿಕೆಯಲ್ಲಿಯೂ, ಹಲವು ಸರ್ಕಾರಿ ನೌಕರಿಗಳಲ್ಲಿಯೂ ಮೀಸಲಾತಿಯ (ಎನ್.ಸಿ.ಸಿ.,ಕೋಟಾ) ಅವಕಾಶವಿರುತ್ತದೆ. ಪ್ರತೀ ವಿದ್ಯಾ ಸಂಸ್ಥೆಯಲ್ಲಿ ಎನ್.ಸಿ.ಸಿ., ದಳದ ಮೇಲ್ವಿಚಾರಕರಾಗಿ ಆಯಾಯ ಶಾಲಾ ಕಾಲೇಜಿನ ಅಧ್ಯಾಪಕ/ಅಧ್ಯಾಪಕಿಯೊಬ್ಬರಿಗೆ ವಿಶೇಷ ತರಬೇತಿ ನೀಡಿ ನಿಯೋಜಿಸಲಾಗುತ್ತದೆ. ನಿಗದಿತ ದಿನಗಳಲ್ಲಿ ತರಬೇತಿ ನೀಡಲು ಭಾರತೀಯ ಸೇನೆಯಿಂದಲೇ ನಿಯೋಜಿತರಾದ ಅಧಿಕಾರಿಗಳು ವಿದ್ಯಾ ಸಂಸ್ಥೆಗಳಿಗೆ ಭೇಟಿ ನೀಡುತ್ತಾರೆ. ಹೈಸ್ಕೂಲು ವಿಭಾಗದ ಎನ್.ಸಿ.ಸಿ., ದಳವನ್ನು ಜ್ಯೂನಿಯರ್ ಡಿವಿಷನ್ (ಜೆ.ಡಿ.) ಎಂದೂ, ಕಾಲೇಜು ವಿಭಾಗವನ್ನು ಸೀನಿಯರ್ ಡಿವಿಷನ್ (ಎಸ್‌ಡಿ) ಎಂದೂ ಕರೆಯಲಾಗುತ್ತದೆ.

ಮೈಸೂರು ಜಿಲ್ಲೆಯಲ್ಲಿ ಎನ್.ಸಿ.ಸಿ., ಚಟುವಟಿಕೆ ೧೯೪೮ರ ಅಕ್ಟೋಬರ್ ತಿಂಗಳಿನಲ್ಲಿ ಪ್ರಾರಂಭವಾದರೂ, ತಾಲೂಕು ಕೇಂದ್ರವಾಗಿದ್ದ ಚಾಮರಾಜನಗರದಲ್ಲಿ ಕಂಡಿರಲಿಲ್ಲ. ಕೊಳ್ಳೇಗಾಲದ ಮಹದೇಶ್ವರ ಪ್ರಥಮ ದರ್ಜೆ ಕಾಲೇಜಿನಲ್ಲಿ ೧೯೮೮ರಲ್ಲಿ ಪ್ರಾರಂಭಗೊಂಡ ಎನ್.ಸಿ.ಸಿ., ದಳ ಜಿಲ್ಲೆಯಲ್ಲಿ ಪ್ರಥಮವಾಗಿ ಎನ್.ಸಿ.ಸಿ., ಕಾರ್ಯಾಚರಣೆ ಪ್ರಾರಂಭ ಮಾಡಿತು. ನಂತರ ಗುಂಡ್ಲುಪೇಟೆಯ ಜೆ.ಎಸ್.ಎಸ್., ಪ್ರಥಮ ದರ್ಜೆ ಕಾಲೇಜಿನಲ್ಲಿ ಒಂದು ದಳ ಕಾರ್ಯಾರಂಭ ಮಾಡಿತು. ಹನೂರಿನ ಕೃಷ್ಣರಾಜ ಸಂಸ್ಥೆಯಲ್ಲಿ ಒಂದು ಜೆಡಿ (Junior Division) ದಳ ಕಾರ್ಯೋನ್ಮುಖವಾಗಿದೆ. ಮೇಲ್ಕಂಡ ಮೂರು ಸಂಸ್ಥೆಗಳ ದಳಗಳಲ್ಲಿ ೨೦೦೮ರ ನವೆಂಬರ್‌ನಲ್ಲಿದ್ದಂತೆ ಕ್ರಮವಾಗಿ ೭೦, ೧೦೦ ಹಾಗೂ ೯೦ ಕೆಡೆಟ್‌ಗಳಿದ್ದು, ಒಬ್ಬೊಬ್ಬ ಅಧಿಕಾರಿ ಇರುತ್ತಾರೆ. ಈ ಎಲ್ಲಾ ದಳಗಳ ಆಡಳಿತಾಧಿಕಾರವನ್ನು ಮೈಸೂರಿನ ಗ್ರೂಪ್ ಹೆಡ್ ಕ್ವಾರ್ಟರ್ಸ್‌ನಲ್ಲಿರುವ ಕಮಾಂಡಿಂಗ್ ಆಫೀಸರ್ ಹೊಂದಿರುತ್ತಾರೆ. ಇವರ ಸಹಾಯಕ್ಕೆ ಒಬ್ಬ ಆಡಳಿತಾಧಿಕಾರಿ, ಒಬ್ಬ ಅಧೀಕ್ಷಕ ಹಾಗೂ ೧೪ ಮಂದಿ ಸಿಬ್ಬಂದಿ ವರ್ಗವಿದೆ. ಪ್ರತೀ ವರ್ಷ ಕೆಡೆಟ್ ಹಾಗೂ ಅಧಿಕಾರಿಗಳಿಗೆ ವಾರ್ಷಿಕ ತರಬೇತಿ ಶಿಬಿರ, ಬೇಸಿಗೆ ತರಬೇತಿ ಶಿಬಿರಗಳನ್ನು ಈ ಕಚೇರಿ ನಡೆಸುತ್ತದೆ. ಜನೋಪಯೋಗಿ ಕಾರ್ಯಕ್ರಮಗಳಾದ ಸ್ವಯಂ ರಕ್ತದಾನ ಶಿಬಿರ, ಸಸಿ ನೆಡುವುದು ಮುಂತಾದುವನ್ನು ಎನ್.ಸಿ.ಸಿ., ದಳ ನಡೆಸುತ್ತದೆ.

# ಗ್ರಂಥಾಲಯ

ಸಾರ್ವಜನಿಕ ಗ್ರಂಥಾಲಯ ಒಂದು ಮುಕ್ತವಾದ ಸಾರ್ವಜನಿಕ ಸಂಸ್ಥೆ "ಸಾರ್ವಜನಿಕ ಗ್ರಂಥಾಲಯ ಶ್ರೀಸಾಮಾನ್ಯನ ವಿದ್ಯಾಲಯ" ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ. ಸರ್ಕಾರ ಸಾರ್ವಜನಿಕರಲ್ಲಿ ವಿದ್ಯೆ, ಜ್ಞಾನ, ಓದಿನ ಬಗೆಗೆ ಅಭಿರುಚಿ, ಮುಂತಾದವುಗಳನ್ನು ಬೆಳೆಸಲು ಉದ್ದೇಶಿಸಿ ಸ್ಥಾಪನೆ ಮಾಡಿದ ಮುಕ್ತ ಸಾರ್ವಜನಿಕ ವ್ಯವಸ್ಥೆಯೇ ಈ ಗ್ರಂಥಾಲಯಗಳು. ಕರ್ನಾಟಕ ಸರ್ಕಾರವು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ಸ್ಥಾಪಿಸಿ, ಓದುಗರಿಗೆ ಗ್ರಂಥಾಲಯ ಸೇವೆಯನ್ನು ಒದಗಿಸುವ ಉದ್ದೇಶದಿಂದ ೧೯೬೫ರ ರಾಜ್ಯ ಗ್ರಂಥಾಲಯ ಕಾಯಿದೆ ರೂಪಿಸಿ ಇದು ೧೯೬೬ರಲ್ಲಿ ರಾಜ್ಯಾದ್ಯಂತ ಜಾರಿಯಾಯಿತು. ಸಾಹಿತ್ಯಾಭಿರುಚಿ, ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರಜ್ಞೆ ಇವುಗಳನ್ನು ಸಾರ್ವಜನಿಕರಲ್ಲಿ ಅಭಿವೃದ್ಧಿಪಡಿಸುವುದು, ಈ ವ್ಯವಸ್ಥೆಯ ಮುಖ್ಯ ಗುರಿ. ಆಬಾಲವೃದ್ಧರವರೆಗೆ ಎಲ್ಲರಿಗೂ ಸುಲಭ ಮನರಂಜನೆ, ಜ್ಞಾನ ಪ್ರಧಾನ ಮಾಡುವ, ಸಾಮಾಜಿಕ ಶಿಕ್ಷಣವನ್ನು ಮುಂದುವರೆಸುವ ಮತ್ತು ಮಾಹಿತಿ ಪ್ರಸಾರ ಮಾಡುವ ಒಂದು ಜೀವಂತಶಕ್ತಿಯಾಗಿ ಗ್ರಂಥಾಲಯಗಳು ಸೇವೆ ಸಲ್ಲಿಸುತ್ತಿವೆ. ಒಬ್ಬ ವ್ಯಕ್ತಿ ಸಾಂಪ್ರದಾಯಿಕ ಶಿಕ್ಷಣವನ್ನು ಎಲ್ಲಿಯವರೆಗೆ ಪಡೆದಿರಲಿ ಆತನಿಗೆ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾರ್ವಜನಿಕ ಗ್ರಂಥಾಲಯಗಳಿಗೆ ಮೊರೆ ಹೋಗುವುದು ಸಾಮಾನ್ಯವಾಗಿದೆ. ವ್ಯಕ್ತಿ ಮತ್ತು ಪುಸ್ತಕ ಜ್ಞಾನಗಳ ನಡುವಣ ಸೇತುವೆಯಾಗಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಒತ್ತಾಸೆಯಾಗಿಯೂ ಸಹ ಸಾರ್ವಜನಿಕ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ಕ್ಷೇತ್ರಗಳ ಬಗೆಗೆ ಪ್ರಚಲಿತ ವಿಚಾರಗಳನ್ನು ಕುರಿತು ಮಾಹಿತಿ ಒದಗಿಸುವಲ್ಲಿ ಈ ಗ್ರಂಥಾಲಯಗಳ ಸೇವೆ ಅತ್ಯವಶ್ಯಕವಾದುದು. ಹಾಗೆಯೇ ಇಂದಿನ ಸಾಂಸ್ಕೃತಿಕ ಬದುಕನ್ನು ರೂಢಿಸುವಲ್ಲಿ ಮತ್ತು ಅನೇಕ ಬಗೆಯ ಕಲೆಗಳ ಅಭಿವೃದ್ಧಿಪಡಿಸುವಲ್ಲಿ ಇವು ಪ್ರಮುಖಕೇಂದ್ರಗಳಾಗಿವೆ. ಸಮಯವನ್ನು ಸಾರ್ಥಕವಾಗಿ ಸದುಪಯೋಗಪಡಿಸಿಕೊಳ್ಳಲು ಮನರಂಜನೆಯ ಮೂಲಕ ಜ್ಞಾನಾರ್ಜನೆ ನಿರಂತರ ಕಲಿಕೆ ಮಾಡಿಕೊಳ್ಳಲು ಸಾರ್ವಜನಿಕರ ಪಾಲಿಗೆ ಈ ಗ್ರಂಥಾಲಯಗಳು ಉಪಯುಕ್ತವಾಗಿವೆ. ಚಾಮರಾಜನಗರದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯ ಪ್ರಾರಂಭವಾಗುವುದಕ್ಕೆ ಮೊದಲು ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯದ ವ್ಯಾಪ್ತಿಯಲ್ಲಿ ೧೯೭೭ ರಿಂದ ಶಾಖಾ ಗ್ರಂಥಾಲಯ ಕಾರ್ಯ ನಿರ್ವಹಿಸುತ್ತಿತ್ತು. ಚಾಮರಾಜನಗರ ಸ್ವತಂತ್ರ ಜಿಲ್ಲೆಯಾಗಿ ರೂಪುಗೊಂಡ ನಂತರ, ಇದೇ ಶಾಖಾ ಗ್ರಂಥಾಲಯವನ್ನು ಜಿಲ್ಲಾ ಕೇಂದ್ರ ಗ್ರಂಥಾಲಯವಾಗಿ ಉನ್ನತೀಕರಿಸಿ, ಇದರ ಅಧೀನದಲ್ಲಿ ಮೂರು ಶಾಖಾ ಗ್ರಂಥಾಲಯಗಳು ಎರಡು ಪಟ್ಟಣ ಪಂಚಾಯತಿ ಗ್ರಂಥಾಲಯಗಳು, ಒಂದು ಸಮುದಾಯ ಮಕ್ಕಳ ಕೇಂದ್ರ ಹಾಗೂ ೧೧೯ ಗ್ರಾಮ ಪಂಚಾಯತಿ ಗ್ರಂಥಾಲಯಗಳು ಕಾರ್ಯ ನಿರ್ವಹಿಸುವಂತೆ ಮಾಡಲಾಯಿತು.

ಚಾಮರಾಜನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ದಿನಪತ್ರಿಕೆ ವಿಭಾಗ, ನಿಯತಕಾಲಿಕೆ ವಿಭಾಗ, ಪುಸ್ತಕ ಸಂಗ್ರಹ ವಿಭಾಗ, ಪಠ್ಯ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕಗಳ ವಿಭಾಗ, ಪರಾಮರ್ಶನ ವಿಭಾಗ ಹಾಗೂ ಪುಸ್ತಕ ಎರವಲು ವಿಭಾಗಗಳಿರುತ್ತವೆ. ಗ್ರಂಥಾಲಯ ದಿನಂಪ್ರತಿ ಒಟ್ಟು ೧೬ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಿಗೆ ಚಂದಾ ನೀಡುತ್ತದೆ. ವಿವಿಧ ವಿಷಯಗಳಿಗೆ ಹಾಗೂ ಮಕ್ಕಳ ವಿಭಾಗಕ್ಕೆ ಮೇಲ್ಕಂಡ ಎರಡೂ ಭಾಷೆಗಳ ಸುಮಾರು ೩೮ ನಿಯತಕಾಲಿಕೆಗಳನ್ನು ಹಾಗೂ ಐದು ವಾರ್ಷಿಕ ವಿಶೇಷಾಂಕಗಳನ್ನು ತರಿಸಲಾಗುತ್ತದೆ. ಇಲ್ಲಿನ ಪುಸ್ತಕ ಸಂಗ್ರಹ ವಿಭಾಗದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ವಿವಿಧ ಭಾಷೆಗಳ ಒಟ್ಟು ೧,೨೦,೦೦೦ ಪುಸ್ತಕಗಳು ಹಾಗೂ ಕಲ್ಕತ್ತಾದ ರಾಜಾರಾಂ ಮೋಹನ್‌ರಾಯ್

ಗ್ರಂಥಾಲಯ ಪ್ರತಿಷ್ಠಾನದಿಂದ ದೇಣಿಗೆಯಾಗಿ ಪಡೆದ ಸುಮಾರು ೩೦,೦೦೦ ಗ್ರಂಥಗಳು ಇರುತ್ತವೆ. ಈ ವಿಭಾಗದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತರ ಹಾಗೂ ಇತರೆ ಅಪರೂಪದ ಪುಸ್ತಕಗಳನ್ನು ಇಡಲಾಗಿದೆ. ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ಸುಮಾರು ೧,೫೦೦ ವಿಶಿಷ್ಟ ಗ್ರಂಥಗಳಿದ್ದು, ಇವುಗಳಲ್ಲಿ ಶಬ್ದಕೋಶ, ವಿಶ್ವಕೋಶ, ಜಿಲ್ಲಾ ಗ್ಯಾಸೆಟಿಯರ್‌ಗಳು, ಇಯರ್‌ಬುಕ್‌ಗಳು ಹಾಗೂ ಅಟ್ಲಾಸ್‌ಗಳನ್ನು ಇಡಲಾಗಿದೆ. ಪುಸ್ತಕ ಎರವಲು ವಿಭಾಗದಲ್ಲಿ ಓದುಗರಿಗೆ ನಿಯಮಾನುಸಾರ ನಿರ್ದಿಷ್ಟ ಮೊತ್ತದ ಠೇವಣಿ ಪಡೆದು ಪುಸ್ತಕಗಳನ್ನು ೧೫ ದಿನ ಉಪಯೋಗಿಸಲು ಎರವಲು ನೀಡಲಾಗುತ್ತದೆ.

ಚಾಮರಾಜನಗರ ಜಿಲ್ಲಾ ಕೇಂದ್ರ ಗ್ರಂಥಾಲಯ ವ್ಯಾಪ್ತಿಗೆ ಒಳಪಟ್ಟಂತೆ ಕೊಳ್ಳೇಗಾಲ ಮತ್ತು ಗುಂಡ್ಲುಪೇಟೆಗಳಲ್ಲಿ ಶಾಖಾ ಗ್ರಂಥಾಲಯಗಳು ಹಾಗೂ ಯಳಂದೂರು ಮತ್ತು ಹನೂರುಗಳಲ್ಲಿ ಪಟ್ಟಣ ಪಂಚಾಯತಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಕೊಳ್ಳೇಗಾಲದ ಶಾಖಾ ಗ್ರಂಥಾಲಯದಲ್ಲಿ ೨೦,೦೦೦ ಗ್ರಂಥಗಳು, ಎಂಟು ದಿನಪತ್ರಿಕೆಗಳು, ೧೪ ನಿಯತಕಾಲಿಕೆಗಳು ಲಭ್ಯವಿದ್ದರೆ, ಗುಂಡ್ಲುಪೇಟೆಯ ಶಾಖಾ ಗ್ರಂಥಾಲಯದಲ್ಲಿ ೨೧,೦೦೦ ಗ್ರಂಥಗಳು, ೧೪ ದಿನಪತ್ರಿಕೆಗಳು ಹಾಗೂ ೧೨ ನಿಯತಕಾಲಿಕೆಗಳು ಲಭ್ಯವಿರುತ್ತವೆ. ಯಳಂದೂರು ಪಟ್ಟಣ ಪಂಚಯತಿ ಗ್ರಂಥಾಲಯದಲ್ಲಿ ೧೪,೦೦೦ ಗ್ರಂಥಗಳು, ಎಂಟು ದಿನ ಪತ್ರಿಕೆಗಳು ಹಾಗೂ ಒಂಭತ್ತು ನಿಯತಕಾಲಿಕೆಗಳು ಲಭ್ಯವಿದ್ದರೆ, ಹನೂರಿನ ಪಟ್ಟಣಪಂಚಾಯ್ತಿ ಗ್ರಂಥಾಲಯದಲ್ಲಿ ೯,೦೦೦ ಗ್ರಂಥಗಳೂ, ಐದು ದಿನ ಪತ್ರಿಕೆಗಳು ಹಾಗೂ ನಾಲ್ಕು ನಿಯತಕಾಲಿಕೆಗಳು ಲಭ್ಯವಿವೆ.

**ಗ್ರಾಮೀಣ ಪಂಚಾಯತಿ ಗ್ರಂಥಾಲಯ:** ಗ್ರಾಮೀಣ ಪ್ರದೇಶದ ಜನರಿಗೆ ವಾಚನಾಲಯ ಸೌಲಭ್ಯ ಒದಗಿಸಿ ಅವರಲ್ಲಿ ಓದುವ ಹವ್ಯಾಸ ಬೆಳೆಸಿ, ತನ್ಮೂಲಕ ಸಾಕ್ಷರತೆಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರತೀ ಗ್ರಾಮ ಪಂಚಾಯತಿ ಕೇಂದ್ರಕ್ಕೆ ಒಂದು ಗ್ರಂಥಾಲಯ ತೆರೆಯುವ ಯೋಜನೆಯನ್ನು ಸರಕಾರ ೧೯೮೭–೮೮ರಲ್ಲಿ ಜಾರಿಗೆ ತಂದಿತು.

ಇದರಂತೆ ಚಾಮರಾಜನಗರ ಜಿಲ್ಲೆಯಲ್ಲಿ ೧೧೯ ಕೇಂದ್ರಗಳಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಸುವರ್ಣ ಕರ್ನಾಟಕ ವರ್ಷದಲ್ಲಿ ರಾಜ್ಯದಲ್ಲಿ ಒಟ್ಟು ೨,೪೯೩ ಗ್ರಾಮ ಪಂಚಾಯತಿ ಗ್ರಂಥಾಲಯಗಳು ಪ್ರಾರಂಭಗೊಂಡು, ಈ ಪೈಕಿ ಚಾಮರಾಜನಗರ ಜಿಲ್ಲೆಯಲ್ಲಿ ೪೭ ಗ್ರಂಥಾಲಯಗಳಿರುತ್ತವೆ. ೨೦೦೬ರ ಕರ್ನಾಟಕ ಗ್ರಾಮ ಪಂಚಾಯತಿಗಳು (ಆಡಳಿತಾತ್ಮಕ ಹಾಗೂ ತಾಂತ್ರಿಕ) ನಿಯಮಗಳ ಅಡಿಯಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯ ಅಭಿವೃದ್ಧಿ ಹಾಗೂ ಮೇಲ್ವಿಚಾರಣಾ ಸಮಿತಿಯನ್ನು ರಚಿಸಿ, ಗ್ರಾಮೀಣ ಗ್ರಂಥಾಲಯ ವ್ಯವಸ್ಥೆಯನ್ನು ರೂಪಿಸಲಾಗಿದೆ. ೨೦೦೭–೦೮ರಲ್ಲಿದ್ದಂತೆ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿದ್ದ ಗ್ರಾಮ ಪಂಚಾಯತಿ ಗ್ರಂಥಾಲಯಗಳ ಸಂಖ್ಯೆ ಹೀಗಿದ್ದಿತು– ಚಾಮರಾಜನಗರ ತಾಲೂಕು–೪೨; ಕೊಳ್ಳೇಗಾಲ ತಾಲೂಕು–೩೭; ಗುಂಡ್ಲುಪೇಟೆ ತಾಲೂಕು–೩೦ ಹಾಗೂ ಯಳಂದೂರು ತಾಲೂಕು–೧೦.

**ಮಕ್ಕಳ ಸಮುದಾಯ ಕೇಂದ್ರ:** ಮಕ್ಕಳನ್ನು ಗ್ರಂಥಾಲಯದೆಡೆ ಸೆಳೆಯುವ ಉದ್ದೇಶದಿಂದ ಸುವರ್ಣ ಕರ್ನಾಟಕ ವರ್ಷಾಚರಣೆಯ ಸಂದರ್ಭದಲ್ಲಿ ರಾಜ್ಯಾದ್ಯಂತ ಒಟ್ಟು ೨೭ ಮಕ್ಕಳ ಸಮುದಾಯ ಕೇಂದ್ರಗಳು ಸ್ಥಾಪಿತವಾದವು. ಚಾಮರಾಜನಗರ ಜಿಲ್ಲಾ ಕೇಂದ್ರದ ಚಾಮರಾಜೇಶ್ವರ ದೇವಸ್ಥಾನದ ಬಳಿ ಇಂತಹ ಕೇಂದ್ರ ಸ್ಥಾಪನೆಗೊಂಡಿದ್ದು, ಇಲ್ಲಿಗೆ ಮಕ್ಕಳ ಅಭಿರುಚಿಗೆ ತಕ್ಕಂತೆ ೧೫೦೦ ಪುಸ್ತಕಗಳು, ಎರಡು ದಿನಪತ್ರಿಕೆಗಳು

ಹಾಗೂ ೧೪ ಮಕ್ಕಳ ನಿಯತಕಾಲಿಕೆಗಳನ್ನು ಸರಬರಾಜು ಮಾಡಲಾಗುತ್ತದೆ. ಮಕ್ಕಳ ಮನರಂಜನೆಗಾಗಿ ವಿವಿಧ ಆಟಿಕೆಗಳು, ವಿಜ್ಞಾನ, ಭೂಗೋಳ, ಚರಿತ್ರೆ, ಪ್ರೇಕ್ಷಣೀಯ ಸ್ಥಳಗಳು ಮುಂತಾದವುಗಳ ಪಟಗಳನ್ನು ಅಳವಡಿಸಲಾಗಿದೆ. ಗಣಕ ಯಂತ್ರಗಳನ್ನು ಪರಿಚಯಿಸಿ, ತನ್ಮೂಲಕ ಮನರಂಜನೆ ಒದಗಿಸುವ ಸಲುವಾಗಿ ಇಲ್ಲಿ ವಿವಿಧ ಕ್ರೀಡೆಗಳ ಸಿ.ಡಿ.ಗಳು ಲಭ್ಯವಿವೆ. ಈ ಕೇಂದ್ರದಲ್ಲಿ ದಿನನಿತ್ಯ ಸರಿಸುಮಾರು ೨೦೦ ರಿಂದ ೨೫೦ ಮಕ್ಕಳು ಪಠ್ಯ ಹಾಗೂ ಪಠ್ಯೇತರ ಮಾಹಿತಿ ಪಡೆಯುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಸಾರ್ವಜನಿಕರಲ್ಲಿ ಗ್ರಂಥಾಲಯದ ಉಪಯೋಗದ ಬಗ್ಗೆ ಅರಿವು ಮೂಡಿಸಲು ಪ್ರತೀ ನವೆಂಬರ್ ೧೪ ರಿಂದ ೨೧ರ ವರೆಗೆ ಗ್ರಂಥಾಲಯ ಸಪ್ತಾಹವನ್ನು ಆಚರಿಸಲಾಗುತ್ತದೆ.

***ಖಾಸಗಿ ವಸ್ತು ಸಂಗ್ರಹಾಲಯ:*** ಚಾಮರಾಜನಗರದ ಮನೋಹರ ನಾಯಕ್ ಅವರು ನಾಲ್ಕು ದಶಕಗಳಿಂದ. ಸುಮಾರು ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಮೂರು ಶತಮಾನಗಳಷ್ಟು ಪುರಾತನ ವಸ್ತುಗಳನ್ನು ಸಂಗ್ರಹಿಸಿರುತ್ತಾರೆ. ಇವುಗಳಲ್ಲಿ ಕಂಚು, ಹಿತ್ತಾಳೆ, ಬೆಳ್ಳಿ, ಕಲ್ಲು, ಬಿದಿರು ಇವುಗಳ ಸಾಮಗ್ರಿಗಳು ಗೋಡೆ ಗಡಿಯಾರಗಳು, ಪ್ರಾಚೀನ ರೇಡಿಯೋಗಳು, ಕ್ಯಾಮೆರಾಗಳು, ದೇಶವಿದೇಶಗಳ ನಾಣ್ಯಗಳು, ಸ್ಟ್ಯಾಂಪ್‌ಗಳು, ಅಪೂರ್ವ ದೀಪದ ಕಂಬಗಳು, ವಿವಿಧ ರೀತಿಯ ಅಳೆಯುವ ಸಾಧನಗಳು ಇತ್ಯಾದಿ ಸೇರಿರುತ್ತವೆ. ಇವಲ್ಲದೆ ೧,೭೫,೦೦೦ ಸ್ಟ್ಯಾಂಪ್‌ಗಳು ಮತ್ತು ೩೨ ಕೆ.ಜಿ ವಿವಿಧ ದೇಶದ ನಾಣ್ಯಗಳೂ ಸೇರಿರುತ್ತವೆ.

## ಕ್ರೀಡೆ

ಮೈಸೂರು ಜಿಲ್ಲೆಯ ಭಾಗವಾಗಿ ಪರಿಗಣಿಸಿದಾಗ, ಚಾಮರಾಜನಗರ ಜಿಲ್ಲೆಯ ಕ್ರೀಡಾ ರಂಗ ವಿಭಿನ್ನವಾಗಿರದೆ, ಅಲ್ಲಿದ್ದಂತೆ ಇಲ್ಲಿಯೂ ಸಹ ಹಲವಾರು ಪಾರಂಪರಿಕ ಹಾಗೂ ಸ್ಥಳೀಯ ಕ್ರೀಡೆಗಳು ಆಡಲ್ಪಡುತ್ತಿದ್ದುದು ಗೋಚರವಾಗುತ್ತದೆ. ರಾಜ್ಯದ ಎಲ್ಲೆಡೆ ಕಾಣಬರುವಂತೆ ಜಾಗತಿಕ ಕ್ರೀಡಾ ಪ್ರಭಾವದಿಂದ ಈ ಕ್ರೀಡೆಗಳ ಅಸ್ತಿತ್ವ ಹಾಗೂ ಬೆಳವಣಿಗೆಗಳಿಗೆ ಯಾವುದೇ ಬಾಧಕವಾಗಿರುವುದಿಲ್ಲ. ಐತಿಹಾಸಿಕ ದಾಖಲೆಗಳಿಂದ ತಿಳಿದುಬರುವಂತೆ, ಮಲ್ಲಯುದ್ಧ, ಮುಷ್ಟಿಯುದ್ಧ, ಕತ್ತಿವರಸೆ, ಬೇಟೆಯಾಡುವುದು, ಬಿಲ್ಲುವಿದ್ಯೆ, ಗದಾಯುದ್ಧ, ಇವು ಹೊರಾಂಗಣ ಕ್ರೀಡೆಗಳಾದರೆ, ಪಗಡೆಯಾಟ, (ದ್ಯೂತ), ಚೌಕಾಬಾರ ಮುಂತಾದವು ಎಲ್ಲಾ ವಯಸ್ಸಿನವರೂ ಆಡುವ ಒಳಾಂಗಣ ಕ್ರೀಡೆಗಳಾಗಿದ್ದವು. ಚಾಮರಾಜನಗರ ಜಿಲ್ಲೆಯಲ್ಲಿ ಕುಸ್ತಿಯ ಪರಂಪರೆ ಇದ್ದಿತು. ಆಧುನಿಕ ಕ್ರೀಡೆಯಾದ ಖೊ ಖೊ ಜನಪ್ರಿಯವಾಗಿದ್ದಿತು. ಇದಲ್ಲದೆ ದೊಣ್ಣೆವರಸೆ, ಕತ್ತಿವರಸೆ, ಬೆಂಕಿವರಸೆ ಮುಂತಾದ ಕ್ರೀಡೆಗಳನ್ನು, ಅವುಗಳ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರೆಂದು ಜಿಲ್ಲೆಯ ಪ್ರಥಮ ಐ.ಐ.ಎಸ್., ಅಧಿಕಾರಿ ಪಿ.ಎಸ್.ರಾಮಾನುಜಂ ಅಭಿಪ್ರಾಯಪಡುತ್ತಾರೆ. ಕುಸ್ತಿ ವಿಭಾಗದ ಕ್ರೀಡೆಯಲ್ಲಿ ಸಿ.ವಿ. ರಾಮನ್ ಹಾಗೂ ಸಿ.ಎ. ನಾಗಪ್ಪ ಪ್ರಮುಖ ಕುಸ್ತಿ ಪಟುಗಳಾಗಿದ್ದರು. ತಮ್ಮ ಕೃಷಿ ಜೀವನದ ಮಧ್ಯೆ ದೊರೆಯುತ್ತಿದ್ದ ವಿರಾಮ ಕಾಲದಲ್ಲಿ ಬಯಲಾಟಗಳೂ ನಡೆಯುತ್ತಿದ್ದವು. ಶೌರ್ಯ ಪ್ರದರ್ಶನದ ತಳಹದಿ ಹೊಂದಿದ್ದ ಜಾನಪದ ಕ್ರೀಡೆಗಳು ಜೀವಂತವಾಗಿದ್ದವು ಇವುಗಳಲ್ಲದೆ ಜನ ತಮ್ಮ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ವ್ಯಾಯಾಮ, ಗರಡಿ, ಸಾಮು, ಸೂರ್ಯ ನಮಸ್ಕಾ ಇತ್ಯಾದಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದು, ವಯಸ್ಸಿನ ಭೇಧವಿಲ್ಲದೇ ದಿನ ನಿತ್ಯ ಬೆಳಗ್ಗೆ ಸುಮಾರು ಒಂದರಿಂದ ಎರಡು ಗಂಟೆಯ ಕಾಲ ಕ್ಷಿಪ್ರವಾಗಿ ನಡೆಯುವುದು ಎಲ್ಲೆಡೆ ಕಂಡುಬರುವ ಸಾಮಾನ್ಯ ದೃಶ್ಯ. ಮಕ್ಕಳ ಕ್ರೀಡೆಗಳಾದ ಕುಂಟೆ–ಬಿಲ್ಲೆ, ಗಿಲ್ಲಿ–ದಾಂಡು, ಮರಕೋತಿಯಾಟ, ಕಲ್ಲೋ–ಮಣ್ಣೋ, ಐಸ್ಪೈಸ್ ಮುಂತಾದವು ಎಲ್ಲೆಡೆ ಕಂಡುಬರುತ್ತವೆ. ಗ್ರಾಮೀಣ ಕ್ರೀಡೆಗಳ ಪೈಕಿ ಹುಂಜನ ಕಾಳಗ (ಕೋಳಿ ಅಂಕದಂತೆ)

ಹಲವೆಡೆ ಕಂಡುಬರುತ್ತದೆ. ನೂತನ ಕ್ರೀಡೆಗಳಾದ ಕ್ರಿಕೆಟ್, ವಾಲಿಬಾಲ್, ಫುಟ್‌ಬಾಲ್, ಖೊಖೊ, ಈಜು, ಹಾಕಿ, ಟೆನ್ನಿಕಾಯ್ಟ್, ಇಂತಹವು ನಗರೀಕೃತ ಭಾಗಗಳಲ್ಲಿ ಕಂಡುಬರುತ್ತದೆ. ಜನಸಾಮಾನ್ಯರೂ ಸಹ ಈಚಿನ ದಿನಗಳಲ್ಲಿ ತಮ್ಮ ಆರೋಗ್ಯದ ಬಗ್ಗೆ ಜಾಗರೂಕರಾಗಿದ್ದು, ತಂತಮ್ಮ ಶರೀರ, ಸಮಯ, ಅನುಕೂಲಗಳಿಗೆ ತಕ್ಕಂತೆ ಹಲವಾರು ಹೊರಾಂಗಣ ಕ್ರೀಡೆಗಳನ್ನು ಆಡುತ್ತಾರೆ ಅಥವಾ ಕನಿಷ್ಠ ದಿನನಿತ್ಯ 'ವಾಕಿಂಗ್' ಮಾಡುತ್ತಾರೆ.

ಯುವಕರಲ್ಲಿ, ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವ ಬೆಳೆಸಲು ಸರಕಾರ ಮುಂದಾಗಿದ್ದು, ಇದಕ್ಕಾಗಿ ಒಬ್ಬ ಜಿಲ್ಲಾ ಯುವಜನ ಮತ್ತು ಕ್ರೀಡಾಧಿಕಾರಿಯ ನೇತೃತ್ವದಲ್ಲಿ ೧೯೯೮ರಲ್ಲಿ ಚಾಮರಾಜನಗರದಲ್ಲಿ ಒಂದು ಇಲಾಖೆಯನ್ನು ಸ್ಥಾಪಿಸಲಾಗಿದೆ. ಈ ಇಲಾಖೆ ಹಲವಾರು ಕ್ರೀಡಾ ಚಟುವಟಿಕೆಗಳನ್ನು ವೈಜ್ಞಾನಿಕ ಚೌಕಟ್ಟಿನಲ್ಲಿ ನಡೆಸುತ್ತಿದೆ. ಇದಕ್ಕಾಗಿ ನುರಿತ ತರಬೇತುದಾರರನ್ನು ನೇಮಿಸಿಕೊಂಡು, ಆಟಗಾರರಿಗೆ ಸಕಲ ಸೌಲಭ್ಯಗಳನ್ನು ಒದಗಿಸಿ, ಅವರುಗಳು ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ತರಬೇತಿ ನೀಡುತ್ತದೆ.ನಗರ ಪ್ರದೇಶಗಳಲ್ಲಿ ಬೆಟ್ಟ ಹತ್ತುವ, ಶಿಲಾರೋಹಣ ಮಾಡುವ ಹಾಗೂ ಚಾರಣ ಮಾಡುವ ಹೊರಾಂಗಣ ಕ್ರೀಡೆಗಳು ಇತ್ತೀಚೆಗೆ ಜನಪ್ರಿಯತೆ ಪಡೆಯುತ್ತಿದ್ದು, ಇವುಗಳಿಗಾಗಿ ಖಾಸಗಿ ಸಂಸ್ಥೆಗಳೂ ತರಬೇತಿ ನೀಡುತ್ತಿವೆ. ಮೊದಲೆರಡು ಕ್ರೀಡೆಗಳನ್ನು ಜಿಲ್ಲಾ ಕ್ರೀಡಾ ಇಲಾಖೆಯೇ ನಡೆಸುತ್ತಿದ್ದು, ಇದರಲ್ಲಿ ಹಲವಾರು ಮಂದಿ ಭಾಗವಹಿಸಿರುತ್ತಾರೆ. ಇಲಾಖೆಯಿಂದ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಲು ಇತರೆಡೆಗಳಿಗೆ ಕಳುಹಿಸಲ್ಪಟ್ಟ ಕ್ರೀಡಾಪಟುಗಳ ಹೆಸರುಗಳನ್ನು ಅವರು ಭಾಗವಹಿಸಿದ ಕ್ರೀಡೆಗಳ ವಿವರ ಹಾಗೂ ಆಯಾ ಕ್ರೀಡೆಗಳಲ್ಲಿ ಪಡೆದಿರುವ ಸ್ಥಾನ(ಬಹುಮಾನ)ಗಳ ವಿವರಗಳನ್ನು ಈ ಮುಂದೆ ನೀಡಿದೆ:– ಬಿಎಜೆ ಸದಾನಂದ–ಮಹಾರಾಷ್ಟ್ರದ ದೋಲೆಯಲ್ಲಿ ನಡೆದ ೫೨ನೇ ರಾಷ್ಟ್ರೀಯ ಬಾಲ್‌ಬಾಡ್ಮಿಂಟನ್–ದ್ವಿತೀಯ ಸ್ಥಾನ; ಸಿ.ರಾಜೇಶ್ವರಿ–ಹುಬ್ಬಳ್ಳಿಯಲ್ಲಿ ಜರುಗಿದ ರಾಜ್ಯ ಕ್ರೀಡಾ ಸ್ಪರ್ಧೆಯಲ್ಲಿ ಎತ್ತರ ಜಿಗಿತ, ಉದ್ದ ಜಿಗಿತ, ಪ್ರಥಮ ಸ್ಥಾನ ಮತ್ತು ಜಾವೆಲಿನ್ ಥ್ರೋ ನಲ್ಲಿ ದ್ವಿತೀಯ ಸ್ಥಾನ; ಎಸ್.ವಿ. ಸುಭಾಷ್‌ಚಂದು–ವಿಶಾಖಪಟ್ಟಣದಲ್ಲಿ ನಡೆದ ರಾಜ್ಯ ಮಟ್ಟದ ಖೊಖೊದಲ್ಲಿ ಪ್ರಥಮ ಸ್ಥಾನ ಮತ್ತು ರಾಷ್ಟ್ರಮಟ್ಟದಲ್ಲಿ ತೃತೀಯ ಸ್ಥಾನ; ಎಂ. ರವಿಕುಮಾರ್–ವಿಶಾಖಪಟ್ಟಣದಲ್ಲಿ ನಡೆದ ಖೊಖೊ ಪಂದ್ಯದಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮ, ರಾಷ್ಟ್ರ ಮಟ್ಟದಲ್ಲಿ ತೃತೀಯ ಸ್ಥಾನ; ಆರ್. ಕುಮಾರ್–ಮೇಲ್ಕಂಡದಲ್ಲಿ ನಡೆದ ಖೊಖೊದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ, ರಾಷ್ಟ್ರ ಮಟ್ಟದಲ್ಲಿ ತೃತೀಯ ಸ್ಥಾನ; ಎಂ.ಮಹದೇವ ಪ್ರಭು–ಮೇಲ್ಕಂಡದಲ್ಲಿ ನಡೆದ ಖೊಖೊದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಮತ್ತು ರಾಷ್ಟ್ರ ಮಟ್ಟದಲ್ಲಿ ತೃತೀಯ ಸ್ಥಾನ; ಎ. ಪ್ರಸಾದ್–ಮೇಲ್ಕಂಡದಲ್ಲಿ ನಡೆದ ಖೊ ಖೊ ದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಮತ್ತು ರಾಷ್ಟ್ರ ಮಟ್ಟದಲ್ಲಿ ತೃತೀಯ ಸ್ಥಾನ; ಡಿ. ಮಲ್ಲೇಶ್–ಚನ್ನೈನಲ್ಲಿ ನಡೆದ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಸ್ಥಾನ; ಆರ್. ಶಿವಪ್ರಸಾದ್–ಹುಬ್ಬಳ್ಳಿಯಲ್ಲಿ ನಡೆದ ಬಾಲ್‌ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಹಾಗೂ ನಾಲ್ಕನೇ ಸ್ಥಾನ; ಬಿ. ಸುದರ್ಶನ್– ಚನ್ನೈನಲ್ಲಿ ನಡೆದ ಬಾಲ್‌ಬ್ಯಾಡ್ಮಿಂಟನ್ ಪ್ರಥಮ ಸ್ಥಾನ; ಕು॥ ಶಾಂಭವಿ ಪೂನಾದಲ್ಲಿ ನಡೆದ ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಹಾಗೂ ಪಿ. ಸುರೇಶ್–ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಮ್ಯಾರಥಾನ್‌ನಲ್ಲಿ ೨೬ನೇ ಸ್ಥಾನಪಡೆದು ರಾಜ್ಯಮಟ್ಟದ ಬೆಟ್ಟ ಹತ್ತುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಮೈಸೂರಿನಲ್ಲಿ ನಡೆದ ವಾಯು ಸಾಹಸ ಮತ್ತು ಶಿಲಾರೋಹಣ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ.

ಇವರಲ್ಲದೆ, ಜಿಲ್ಲೆಯ ಸುರೇಶ್. ಎನ್. ಋಗ್ವೇದಿ ೨೦೦೦–೦೧ರಲ್ಲಿ ನ್ಯಾಷನಲ್ ಯೂಥ್ ಆ್ಯಕ್ಟಿವಿಟೀಸ್ ಅವಾರ್ಡ್ ಪಡೆದಿದ್ದರೆ, ಸಿ. ಎಂ. ನರಸಿಂಹಮೂರ್ತಿ, ಎಸ್. ಬಿ. ನಾಗರಾಜ ಮತ್ತು ಜಿ. ರಾಜಪ್ಪ ಇವರು ಸ್ಟೇಟ್ ಯೂಥ್ ಅವಾರ್ಡ್ ಪಡೆದಿರುತ್ತಾರೆ.

೨೦೧೦-೧೧ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಲ್ಲಿ ಕ್ರೀಡಾ ವಸತಿ ನಿಲಯಕ್ಕೆ ₹ ಆರು ಲಕ್ಷ ಅನುದಾನ ನೀಡಲಾಗಿದ್ದು, ೨೫ ವಿದ್ಯಾರ್ಥಿಗಳು ಕ್ರೀಡಾ ವಸತಿ ನಿಲಯದಲ್ಲಿ ಪ್ರವೇಶ ಪಡೆದಿರುತ್ತಾರೆ. ಸದರಿ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳು, ಕ್ರೀಡಾ ಸಾಮಗ್ರಿಗಳು, ದೈನಂದಿನ ಚಟುವಟಿಕೆಗಳಿಗೆ ಬೇಕಾಗುವ ಸ್ನಾನದ ಹಾಗೂ ಬಟ್ಟೆ ಸೋಪ್‌ಗಳು, ಪೇಸ್ಟ್, ಕೊಬ್ಬರಿಎಣ್ಣೆ, ಹಾಸಿಗೆ-ಹೊದಿಕೆಗಳನ್ನು ನೀಡಲಾಗುತ್ತಿದ್ದು, ನುರಿತ ಅಧ್ಯಾಪಕರಿಂದ ಟ್ಯೂಷನ್ ವ್ಯವಸ್ಥೆ ಕಲ್ಪಿಸಲಾಗಿದ್ದು, ನುರಿತ ತರಬೇತುದಾರರದಿಂದ ಪುಟ್‌ಬಾಲ್ ಹಾಗೂ ವಾಲಿಬಾಲ್ ಕ್ರೀಡೆಗಳಲ್ಲಿ ತರಬೇತಿ ನೀಡಲಾಗುತ್ತಿದೆ ಹಾಗೂ ಕ್ರೀಡಾ ಶಾಲೆಯಿಂದ ಕ್ರೀಡಾಂಗಣಕ್ಕೆ ಹೋಗಿ ಬರಲು ಆಟೋ ವ್ಯಸ್ಥೆಯನ್ನು ಕಲ್ಪಿಸಲಾಗಿದೆ.

೨೦೧೧-೧೨ನೇ ಸಾಲಿನಲ್ಲಿ ₹ ೧೫ಲಕ್ಷ ಬಿಡುಗಡೆಯಾಗಿದ್ದು, ಜಿಲ್ಲಾ ಮಟ್ಟದ ದಸರಾ ಗ್ರಾಮೀಣ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಸ್ಪರ್ಧಾಳುಗಳಿಗೆ ಇಲಾಖಾ ವತಿಯಿಂದ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಯನ್ನು ನೀಡಲಾಗಿದೆ. ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಜಿಲ್ಲೆಯ ೨೫ ಜನ ಸ್ಪರ್ಧಾಳುಗಳು ಭಾಗವಹಿಸಿದ್ದು, ಸದರಿಯವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಇಲಾಖಾವತಿಯಿಂದ ನೀಡಲಾಗಿದೆ. ಜಿಲ್ಲಾಮಟ್ಟದ ಯುವ ಮುಂದಾಳತ್ವ ತರಬೇತಿ ಶಿಬಿರ ಹಾಗೂ ಸಾಹಸಕ್ರೀಡೆಗಳಾದ ಚಾರಣ ಕಾರ್ಯಕ್ರಮ ಪ್ಯಾರಾಸೈಲಿಂಗ್, ರಾಕ್ ಕ್ಲೈಂಬಿಂಗ್, ಜಲಸಾಹಸ ಕ್ರೀಡೆಗಳಲ್ಲಿ ೫೦೦ ಮಂದಿ ಭಾಗವಹಿಸಿದ್ದು, ಎಲ್ಲಾ ಸ್ಪರ್ಧಾಳುಗಳಿಗೂ ಇಲಾಖಾವತಿಯಿಂದ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ನೀಡಲಾಗಿದೆ ಹಾಗೂ ಜಿಲ್ಲಾಮಟ್ಟದ ಯುವಜನ ಮೇಳದಲ್ಲಿ ವಿಜೇತರಾಗಿ ವಿಭಾಗಮಟ್ಟದಲ್ಲಿ ಭಾಗವಹಿಸುವ ಕಲಾವಿದರಿಗೆ ಸಂಗೀತ ಸಾಮಗ್ರಿಗಳು ಮತ್ತು ಉಡುಪುಗಳನ್ನು ಹಾಗೂ ಜಿಲ್ಲೆಯ ಶಾಲಾಕಾಲೇಜುಗಳಿಗೆ ಮತ್ತು ಇಲಾಖೆಯಲ್ಲಿ ನೋಂದಾಯಿತ ಯುವ ಸಂಘಗಳಿಗೆ ಕ್ರೀಡಾ ಸಾಮಗ್ರಿಗಳನ್ನು ನೀಡಲಾಗಿದೆ. ಜಿಲ್ಲೆಯ ಹಾಗೂ ತಾಲೂಕು ಕ್ರೀಡಾಂಗಣಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ₹ ೧೦ ಲಕ್ಷದ ಅನುದಾನ ಲಭ್ಯವಿದ್ದು, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಹನೂರಿನ ಮತ್ತು ಗುಂಡ್ಲುಪೇಟೆ ತಾಲೂಕಿನ ಕ್ರೀಡಾಂಗಣಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಉಪಯೋಗಿಸಲಾಗಿದೆ. ಜಿಲ್ಲೆಯಲ್ಲಿನ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಹಾಗೂ ಕುಸ್ತಿಪಟುಗಳ ಸಹಾಯಾರ್ಥವಾಗಿ ₹ ಒಂದು ಲಕ್ಷಗಳ ಅನುದಾನ ಲಭ್ಯವಿದ್ದು, ಐದು ಮಂದಿ ಕ್ರೀಡಾಪಟುಗಳಿಗೆ ಜಿಲ್ಲಾ ಖಜಾನೆಯ ಮುಖಾಂತರ ಮಾಸಾಶನವನ್ನು ನೀಡಲಾಗುತ್ತಿದೆ.

*****